ತಿರುಮಲ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಜೂನ್ 2020 ಬೆಲೆ ರೂ. 5/-

ಉಭಯದೇವಿಯರೊಂದಿಗೆ
ಶ್ರೀ ಕಲ್ಯಾಣವೆಂಕಟೇಶ್ವರ ಸ್ವಾಮಿಯವರು
ಶ್ರೀನಿವಾಸಮಂಗಾಪುರಂ




# ತಿರುಮಲೆ ಸ್ವಾಮಿಯವರಿಗೆ
# ಆಲಯದಲ್ಲಿ ನಡೆದ
# ಜ್ಯೇಷ್ಠಾಭಿಷೇಕ ದೃಶ್ಯಗಳು

















ದಯ ಮಾಡೋ ರಂಗ ದಯ ಮಾಡೋ ಕೃಷ್ಣ

ದಯ ಮಾಡೋ ನಿನ್ನ ದಾಸನು ನಾನೆಂದು

ಹಲವು ಕಾಲದಿ ನಿನ್ನ ಹಂಬಲವೆನಗೆ

ಒಲಿದು ಪಾಲಿಸಬೇಕೋ ವಾರಿಜನಾಭ


ಇಹ ಪರ ಗತ ನೀನೇ ಇಂದಿರಾ ರಮಣ

ಸಹಾಯ ನಿನ್ನದೇ ಸದಾ ತೋರಿ ಕರುಣ

ಕರಿರಾಜ ವರದನೇ ಕಾಮಿತ ಫಲದನೇ

ಪುರಂದರ ವಿಠಲನೇ ಹರಿ ಸಾರ್ವಭೌಮನೇ

- ಶ್ರೀ ಪುರಂದರದಾಸರು



## ಭಗವದ್ಗೀತೆ

ಅಯನೇಷು ಚ ಸರ್ವೇಷು

ಯಥಾಭಾಗಮ ವಸ್ಥಿತಾಃ।

ಭೀಷ್ಮಮೇವಾ ಭಿರಕ್ಷುತು

ಭವಂತಃ ಸರ್ವ ಏನ ಹಿ ॥

(ಶ್ರೀ ಮದ್ಭಗವದ್ಗೀತೆ - 1, ಶ್ಲೋಕ -11)

ನೀವೆಲ್ಲರೂ ದಂಡಿನ ಬೇರೆ ಬೇರೆ ಮಾರ್ಗಗಳಲ್ಲಿ ನಿಮ್ಮ ನಿಮ್ಮ ಪಾಲಿಗೆ ಬಂದ ಕಡೆ ಇದ್ದು ಕೊಂಡು ಭೀಷ್ಮನನ್ನು ರಕ್ಷಿಸಿರಿ.

(ಐದನೆಯ ದಶಕ)

# ದಯಾ ಶತಕಮ್



- ಎನ್. ನರಸಿಂಹಾಚಾರ್ಯ

**ಸಾರಂ ಲಬ್ಧ್ವಾ ಕಮಪಿ ಮಹತಃ ಶ್ರೀನಿವಾಸಾಂಬುರಾಶೇಃ ಕಾಲೇ ಕಾಲೇ ಘನರಸವತೀ ಕಾಲಿಕೇವಾನುಕಂಪೇ।**

**ವ್ಯಕ್ತೋನ್ಮೇಷಾ ಮೃಗಪತಿಗಿರೌ ವಿಶ್ವಮಾಪ್ಯಾಯಯಂತೀ ಶೀಲೋಪಜ್ಞಂ ಕ್ಷರತಿ ಭವತೀ ಶೀತಲಂ ಸದ್ಗುಣೌಘಮ್ ॥ ೪೫॥**

ಹಿಂದಿನ ಪದ್ಯದಲ್ಲಿ ದಿವ್ಯಾತ್ಮಸ್ವರೂಪಾನುಭವವು ಹೇಳಲ್ಪಟ್ಟಿತು. ಈ ಪದ್ಯದಲ್ಲಿ ದಹರವಿದ್ಯಾನ್ಯಾಯದಿಂದ ದಿವ್ಯಾತ್ಮ ಸ್ವರೂಪಾನುಭವಾನಂತರ ಭಾವಿಯಾದ ದಿವ್ಯಗುಣಾನುಭವವು ವರ್ಣಿಸಲ್ಪಡುವುದು.

ಇಲ್ಲಿ ದಯಾದೇವಿಯನ್ನು ಅದ್ಭುತವಾಗಿ ಮಳೆಯನ್ನು ಸುರಿಸುವ ಮೇಘಮಾಲೆಯಂತೆ ಚಿತ್ರಿಸಿರುತ್ತಾರೆ. ಮೇಘವು ಉಪ್ಪುಸಮುದ್ರದಿಂದ ಸಾರವಾದ ಶುದ್ಧಜಲವನ್ನು ತೆಗೆದು ತುಂಬಿಕೊಂಡು, ಸಿಂಹವೇ ಮೊದಲಾದ ಭಯಂಕರ ಮೃಗಗಳು ವಾಸ ಮಾಡುವಂತಹ ಮಲೆಯ ಮೇಲ್ಭಾಗದಲ್ಲಿ ಬಂದುದಿಸಿ, ಸಮಸ್ತರಿಗೂ ಮಹಾನಂದವನ್ನುಂಟುಮಾಡಿ, ತಾನು ಯಾವುದೊಂದು ವಿಧವಾದ ಪ್ರತಿಫಲವನ್ನೂ ನಿರೀಕ್ಷಿಸದೆ ಸ್ವಾಭಾವಿಕವಾಗಿಯೇ ವಿಶೇಷವಾಗಿ ಮಳೆಯನ್ನು ಸುರಿಸಿ ಸರ್ವಲೋಕಗಳನ್ನೂ ಸ್ನಾನಪಾನಾದಿಗಳಿಂದಲೂ, ಪೈರುಪಚ್ಚೆಯೇ ಮೊದಲಾದ ಔಷಧಿಗಳ ಅಭಿವರ್ಧನದಿಂದಲೂ ಪರಮಕ್ಷೇಮವನ್ನು ಹೊಂದುವಂತೆ ಹೇಗೆ ಮಾಡುವುದೋ, ಹಾಗೆಯೇ ಈ ದಯಾದೇವಿಯೂ ಕೂಡ ಶ್ರೀನಿವಾಸನೆಂಬ ಸಮುದ್ರದಿಂದ ಸಾರವಾದ ಗುಣಗಳನ್ನು ತೆಗೆದುಕೊಂಡು-ಅಂದರೆ, ತನಗೆ ಉಪಕರಣವಾಗಿ ಮಾಡಿಕೊಂಡು ಸಿಂಹಾಚಲವೆಂಬ ತಿರುಮಲೆಗೆ ಬಂದು ಸಮಸ್ತರ ಕಣ್ಣಿಗೂ ಗೋಚರವಾಗುವಂತೆ ನಿಂತು ಮೇಲುಕೀಳೆಂಬ ಭೇದಭಾವವಿಲ್ಲದಂತೆ ಸಮಸ್ತರೂ ಕ್ಷೇಮವನ್ನು ಪಡೆಯುವಂತೆ ಭಗವಂತನ ಸೌಶೀಲ್ಯವೇ ಮೊದಲಾದ ಕಲ್ಯಾಣಗುಣಗಳನ್ನು ವರ್ಷಿಸುವಳೆಂಬ ಅನುಭವವನ್ನು ಪ್ರದರ್ಶಿಸುತ್ತಾರೆ. ದಯೆಯು ಗುಣಗಳನ್ನು ವರ್ಷಿಸುವುದೆಂದರೇನು? ಎಂದರೆ, ಭಗವಂತನಲ್ಲಿರುವ ಕಲ್ಯಾಣಗುಣಗಳನ್ನು ಮಹಾಪಾಪಿಯಾದ ಚೇತನನ ಉಜ್ಜೀವನ ವಿಷಯದಲ್ಲಿ ಉಪಯೋಗವಾಗುವಂತೆ ಮಾಡುವುದೇ. ದಯಾದೇವಿಯಿಲ್ಲದಿದ್ದರೆ ಈ ಗುಣಗಳು ದೋಷಗಳಾಗುವುವೆಂದು ಹಿಂದೆಯೇ ನಿರೂಪಿಸಿದೆಯಷ್ಟೆ. ಈ ಕಲ್ಯಾಣ ಗುಣಗಳಲ್ಲಿ ಶೀಲವೆಂಬ ಸೌಶೀಲ್ಯವು ಅತ್ಯಂತ ಶ್ರೇಷ್ಠವಾದುದೆಂದು ಆಚಾರ್ಯರ ಅಭಿಪ್ರಾಯ.ಅದಾದರೋ "ಮಹತೋ ಮಂದೈಸ್ಸಹ ನೀರಂಧ್ರ ಸಂಶ್ಲೇಷಃ" ಅಂದರೆ, ಅತ್ಯಂತ ಶ್ರೇಷ್ಠನಾದವನು ಅತ್ಯಂತ ನಿಕೃಷ್ಟನಾದವನೊಡನೆ ಪರಸ್ಪರ ಕಲೆತಿರುವಿಕೆ. ಈ ಗುಣವು ನಮ್ಮಂತಹವರಲ್ಲಿ ಉಪಯೋಗಪಟ್ಟು ನಾವು ಕ್ಷೇಮದಿಂದಿರಬೇಕಾದರೆ ದಯಾದೇವಿಯ ಪ್ರಯತ್ನವು ಅತ್ಯಂತ ಅವಶ್ಯಕವಾದುದು. ಅಂದರೆ, ಭಗವಂತನು ಪರಮದಯೆಯಿಂದಲೇ ಪರಮನಿಕೃಷ್ಟರಾದ ನಿಷಾಧ (ಗುಹ) ಗೋಪಿಕಾದಿ ಗಳೊಡನೆ ಸೇರಿರುವನಲ್ಲವೆ! ಇದನ್ನೇ ದಯಾದೇವಿಯು ಗುಣಗಳನ್ನು ವರ್ಷಿಸುವಳೆಂದು ಹೇಳುವುದು. ಆದ್ದರಿಂದ ಸಮುದ್ರದಲ್ಲಿ ಅಪರಿಮಿತವಾಗಿ ನೀರಿದ್ದರೂ ನಮ್ಮ ಉಪಯೋಗಕ್ಕೆ ಅನುಕೂಲಿಸುವಂತೆ ಶುದ್ಧಿಗೊಳಿಸಿ ನಮಗೆ ದೊರಕುವಂತೆ ಮಾಡುವುದು ಮೇಘವೇ ಅಲ್ಲವೇ? ಆ ಮೇಘ ವಿಲ್ಲದಿದ್ದರೆ ಆ ನೀರನ್ನು ನಾವು ಉಪಯೋಗಿಸುವಂತೆಯೇ ಇಲ್ಲ. ಹಾಗೆಯೇ ದಯೆಯಿಲ್ಲದಿದ್ದರೆ ಭಗವಂತನ ಕಲ್ಯಾಣಗುಣಗಳೂ ನಮ್ಮವರೆಗೂ ಬರಲಾರವೆಂಬ ತತ್ವಾರ್ಥವು ಇಲ್ಲಿ ವಿವಕ್ಷಿತ ವಾದುದು.

ವೇಂಕಟಾದ್ರಿ ಸಮಂ ಸ್ಥಾನಂ ಬ್ರಹ್ಮಾಂಡೇ ನಾಸ್ತಿ ಕಿಂಚನ
ವೇಂಕಟೇಶ ಸಮೋದೇವೋ ನ ಭೂತೋ ನ ಭವಿಷ್ಯತಿ


ತಿರುಮಲೆ ತಿರುಪತಿ ದೇವಸ್ಥಾನಗಳು

# ಸಪ್ತಗಿರಿ

ಸಚಿತ್ರ ಮಾಸಪತ್ರಿಕೆ

ಶ್ರೀ ಶಾರ್ವರಿನಾಮ ಸಂವತ್ಸರ
ಜ್ಯೇಷ್ಠ- ಆಷಾಢ ಮಾಸ ಸಂಚಿಕೆ

ಸಂಪುಟ - 51 ಜೂನ್ 2020 ಸಂಚಿಕೆ - 1



## ವಿಷಯಸೂಚಿಕೆ

| | | |
|---|---|---|
| ಸಂಪಾದಕೀಯ | | 6 |
| ಶ್ವೇತಾಶ್ವತರೋಪನಿಷತ್ | - ಶ್ರೀಮತಿ. ಎ. ಗೀತವೀರರಾಘವನ್ | 7 |
| ಪಾವನ ಗಂಗಾ | - ಡಾ॥ ಗುರುರಾಜ ಪೋಶೆಟ್ಟಿಹಳ್ಳಿ | 10 |
| ಭಗವಂತ ಸಮದರ್ಶಿ | - ಡಿ.ಎಸ್. ಬದ್ರಿನಾಥ್ | 14 |
| ಏನಾದರುಆಗುಮೊದಲುಯೋಗಿಯಾಗು | - ಶ್ರೀಮತಿ. ಸುಮಚಂದ್ರಶೇಖರ್ | 16 |
| ದಾಸಸಾಹಿತ್ಯದ ಪ್ರಸ್ತುತತೆ | - | 19 |
| ಅನ್ನಮಯ್ಯ ಚರಿತ್ರೆ | -ಶ್ರೀಮತಿ. ಬಿ. ಪದ್ಮಜ | 24 |
| ಪ್ರಕೃತಿಮಾತೆ ಪ್ರಸಾದಿಸಿದ ದಿವೌಷಧಿ ಕತ್ತಾಳೆ | - ಶ್ರೀಮತಿ | 31 |
| ಅಕ್ರೂರನ ಭಗವತ್ಪ್ರೇಮ | - ರಾ.ನ.ನ. ಮೂರ್ತಿ | 33 |
| ರಾಷ್ಟ್ರನಿರ್ಮಾಣ ಹರಿದಾಸರು | -ಡಾ॥ ವಾಸುದೇವ ಅಗ್ನಿಹೋತ್ರಿ | 35 |
| ಸಂಸ್ಕೃತ ಕಲಿಯೋಣ! | - ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್ | 38 |
| ಅಸುರಿಗುಣಗಳುಬಂಧಗಳನ್ನುತರುತ್ತದೆ | - ಡಿ. ಎಸ್. ಭೂಮಿಕ | 39 |
| ವಟಸಾವಿತ್ರಿ ವ್ರತ | -ವೆಂಕಟರಾಘವನ್ ಎಸ್. | 41 |
| ಸಂಗೀತವೇ ಸಂಜೀವಿನಿ | - ಶ್ರೀಮತಿ. ಕೆ.ವಿ. ಪದ್ಮಾವತಿ | 45 |
| ಹೃಷೀಕೇಶ್ - ಒಂದು ಪ್ರಮುಖ ದೈವ ಭೂಮಿ | -ಕೆ. ನರಸಿಂಹ ಮೂರ್ತಿ | 50 |

ಮುಖಚಿತ್ರ - ಉಭಯ ದೇವಿಯರೊಂದಿಗೆ ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರು, ಶ್ರೀನಿವಾಸಮಂಗಾಪುರಂ
ಹಿಂಬದಿಚಿತ್ರ - ತಿರುಪತಿ ಶ್ರೀಗೋವಿಂದರಾಜ ಸ್ವಾಮಿಯವರಿಗೆ ನಡೆದ ಪುಷ್ಪಯಾಗ ಮಹೋತ್ಸವ

**ಗೌರವ ಸಂಪಾದಕರು**
ಶ್ರೀ ಅನಿಲ್‌ಕುಮಾರ್ ಸಿಂಘಾಲ್, ಐ.ಎ.ಎಸ್
ಕಾರ್ಯನಿರ್ವಹಣಾಧಿಕಾರಿ,ತಿ.ತಿ.ದೇ.,ತಿರುಪತಿ.

**ಪ್ರಧಾನ-ಸಂಪಾದಕರು**
ಆಚಾರ್ಯ.ಕೆ.ರಾಜಗೋಪಾಲನ್, ಪಿ.ಎಚ್.ಡಿ.

**ಸಂಪಾದಕರು**
ಡಾ॥ ವಿ.ಜಿ.ಚೊಕ್ಕಲಿಂಗಂ, ಎಮ್.ಎ.ಪಿಎಚ್.ಡಿ.

**ಮುದ್ರಣ**
ಶ್ರೀ .ಪಿ. ರಾಮರಾಜು , ಎಮ್.ಎ.
ಉಪಕಾರ್ಯನಿರ್ವಹಣಾಧಿಕಾರಿ,
(ಪ್ರಕಾಶನ ಮತ್ತು ಮುದ್ರಣಾಲಯ),
ತಿ.ತಿ.ದೇ.,ಮುದ್ರಣಾಲಯ,ತಿರುಪತಿ.

**ಡಿ.ಟಿ.ಪಿ.**
ಪ್ರಧಾನ ಸಂಪಾದಕರ -ಕಾರ್ಯಾಲಯ
ತಿ.ತಿ.ದೇ.ತಿರುಪತಿ.

**ಛಾಯಗ್ರಹಣ:**
ಶ್ರೀ ಪಿ.ಎನ್.ಶೇಖರ್,
ಛಾಯಗ್ರಹಣ,ತಿ.ತಿ.ದೇ.
ಶ್ರೀ ಬಿ.ವೆಂಕಟರಮಣ,
ಸಹಾಯ ಛಾಯಗ್ರಹಣ ತಿ.ತಿ.ದೇ.

ಲೇಖನ / ಚಂದಾ ಮಿಕ್ಕ ವಿವರಗಳಿಗೆ
ಪ್ರಧಾನ ಸಂಪಾದಕರು
ತಿ.ತಿ.ದೇವಸ್ಥಾನಗಳು,
ಕೆ.ಟಿ.ರಸ್ತೆ. ತಿರುಪತಿ - 517 507

**ಇತರ ವಿವರಗಳಿಗೆ**
ಕಾರ್ಯಾಲಯ : 0877 - 2264543
ಡಿ.ಟಿ.ಪಿ. ವಿಭಾಗ : 0877 - 2264359
ಸಂಪಾದಕರು : 0877 - 2264360

24x7 ಕೆಲಸ ಮಾಡುವ ದೂರವಾಣಿ ಸಂಖ್ಯೆ
0877 - 2277777, 2233333
ಸಲಹೆ/ದೂರುಗಳಿಗೆ ಟೋಲ್‌ಫ್ರೀ ಸಂಖ್ಯೆ:
1800-425-4141
ಸಲಹೆ/ಸೂಚನೆ/ದೂರುಗಳಿಗಾಗಿ
sapthagiri_helpdesk@tirumala.org

ಸಪ್ತಗಿರಿ ಮಾಸಪತ್ರಿಕೆಯನ್ನು ವೀಕ್ಷಕರು
www.tirumala.org ಮೂಲಕ ವೀಕ್ಷಿಸಬಹುದು.

| | |
|---|---|
| ಬಿಡಿ ಪ್ರತಿ | ರೂ. 05/- |
| ವಾರ್ಷಿಕ ಚಂದಾ | ರೂ. 60/- |
| ಆಜೀವ ಚಂದಾ | ರೂ. 500/- |
| ವಿದೇಶಿ ವಾರ್ಷಿಕ ಚಂದಾ | ರೂ. 850/- |

ಸಪ್ತಗಿರಿಯಲ್ಲಿ ಪ್ರಕಟವಾಗುವ ಲೇಖನಗಳಲ್ಲಿನ ಅಭಿಪ್ರಾಯಗಳು ಸಂಪಾದಕವರ್ಗದ, ಪತ್ರಿಕೆಯ, ಅಭಿಪ್ರಾಯಗಳೇ ಆಗಿರಬೇಕು ಎಂದಿಲ್ಲ. - ಸಂಪಾದಕ

ಸಂಪಾದಕೀಯ

# ಆರೋಗ್ಯವೇ ಮಹಾಭಾಗ್ಯ

ಉದ್ಧರೇದಾತ್ಮನಾತ್ಮಾನಂ ಆತ್ಮಾನಮವಸಾದಯೇತ್।
ಆತ್ಮೈವಹ್ಯಾತ್ಮನೋ ಬಂಧುಃ ಆತ್ಮೈ ಪರಿಪುರಾತ್ಮನಃ॥

"ನಿನ್ನನ್ನು ನೀನೇ ರಕ್ಷಿಸಿಕೊಳ್ಳಬೇಕು. ನಿನ್ನ ಒಳ್ಳೆಯದು, ಕೆಟ್ಟದ್ದನ್ನು ನೀನೇ ನೋಡಿಕೊಳ್ಳಬೇಕು. ತಿಳಿದು ತಿಳಿದು ನಿನ್ನ ಅಧೋಗತಿಯನ್ನು ತಂದು ಕೊಳ್ಳಬೇಡ. ನಿನಗೆ ಒಳಿತು, ಹಾನಿ ಮಾಡುವ ಮಿತ್ರ, ಶತ್ರುವು ನಿನ್ನಲ್ಲೇ ಇದ್ದಾರೆ! ಆದ್ದರಿಂದ ಸತ್ಮಾರ್ಗವನ್ನು ಆಯ್ದುಕೂಂಡು ಜೀವನಯಾತ್ರೆಯನ್ನು ಸಾಗಿಸು" ಎನ್ನುವ ಪಂಡಿತರ ವಾಕ್ಯವನ್ನು ನಾವು ಯಾವಾಗಲೂ ಸ್ಮರಿಸಬೇಕು.

'ಪ್ರಕೃತಿಯನ್ನು ದೇವರೆಂದು ಭಾವಿಸಿರುವ ಭಾರತೀಯರನ್ನು ಮೂಲಭೂತವಾದಿಗಳನ್ನಾಗಿ ಪರಿಗಣಿಸಿದ್ದ ಪಾಶ್ಚಾತ್ಯ ದೇಶಗಳಿಗೆ 'ಕರೋನಾ' ಕಾಲದಲ್ಲಿ ಇಂದು ಸನಾತನ ವಿಧಾನಗಳೇ 'ಶರಣ್ಯ' ಎಂದು ಎನಿಸುತ್ತಿದೆ. ನಮ್ಮ ಸದಾಚಾರವಾದ ಎರಡೂ ಕೈಗಳಿಂದ ಮಾಡುವ ನಮಸ್ಕಾರವು ಗೌರವ ಭಕ್ತಿ ಭಾವಗಳ ಪ್ರತೀಕವಾಗಿದೆ. ಇಂದು ನಮಸ್ಕರಿಸುವುದೇ ಒಳ್ಳೆಯ ಪದ್ಧತಿ ಎಂದು ಭಾವಿಸಿ ಪ್ರಪಂಚದಲ್ಲಿ ಎಲ್ಲಾ ದೇಶಗಳಲ್ಲೂ ನಮ್ಮನ್ನೇ ಅನುಸರಿಸುತ್ತಿದ್ದಾರೆ. ನಾವು ಹೊರಗಿನಿಂದ ಬಂದರೆ ಸ್ನಾನ ಮಾಡಿ ಒಗೆದ ಬಟ್ಟೆಗಳನ್ನು ಧರಿಸುವ ಸಂಸ್ಕೃತಿಯನ್ನು ಹಿರಿಯರು ಹಿಂದಿನಿಂದ ನಮಗೆ ಕಲಿಸಿದ್ದಾರೆ. ಈ ಸಂಸ್ಕೃತಿಯೇ ನಮ್ಮ ಕುಟುಂಬವನ್ನು ಅಂಟು ರೋಗಗಳಿಂದ ರಕ್ಷಿಸುತ್ತಿದೆ ಎಂದು ಭಾವಿಸಬೇಕು. ಇದೇ ರೀತಿಯಲ್ಲಿ ಮನೆಗೆ ಬರುವ ಅತಿಥಿಗಳನ್ನು ಸತ್ಕರಿಸುವಾಗ ಕೈ ಕಾಲೂ ತೊಳೆದು ಬನ್ನಿರೆಂದು ಹೇಳುವ ಆಚಾರವಿದೆ. ಏಕೆಂದರೆ, ಇದರಿಂದ ಎಲ್ಲೆಲ್ಲಿಯೋ ತಿರುಗಿ ಬಂದಾಗ ಕಾಲಿಗೆ, ಕೈಗಳಿಗೆ ಅಂಟಿರುವ ಸೂಕ್ಷ್ಮ ಕ್ರಿಮಿಗಳನ್ನು ಓಡಿಸಿದಂತಾಗುತ್ತದೆ. ಹಾಗೆಯೇ ಊಟ ಮಾಡುವ ಮುಂಚೆ ಕೈ ಮತ್ತು ಕಾಲುಗಳನ್ನು ತೊಳೆದು ಕೊಳ್ಳುವುದು ಆರೋಗ್ಯಕರವಾಗಿದೆ ಇದೇ ಭಾರತೀಯತೆ.

ಇನ್ನೂ ಭೋಜನದ ವಿಷಯಕ್ಕೆ ಬಂದರೆ ಬಾಳೆ ಎಲೆಯಲ್ಲಿಯೇ ಊಟ ಮಾಡುವುದು ಅತ್ಯಂತ ಆರೋಗ್ಯಕರವಾಗಿದೆ. ತಾಮ್ರದ ಪಾತ್ರೆಗಳು, ಬೆಳ್ಳಿಲೋಟಗಳಲ್ಲಿ ನೀರು ಕುಡಿದರೆ ಎಲ್ಲಾ ಸೂಕ್ಷ್ಮಕ್ರಿಮಿಗಳು ನಾಶವಾಗುತ್ತವೆ ಎಂದು ಸಂಶೋಧನೆಗಳು ತಿಳಿಸಿವೆ. ನಮ್ಮ ದೇವಾಲಯಗಳಲ್ಲಿ ಬೆಳ್ಳಿ ಪಾತ್ರೆಯಲ್ಲಿ ಬಳಸುವ ತೀರ್ಥದಲ್ಲಿ ತುಲಸಿ, ಲವಂಗ, ಪಚ್ಚಕರ್ಪೂರ, ಏಲಕ್ಕಿ ಪುಡಿ ಮೊದಲಾದವುಗಳನ್ನು ಬೆರೆಸಿರುವ ತೀರ್ಥವನ್ನು ಭಕ್ತರಿಗೆ ನೀಡುವುದರಿಂದ ಅವರನ್ನು ಸೂಕ್ಷ್ಮಕ್ರಿಮಿಗಳಿಂದ ಕಾಪಾಡು ವುದಲ್ಲದೇ ಅನೇಕ ರೋಗಗಳನ್ನು ನಿವಾರಿಸುವ ಗುಣ ತೀರ್ಥಕ್ಕೆ ಇದೆ. ಆದ್ದರಿಂದಲೇ ತೀರ್ಥವನ್ನು ಭಕ್ತರಿಗೆ ನೀಡುವ ಸಮಯದಲ್ಲಿ ಅರ್ಚಕರು "ಅಕಾಲಮೃತ್ಯುಹರಣಂ ಸರ್ವವ್ಯಾಧಿನಿವಾರಣಂ" ಎನ್ನುನವ ಮಂತ್ರವನ್ನು ಪಠಿಸುತ್ತಾರೆ.

ನಮ್ಮ ಆಚರಣೆಯನ್ನು ನೋಡಿ ಯಾರೋ ಏನೋ ಅಂದು ಕೊಳ್ಳುತ್ತಾರೆಂದು ನಮ್ಮ ಆಚರಣೆಗಳನ್ನು ನಿರ್ಲಕ್ಷ್ಯ ಮಾಡಬಾರದು. ಈ ರೀತಿಯಲ್ಲಿ ನಿರ್ಲಕ್ಷ್ಯ, ಮಾಡುವುದರಿಂದಲೇ ಮಹಾಮಾರಿ "ಕರೋನಾ" ನಂತಹ ಉಪದ್ರವಗಳು ಪ್ರಪಂಚವನ್ನು ಅಲುಗಾಡಿಸುತ್ತಿವೆ. ಆದ್ದರಿಂದಲೇ ನಾವು ಕಲಿತಿರುವ ನಮ್ಮ ಸನಾತನ ಸಂಪ್ರದಾಯಗಳು ಸದಾಚಾರಗಳನ್ನು ಮರೆಯಬಾರದು. ನಮ್ಮ ಶ್ರೇಯಸ್ಸಿಗಾಗಿ ಅವುಗಳನ್ನು ಪಾಲಿಸಬೇಕು. ನಮ್ಮವರನ್ನು ನಾವು ರಕ್ಷಿಸಿಕೊಳ್ಳಬೇಕು.

'ಕರೋನಾ' ಉಪದ್ರವ ಸಮಯದಲ್ಲಿ ವಿಶ್ವಶ್ರೇಯಸ್ಸಿಗಾಗಿ ತಿರುಮಲೆ ತಿರುಪತಿ ದೇವಸ್ಥಾನದವರು ಜಪಗಳು, ಯಜ್ಞಗಳು, ಪಾರಾಯಣಗಳು, ಮುಖ್ಯವಾಗಿ ಯೋಗಾ ಶಿಷ್ಟದಲ್ಲಿನ 'ವಿಷೂಚಿಕ' ಎಂಬ ಕರೋನಾವನ್ನು ಹೊಡೆದೋಡಿಸಲು ಧನ್ವಂತರಿ ಮಹಾಮಂತ್ರವನ್ನು ಸುಮಾರು 62 ದಿನಗಳು ನಡೆಸುತ್ತದೆ. ಅದೇ ರೀತಿಯಲ್ಲಿ ರಾಮಾಯಣದ ಭಾಗವಾದ ಸುಂದರಕಾಂಡ ಪಠಣ ನಡೆಸುತ್ತಿರುವುದರಿಂದ ಸಮಸ್ತ ಭಕ್ತ ಜನತೆಗೆ ಅಭ್ಯುದಯ ಹಾಗೂ ಆರೋಗ್ಯವನ್ನು ಕರುಣಿಸುತ್ತಿದೆ. ಆದ್ದರಿಂದಲೇ ಆರೋಗ್ಯವೇ ಮಹಾಭಾಗ್ಯವೆಂದು ಪೂರ್ವಿಕರು ಹೇಳಿದ್ದಾರೆ.

ಇನ್ನೂ ಸರ್ಕಾರವೂ ಸಹ "ಕರೋನಾ" ಸೊಂಕಿನ ಹರಡುವಿಕೆಯನ್ನು ತಡೆಯಲು ಮಾರ್ಗದರ್ಶನಗಳನ್ನು ಜಾರಿ ಮಾಡಿದೆ. ಕೈಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು, ಮುಖಕ್ಕೆ ತಪ್ಪದೇ ಮುಖಗವಸವನ್ನು ಧರಿಸುವುದು, ಭೌತಿಕ ಅಂತರವನ್ನು ಕಾಪಾಡಿಕೊಳ್ಳುವಂತೆ ಮನವಿ ಮಾಡಿದೆ.

ಇವುಗಳನ್ನು ತಪ್ಪದೇ ಆಚರಿಸೋಣ... ವಿಶ್ವ ಆರೋಗ್ಯವನ್ನು ಕಾಪಾಡಿಕೊಳ್ಳೋಣ...

*ವಿಶ್ವಕಲ್ಯಾಣ ಗೋವಿಂದಾ ! ಗೋವಿಂದಾ!! ಗೋವಿಂದಾ!!!*

# ಶ್ವೇತಾಶ್ವತರೋಪನಿಷತ್

- ಶ್ರೀಮತಿ. ಎ. ಗೀತವೀರರಾಘವನ್
-080-26722817

ಈ ಉಪನಿಷತ್ತು ದಶೋಪನಿಷತ್ತುಗಳಲ್ಲಿ ಸೇರಿಲ್ಲ. ಆದರೂ ಇದು ಬಹಳ ಮಹತ್ವ ಹೊಂದಿರುವುದಾಗಿದೆ. ಈ ಉಪನಿಷತ್ತು ಕೃಷ್ಣಯಜುರ್ವೇದಕ್ಕೆ ಸಂಬಂಧಿಸಿದ ಉಪನಿಷತ್ತು. ಬ್ರಹ್ಮ ಸೂತ್ರಕಾರರು ಈ ಉಪನಿಷತ್ತಿಗೆ ಬಹಳ ಪ್ರಧಾನ್ಯ ನೀಡಿದ್ದಾರೆ. ಶಂಕರಾಚಾರ್ಯರು ಮತ್ತು ರಾಮಾನುಜಾಚಾರ್ಯರು ಇಬ್ಬರೂ ತಮ್ಮ ಭಾಷ್ಯಗಳಲ್ಲಿ ಈ ಉಪನಿಷತ್ತಿನ ಮಂತ್ರಗಳನ್ನು ಉಲ್ಲೇಖಿಸಿದ್ದಾರೆ. ಈ ಉಪನಿಷತ್ತಿನ ಮಂತ್ರಗಳೆಲ್ಲಾ ಪದ್ಯ ಮಯವಾಗಿದೆ. ಇದರಲ್ಲಿ ಆರು ಅಧ್ಯಾಯಗಳೂ ನೂರಹದಿ ಮೂರು ಮಂತ್ರಗಳು ಇವೆ. ಈ ಉಪನಿಷತ್ತಿನಲ್ಲಿ ಜೀವಾತ್ಮರಿಗೂ ಪರಮಾತ್ಮರಿಗೂ ಭೇದವನ್ನು ಅನೇಕ ಕಡೆ ನಿರೂಪಿಸಲ್ಪಟ್ಟಿದೆ. ಮೂರು ತತ್ವಗಳಾದ 'ಭೋಕ್ತಾ, ಭೋಗ್ಯ ಮತ್ತು ಪ್ರೇರಿತಾ' ರನ್ನು ಈ ಉಪನಿಷತ್ತಿನಲ್ಲಿ ನಿರೂಪಿಸಿದೆ. ಪರಬ್ರಹ್ಮ ಪರಮತತ್ವವನ್ನು ಜೀವಾತ್ಮನ ಒಳಗೆ ಅಂತರ್ಯಾಮಿಯಾಗಿ ವಾಸಿಸುತ್ತಿರುವನೆಂದು ತಿಳಿಯಬೇಕೆಂದು ನಿರೂಪಿಸಿದೆ. ಈ ಉಪನಿಷತ್ತಿನಲ್ಲಿ ಈಶ್ವರನ ಸ್ವಾಭಾವಿಕವಾದ ಅನೇಕ ಕಲ್ಯಾಣಗುಣಗಳನ್ನು ಮತ್ತು ವಿಭೂತಿಗಳನ್ನು ನಿರೂಪಿಸಲಾಗಿದೆ.

ಇದರ ಮೊದಲ ಅಧ್ಯಾಯದಲ್ಲಿ ಈ ಉಪನಿಷತ್ತಿನ ವಿಷಯವನ್ನು ಸೂಚಿಸಿದೆ. ಜಗತ್ಕಾರಣ ಯಾವುದು? ನಾವು ಎಲ್ಲಿಂದ ಬಂದೆವು? ಯಾರ ಕಟ್ಟಳೆಗೆ ಒಳಗಾಗಿ ಸುಖ ದುಃಖಗಳು ಉಂಟಾಗುತ್ತವೆ? ಇಂಥ ಪ್ರಶ್ನೆಗಳ ಮಾಲೆಯೇ ಇಲ್ಲಿದೆ. ಈ ಅಧ್ಯಾಯದಲ್ಲಿ ಜೀವ ಮತ್ತು ಬ್ರಹ್ಮರ ವಿಚಾರ ಬಂದಿದೆ. ಇವರಿಬ್ಬರಿಗೂ ಭೇದವನ್ನು ಇಲ್ಲಿ ಹೇಳಿದೆ. "ಭೋಕ್ತಾ, ಭೋಗ್ಯಂ, ಪ್ರೇರಿತಾರಂ ಚ ಮತ್ವಾ","ದ್ವಾ ಅಜೌ ಈಶನೀಶೌ" ಮೊದಲಾದ ಭೇದ ವಾಕ್ಯಗಳು ಇಲ್ಲಿವೆ.

ಎರಡನೆಯ ಅಧ್ಯಾಯದಲ್ಲಿ ಯೋಗದ ವಿಷಯವು ಪ್ರಸ್ತುತವಾಗಿದೆ. ಈ ಯೋಗವು ಪತಾಂಜಲಿ ಯೋಗಕ್ಕೆ ಪೂರ್ವ ಪೀಠಿಕೆಯಾಗಿದೆ. ಮನಸ್ಸನ್ನು ಹೇಗೆ ಏಕಾಗ್ರಗೊಳಿಸಬೇಕು. ಎಲ್ಲಿ ಧ್ಯಾನಕ್ಕೆ ಕುಳಿತುಕೊಳ್ಳಬೇಕು.- ಮೊದಲಾದುವನ್ನು ಇಲ್ಲಿ ವಿಚಾರ ಮಾಡಲ್ಪಟ್ಟಿದೆ. ಯೋಗದ ಪರಿಪೂರ್ಣತೆಗೆ ಪರಮಾತ್ಮನ ಅನುಗ್ರಹವನ್ನು ಪಡೆಯಬೇಕೆಂದು ನಿರೂಪಿಸಿದೆ.

ಮೂರನೆಯ ಅಧ್ಯಾಯದಲ್ಲಿ ಬ್ರಹ್ಮ ತತ್ವದ ಮತ್ತು ಆತ್ಮ ತತ್ವದ ಸ್ವರೂಪ ನಿರೂಪಣೆ ಇದೆ. ಇಲ್ಲಿ ಪುರುಷಸೂಕ್ತದ ಮತ್ತು ರುದ್ರಾಧ್ಯಾಯಕ ಅನೇಕ ಮಂತ್ರಗಳನ್ನು ನಿರೂಪಿಸಿದ್ದಾರೆ.

ನಾಲ್ಕನೆಯ ಅಧ್ಯಾಯದಲ್ಲಿ ಜೀವ - ಬ್ರಹ್ಮರ ವಿಚಾರವನ್ನೂ ನಿರೂಪಿಸಿದೆ. ಪರಮಾತ್ಮ ಸ್ವರೂಪವನ್ನು ನಿರೂಪಿಸಲಾಗಿದೆ. ಬ್ರಹ್ಮವಸ್ತುವನ್ನು ಇಲ್ಲಿ "ಮಹೇಶ್ವರಂ" ಎಂದು ಕರೆದಿದೆ. "ಯಃ ಏನಂ ಏವಂ ವಿದುಃ ಅಮೃತಾಃ ತೇ ಭವಂತಿ" ಎಂಬ ಸೂಕ್ತಿ. ಬ್ರಹ್ಮ ವಸ್ತುವನ್ನು ಅರಿತವರು ಅಮೃತತ್ವವನ್ನು ಹೊಂದುವರೆಂದು ತಿಳಿಸಿದೆ. ಜೀವಾತ್ಮ ಮತ್ತು ಪರಮಾತ್ಮರನ್ನು ಎರಡು ಸಮಾನ ಗುಣಗಳುಳ್ಳ ಪಕ್ಷಿಗಳು ಒಂದೇ ಪಿಪ್ಪಿಲ ವೃಕ್ಷದಲ್ಲಿ ಕುಳಿತಿವೆಯೆಂದು ವರ್ಣಿಸಿದೆ. ಇವುಗಳಲ್ಲಿ ಒಂದು ಪಕ್ಷಿ ಜೀವಾತ್ಮನಾದುದು ಪಿಪ್ಪಿಲ ವೃಕ್ಷದ ಸಿಹಿ ಪಿಪ್ಪಿಲ ಫಲವನ್ನು ಸ್ವಾದುವೆಂದು ತಿನ್ನುತ್ತಿದೆ. ಅದು ತನ್ನ ಕರ್ಮ ಫಲವನ್ನು ತಿನ್ನುತ್ತಿದೆ. ಆದರೆ ಇನ್ನೊಂದು ಪಕ್ಷಿ ಪರಮಾತ್ಮನಾದುದು ಏನನ್ನೂ ತಿನ್ನದೆ ಜೀವಾತ್ಮನಾದುದು ತಿನ್ನುವುದನ್ನು ವೀಕ್ಷಿಸುತ್ತದೆ.

ಐದನೆಯ ಅಧ್ಯಾಯದಲ್ಲಿ ಕಪಿಲ ಋಷಿಯ ಮತ್ತು ಸಾಂಖ್ಯ ತತ್ವದ ವಿಚಾರ ಬರುತ್ತದೆ. ಇಲ್ಲಿ ಬರುವ ಸಾಂಖ್ಯದಲ್ಲಿ ನಿರೀಶ್ವರ ಸಿದ್ಧಾಂತ ಇಲ್ಲ. ಎಲ್ಲದಕ್ಕೂ ಏಕೈಕ ಕಾರಣನೂ ಸರ್ವಾಧಿಪನೂ ಮಹಾತ್ಮನೂ ಆದ "ವಿಶ್ವಸ್ಯ ಏಕಂ ಪರಿವೇಷ್ಟಿತಾರಂ ಜ್ಞಾತ್ವಾ ದೇವಂ ಮುಚ್ಯತೇ ಸರ್ವ ಪಾಶೈಃ " ಆದ ಪರಮಾತ್ಮನನ್ನು ಅರಿತರೇನೇ ಸರ್ವ ಪಾಶಗಳಿಂದ ವಿಮುಕ್ತಿ ಎಂದು ಖಚಿತವಾಗಿ ಹೇಳಿದೆ.

ಆರನೆಯ ಅಧ್ಯಾಯ ಕರ್ಮ ಸಿದ್ಧಾಂತವನ್ನು ಪ್ರಸ್ತಾಪಿಸುತ್ತದೆ. ಕರ್ಮ ಕ್ಷಯದಿಂದ ಮೋಕ್ಷ. ಈಶ್ವರನು ಕರ್ಮಾಧ್ಯಕ್ಷ. ಅವನು ಕರ್ಮಚಕ್ರದಿಂದ ಹೊರಗಾಗಿ ಸರ್ವಭೂತಗಳಲ್ಲಿಯೂ ಅಂತರಾತ್ಮನಾಗಿದ್ದಾನೆ. ಜಗತ್ ಸೃಷ್ಟಿಗೆ ಕಾರಣನಾದ ಆ ಪರಮೇಶ್ವರನು ಎಲ್ಲರಲ್ಲೂ ಅಂತರ್ಯಾಮಿಯಾಗಿದ್ದಾನೆಂದೂ ಅವನನ್ನು ಸಾಕ್ಷಾತ್ಕರಿಸಿಕೊಳ್ಳದಿದ್ದರೆ ಈ ಸಂಸಾರ ನಿವೃತ್ತಿಯಾಗುವುದಿಲ್ಲ. ಆ ದೇವನನ್ನು ಚೆನ್ನಾಗಿ ಅರಿತವನು ಸರ್ವಪಾಶಗಳಿಂದ ಮುಕ್ತನಾಗುತ್ತಾನೆ. ಈ ಅಧ್ಯಾಯದ ಕೊನೆಯಲ್ಲಿ ಮುಮುಕ್ಷು ವಾದವನು ಆ ದೇವನಲ್ಲಿ ಶರಣಾಗತಿ ಮಾಡಹಲಿಬೇಕೆಂದು ತಿಳಿಸಿದೆ. "ಮುಮುಕ್ಷುರ್ವೈ ಶರಣಮಹಂ



ಪ್ರಪದ್ಯೆ" ಎಂದು ಪರಮ ತತ್ವವನ್ನು ತಿಳಿಸಿದೆ ಮತ್ತು ಪರಮ ತತ್ವದ ಸಾಕ್ಷಾತ್ಕರಕ್ಕೆ ಗುರಭಕ್ತಿ ಪ್ರಥಮತಃ ಇರಬೇಕೆಂದು ಇಲ್ಲಿ "ಯಸ್ಯ ದೇವೇ ಪರಾ ಭಕ್ತಿಃ ಯಥಾ ದೇವೇ ತಥಾ ಗುರೌ"ಎಂದು ಹೇಳಿ ಅಂಥವರಿಗೆ ಪರತತ್ವಗಳು ಪ್ರಕಾಶಗೊಳ್ಳುತ್ತವೆ ಎಂದು ಉಪಸಂಹಾರ ಮಾಡಿದೆ. ಇಡೀ ವೇದದ ಶಬ್ದರಾಶಿಯಲ್ಲಿ 'ಭಕ್ತಿ' ಎನ್ನುವ ಪದ ಬರುವುದು ಇಲ್ಲಿ ಒಂದೇ ಕಡೆ. ಗುರುವಿನಲ್ಲಿ ಭಕ್ತಿ ಇರಬೇಕೆನ್ನುವುದಕ್ಕೆ ಅಷ್ಟು ಪ್ರಾಶಸ್ತ್ಯವನ್ನು ಈ ಉಪನಿಷತ್ ನೀಡಿದೆ.

ಈ ಉಪನಿಷತ್ತಿನಲ್ಲಿ ಜೀವಾತ್ಮ ಮತ್ತು ಪರಮಾತ್ಮರಲ್ಲಿ ಭೇದ ಉಂಟೆಂದು ನಿರ್ಧಿಷ್ಟವಾಗಿ ನಿರೂಪಿಸಿದೆ. ಭಗವಾನ್ ರಾಮಾನುಜರು ಜೀವಾತ್ಮ - ಪರಮಾತ್ಮರ ಭೇದವನ್ನು ಸಾಧಿಸಲು ಈ ಉಪನಿಷತ್ತಿನಿಂದ ಅನೇಕ ಮಂತ್ರಗಳನ್ನು ಉದಾಹರಿಸಿದ್ದಾರೆ. ಈ ಉಪನಿಷತ್ತಿನಲ್ಲಿ ಬರುವ "ಶರಣಂ ಪ್ರಪದ್ಯೆ" ಮತ್ತು "ಪರಭಕ್ತಿ" ಎನ್ನುವ ಪದಗಳು ಮೋಕ್ಷೋಪಾಯ ಸ್ವರೂಪವನ್ನು "ಭಕ್ತಿ" ಮತ್ತು "ಪ್ರಪತ್ತಿ" ಎಂದು ಸೂಚಿಸುತ್ತವೆ.

ಈ ಉಪನಿಷತ್ತಿನ ಪರಮಸಾರ "ಅಂತರ್ಯಾಮಿ ತತ್ವ"ಮತ್ತು ಅದು ಉಳಿದ ಎಲ್ಲಾ ಉಪನಿಷ್ತುಗಳ ಭೋದನೆಯೂ ಆಗಿದೆ.

ಪರಬ್ರಹ್ಮನು ಜಗತ್ತಿನ ಸೃಷ್ಟಿ, ಸ್ಥಿತಿ,ಲಯಗಳಿಗೆ ಪರಮ ಕಾರಣನೆನ್ನುವುದು ನಿರ್ವಿವಾದ. ಆದರೂ ಅದನ್ನು ಯಾವ ಸಂಶಯಗಳಿಲ್ಲದೆ ನಿರೂಪಣೆ ಮಾಡಲು ಈ ಉಪನಿಷತ್ತಿನ ಪ್ರಥಮ ಮಂತ್ರದಲ್ಲಿ ಬ್ರಹ್ಮವಾದಿಗಳು ಜಗತ್ ಸೃಷ್ಟಿಯ ವಿಚಾರವನ್ನು ವಿವೇಚಿಸುತ್ತಾರೆ. ಬ್ರಹ್ಮನು ಜಗತ್ ಸೃಷ್ಟಿ ಕರ್ತಾ ಎಂದು ಹೇಗೆ ಹೇಳುವುದು ದಾರ್ಶನಿಕರು ವಿವಿಧವಾಗಿ ಸೃಷ್ಟಿ ವಿಚಾರ ಹೇಳುತ್ತಾರೆ.ಕೆಲವರು ಪ್ರಕೃತಿ ಜಗತ್ ಸೃಷ್ಟಿಗೆ ಕಾರಣ ಎನ್ನುತ್ತಾರೆ.ಮೀಮಾಂಸರು ಕರ್ಮ ಕಾರಣವೆನ್ನುತ್ತಾರೆ. ಕೆಲವರು ಆಕಸ್ಮಾತ್ತಾಗಿ ಜಗತ್ ಸೃಷ್ಟಿ ಆಯಿತ್ತೆನ್ನುತ್ತಾರೆ. ಕೆಲವರು ಪಂಚ ಭೂತಗಳು ಕಾರಣವೆನ್ನುತ್ತಾರೆ.

ಆದರೆ ಋಷಿಗಳು "ಧ್ಯಾನಯೋಗ" ದ ಮೂಲಕ 'ಜಗತ್ ಸೃಷ್ಟಿ ಕರ್ತಾ'ವನ್ನು ಕಂಡಿದ್ದಾರೆ. ಅವನು ದೇವಾತ್ಮಾ, ಪರಮ ಪುರುಷ ಶ್ರೀಮನ್ನಾರಾಯಣನು. ಅವನನ್ನು ಶ್ರುತಿಗಳು 'ಅಪಹತ ಪಾಪ್ಮಾ ದಿವ್ಯೋ ದೇವಃ ಏಕೋ ನಾರಾಯಣಃ" ಎಂದು ಕೊಂಡಾಡುತ್ತವೆ.

ಒಂದನೇ ಅಧ್ಯಾಯದಲ್ಲಿ ಒಂಭತ್ತನೇ ಮಂತ್ರದಲ್ಲಿ ಜೀವಾತ್ಮ, ಪರಮಾತ್ಮರಿಗೂ, ಪ್ರಕೃತಿಗೂ ಭೇದವನ್ನು ನಿರೂಪಣೆ ಮಾಡಿದೆ. ಜೀವಾತ್ಮ ಪರಮಾತ್ಮರಿಬ್ಬರೂ ಅನಾದಿ ಆದರೂ ಜೀವಾತ್ಮ ಕರ್ಮವಶನಾಗಿದ್ದಾನೆ. ಪರಮಾತ್ಮನು ಸರ್ವವೇದ್ಯನಾಗಿ ಸ್ವಾಮಿಯಾಗಿ ಸಾರ್ವಭೌಮನಾಗಿದ್ದಾನೆ. ಪ್ರಕೃತಿಯು ಜೀವಾತ್ಮನ ಭೋಗಕ್ಕಾಗಿ ಅನುಭವಿಸಲು ಇದೆ.

ಒಂದನೆಯ ಅಧ್ಯಾಯದಲ್ಲಿ ಹನ್ನೊಂದನೆ ಮಂತ್ರದಲ್ಲಿ ಮೋಕ್ಷದ ಬಗ್ಗೆ ವಿವರಣೆ ಇದೆ. ಆ ಪರಮಾತ್ಮನ ಸಾಕ್ಷಾತ್ಕಾರದಿಂದ ಪುಣ್ಯ ಪಾಪಗಳನ್ನು ಕಳೆದುಕೊಂಡು ಮೋಕ್ಷವನ್ನು ಪಡೆದರೆ ಈ ಜನ್ಮ ಮೃತ್ಯುಗಳ ಸುಳಿಯಿಂದ ಬಿಡುಗಡೆಯಾಗುತ್ತದೆ.

ಎರಡನೆ ಅಧ್ಯಾಯದ ೧೪, ೧೫ನೆಯ ಮಂತ್ರಗಳಲ್ಲಿ ಯೋಗಾಭ್ಯಾಸದಿಂದ ಪರಮಪುರುಷನ ಸಾಕ್ಷಾತ್ಕಾರವನ್ನು ಪಡೆಬಹುದೆಂದು ನಿರೂಪಿಸಿದೆ.ಜೀವಾತ್ಮನು ತಾನು ಪರಮಾತ್ಮನಿಗೆ ಅಧೀನನಾಗಿ ಶೇಷ ಸ್ವರೂಪನಾದವನೆಂದೂ ಪರಮಾತ್ಮನನ್ನು ತನ್ನ ಸ್ವಾಮಿ (ಶೇಷಿ) ಅಂತರ್ಯಾಮಿ ಎಂದು ತಿಳಿಯುತ್ತಾನೆ.

ಮೂರನೆಯ ಅಧ್ಯಾಯದ ಮೊದಲನೆಯ ಎರಡು ಮಂತ್ರಗಳಲ್ಲೇ ಶ್ರೀಮನ್ನಾರಾಯಣನ ನಿರೂಪಣೆ ಇದೆ. 'ದೇವಾಃ' ಎಂದೆ "ಅಂಹತ ಪಾಪ್ಮಾದಿವ್ಯೋ ದೇವಃ"ಶಾಸ್ತ್ರಗಳಲ್ಲಿ ನಿರೂಪಿಸಲಾಗಿದೆ. ನಮ್ಮನ್ನು ಈ ಸಂಸಾರ ಬಂಧನದಿಂದ ಬಿಡುಗಡೆ ಮಾಡಲು ಆ ಪರಮ ಪುರುಷ ಶ್ರೀಮನ್ನಾರಾಯಣ, ಈ ಜಗತ್ತಿನ ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವ ಸ್ವಾಮಿಗೆ ಮಾತ್ರ ಸಾಧ್ಯ.

ನಾಲ್ಕನೆಯ ಅಧ್ಯಾಯದ ಪ್ರಥಮ ಮಂತ್ರದಲ್ಲೇ ಸೃಷ್ಟಿ, ಸ್ಥಿತಿ, ಲಯಗಳಿಗೆ ಕಾರಣನಾದ ಪರಮಸ್ವಾಮಿ ನಮಗೆ ಅವನನ್ನು ಧ್ಯಾನ ಮಾಡಲು ಸಾಧ್ಯವಾಗಿಸುವಂತೆ ಪ್ರಾರ್ಥನೆಯನ್ನು ಸಲ್ಲಿಸಿದೆ.

ಐದನೆಯ ಅಧ್ಯಾಯದಲ್ಲಿ ಪ್ರಥಮ ಮಂತ್ರದಲ್ಲಿ ಜೀವಾತ್ಮ ಪರಮಾತ್ಮರಿಗಿರುವ ಭೇದವನ್ನು ಭೋಧಿಸಿದೆ.

ಐದನೆಯ ಅಧ್ಯಾಯದ ೭ ನೆಯ ಮಂತ್ರದಲ್ಲಿ ಪರ ಮಾತ್ಮನ ಸ್ವರೂಪ ಸ್ವಭಾವಗಳನ್ನು ನಿರೂಪಿಸಿದ ನಂತರ ಜೀವಾತ್ಮನ ಸ್ವರೂಪವನ್ನು ನಿರೂಪಿಸಿದೆ. ಅವನು ತ್ರಿಗುಣಾತ್ಮಕ (ಸತ್ವ, ರಜಸ್ಸು ಮತ್ತು ತಮಸ್ಸು). ಅವನು ಅನೇಕ ದೇಹಗಳನ್ನು ತನ್ನ ಕರ್ಮದ ಪ್ರಕಾರ ಪಡೆಯುತ್ತಿರುತ್ತಾನೆ. ಅವನು ಅಣು ಸ್ವರೂಪನೆಂದೂ ಅವನು ಹೃದಯವೆಂಬ ಗುಹೆಯಲ್ಲಿ ವಾಸಿಸುತ್ತಿದ್ದಾನೆ.

ಆರನೆಯ ಅಧ್ಯಾಯದ ೧೧ನೆಯ ಮಂತ್ರದಲ್ಲಿ ಪರಬ್ರಹ್ಮನು ಎಲ್ಲಾ ಜೀವಿಗಳಲ್ಲಿ ಅಂತರ್ಯಾಮಿಯಾಗಿ ವಾಸಿಸುತ್ತಿದ್ದಾನೆ. ಅವನು ಎಲ್ಲಾ ಜೀವಿಗಳನ್ನೂ ಪ್ರವೇಶಿಸಿ ಅವರ ಕರ್ಮಗಳನ್ನು ಮಾಡುವಂತೆ ಪ್ರೇರಿಸುತ್ತಿದ್ದಾನೆ. ಅವನು ಎಲ್ಲಾ ಜೀವಿಗಳಲ್ಲಿ ಇದ್ದರೂ ಯಾವ ವಿಧವಾದ ದೋಷವೂ ಅವನಿಗೆ ಅಂಟುವುದಿಲ್ಲ. ಅವನು ಸದಾ ಸರ್ವದಾ ಸಕಲ ಕಲ್ಯಾಣ ಗುಣಾಕರನು.

೧೪ ನೆಯ ಮಂತ್ರದಲ್ಲಿ ಅವನ ಪರಮಧಾಮವನ್ನು ವರ್ಣಿಸಿದೆ. ಅಲ್ಲಿ ಸೂರ್ಯ, ಚಂದ್ರ, ನಕ್ಷತ್ರಗಳು ಪ್ರಕಾಶಿಸುವುದಿಲ್ಲ.ಸದಾ ಪ್ರಕಾಶಮಾನವಾದ ಆ ಪರಮಾತ್ಮನ ದೀಪ್ತಿಯಿಂದ ಎಲ್ಲವೂ ಅಲ್ಲಿ ಉಜ್ವಲವಾಗಿದೆ.

೧೭ ನೆಯ ಮಂತ್ರದಲ್ಲಿ ಅವನು ಎಲ್ಲರಿಗೂ ಸ್ವಾಮಿಯಾಗಿ ಎಲ್ಲರನ್ನೂ ಆಳುತ್ತಿದ್ದಾನೆ.ಮೋಕ್ಷಾವಸ್ಥೆಯಲ್ಲಿಯೂ ಅವನೇ ಸ್ವಾಮಿ ಆಳುವವನು.

ಆ ಪರಬ್ರಹ್ಮನಿಗೆ ಸಮಾನರೂ ಅಧಿಕರೂ ಯಾರು ಇಲ್ಲ. ಎಲ್ಲಾ ಲೋಕಗಳಿಗೂ ಅವನೇ ಆಶ್ರಯನು, ಶರಣ್ಯನು. ಅವನ ಪದಕಮಲಗಳ ಪ್ರಪತ್ತಿ (ಶರಣಾಗತಿ) ಮಾಡಿದವರನ್ನು ಅವನು ಎಂದೂ ಕೈ ಬಿಡುವುದಿಲ್ಲ. ಸಕಲ ಪಾಪಗಳಿಂದ ರಕ್ಷಿಸುತ್ತಾನೆ.

ಶ್ವೇತಾಶ್ವತರ ಋಷಿಗಳು ಪರಬ್ರಹ್ಮನ ವಿಷಯವಾದ ಈ ಪರಮ ಸತ್ಯವನ್ನು ಅತ್ಯಂತ ಉತ್ತಮ ರೀತಿಯಲ್ಲಿ ಉಪದೇಶಿಸಿದ್ದಾರೆ. ಅವರ ಅತ್ಯಂತ ಪ್ರಭಾವ ಪೂರ್ಣ ತಪಸ್ಸಿನ ಫಲವಾದ ಈ ಉಪದೇಶವನ್ನು ಭಗವಂತನ ಪರಮ ಅನುಗ್ರಹದ ಪೂರ್ವಕ ವಾಮದೇವ ಮುಂತಾದ ಋಷಿಗಳು ಮತ್ತು ಅನೇಕ ಪರಮಹಂಸ ಸಂನ್ಯಾಸಿಗಳೂ ಪರಮ ಪೂಜ್ಯವಾಗಿ ಗ್ರಹಿಸಿದ್ದಾರೆ.

ಈ ಉಪನಿಷತ್ತಿನಲ್ಲಿ ಹೇಳಿರುವ ಮುಖ್ಯಾಂಶಗಳು ಈ ರೀತಿ ಇವೆ.

೧) ಜಗತ್ಕಾರಣವು ಆ ಪರಬ್ರಹ್ಮನೊಬ್ಬನೇ.

(ಪ್ರಕೃತಿ,ಜೀವ, ಕಾಲಗಳಿಗೆ ಅದು ಅಸಂಭವವಾದುವು.)

೨) ಪರಮಪುರುಷನಲ್ಲಿ ಪರಾಭಕ್ತಿ ಅತ್ಯಂತ ಅವಶ್ಯಕ.

೩) ಪರಮಾತ್ಮನಲ್ಲಿ ಭಕ್ತಿ ಇರುವಂತೆ ಗುರುಗಳಲ್ಲಿಯೂ ಭಕ್ತಿ ಇರಬೇಕು.

೪) ಯೋಗ, ಧ್ಯಾನಗಳು ಸಾಧಕನಿಗೆ ಅವಶ್ಯಕ.

೫)ಆ ಪರಮಪುರುಷನ ಸಾಕ್ಷಾತ್ಕಾರದಿಂದ ಮಾತ್ರ ಜೀವಿಗಳಿಗೆ ಜನ್ಮ - ಮೃತ್ಯುಗಳ ಸುಳಿಯಿಂದ ಬಿಡುಗಡೆ.



# ಶ್ರೀ ವೇಂಕಟೇಶ್ವರ ನಮಃ

ಕೆ.ಎಸ್. ಮಲ್ಲಿಕಾರ್ಜುನ

**ನಂಬಿದೆ ನಿನ್ನ ಪಾದವ ಶ್ರೀನಿವಾಸ**
**ನನ್ನ ಪಾಲಿಸೋ ಬಿಡದಲೆ ಶ್ರೀನಿವಾಸ**
**ವಾಮನ ಅವತಾರ ಶ್ರೀನಿವಾಸ**
**ಅಮೃತ ಮಥನದೆ ಪರ್ವತ ವನುದ್ಧರಿಸಿದೆ ಶ್ರೀನಿವಾಸ**

**ತಿರುಪತಿ ವಾಸನೇ ಶ್ರೀನಿವಾಸ**
**ಈ ಜಗದ ಉದ್ಧಗಲ ನೀ ಶ್ರೀನಿವಾಸ**
**ಅಣು,ತೃಣಕಾಷ್ಠ ಹರಿಯೇ ಶ್ರೀನಿವಾಸ**
**ಮಲೆಯ ಪರ್ವತದ ವಾಸೀ ಶ್ರೀನಿವಾಸ**

**ಎಲ್ಲೆಲ್ಲೂ ತುಂಬಿರುವೆ ಶ್ರೀನಿವಾಸ**
**ನಿನ್ನ ಹುಡಕಲು ನಿನೇಲ್ಲೂ ಶ್ರೀನಿವಾಸ**
**ಕ್ಷುಲ್ಲಕ ಗುಣಬಿಟ್ಟು ಚೆಲ್ವರೂಪವತೊಟ್ಟು**
**ಕಣ್ಮುಂದೆ ಬಂದು ನಿಲ್ಲೋ ಶ್ರೀನಿವಾಸ**

**ಕರುಣೆಯಿಂದ ಕಾಯೋ ಶ್ರೀನಿವಾಸ**
**ವರುಣ ವಿರಂಗನೇ ನನ್ನ ಶ್ರೀನಿವಾಸ**
**ಮರಣ ತರುವ ಶಯನ ಪೀತನೇ ಶ್ರೀನಿವಾಸ**
**ಜನನ, ಮರಣದ ಜನಕ ನನ್ನ ಶ್ರೀನಿವಾಸ**




# ಪಾವನ ಗಂಗಾ

- ಡಾ॥ ಗುರುರಾಜ ಪೋಶೆಟ್ಟಿಹಳ್ಳಿ
9739369621

ದೇವಲೋಕದ ಗಂಗೆಯನ್ನು ಭುವಿಗೆ ತರಲು ಭಗೀರಥ ಹರಸಾಹಸವನ್ನೇ ಮಾಡಬೇಕಾಯಿತು. ಆ ಸಾಹಸದ ಹಿನ್ನೆಲೆಯಲ್ಲಿಯೇ "ಭಗೀರಥ ಪ್ರಯತ್ನ" ಎಂಬ ನುಡಿಗಟ್ಟು ಜನಿಸಿತು. ಆಂದೇನೋ ಭಗೀರಥ ಅಪಾರ ಪ್ರಯತ್ನದಿಂದ ಗಂಗೆಯನ್ನು ಭೂಲೋಕಕ್ಕೆ ತಂದ. ಆ ಗಂಗೆಯನ್ನು ಉಳಿಸಿಕೊಳ್ಳಲು ಕೂಡ ಭಗೀರಥ ಪ್ರಯತ್ನವೇ ಮಾಡಬೇಕಾಗಿರುವುದು ವಿಪರ್ಯಾಸವೇ ಸರಿ.

ಸಪ್ತನದಿಗಳ ಸ್ಮರಣೆಯನ್ನು ಪ್ರತಿದಿನವೂ ಮಾಡುವಂತೆ ಪ್ರೇರೇಪಿಸುತ್ತದೆ ಸನಾತನ ಸಂಸ್ಕೃತಿ. ಅದರಲ್ಲೂ ಗಂಗಾನದಿ ಪರಮ ಪಾವನೆ ಎಂಬ ಶ್ರದ್ಧೆ ನಮ್ಮದು.ಗಂಗಾಸ್ನಾನದಿಂದ ಏಳು ಜನ್ಮಗಳ ಪಾಪಸಂಚಯವೂ ಮುಕ್ತವಾಗುತ್ತದೆಂಬ ನಂಬಿಕೆಯಿದೆ. ಗಂಗೆಯನ್ನು ತ್ರಿಪಥಗಾಮಿನಿಯೆಂದೂ ಕರೆಯುತ್ತಾರೆ. ಸ್ವರ್ಗಮರ್ತ್ಯ,ಪಾತಾಳಗಳಲ್ಲಿ ಹರಿಯುವ ನದಿ ಗಂಗೆಯೊಂದೇ. ಬ್ರಹ್ಮನ ಕಮಂಡಲುವಿನಲ್ಲಿ ವಾಸವಾಗಿದ್ದ ಗಂಗೆಯನ್ನು ಭೂಮಿಗೆ ಕರೆತಂದವನು ಸಾಹಸಿ ಭಗೀರಥ. ಗಂಗೆ ಭೂಮಿ ಗಿಳಿದ ಘಳಿಗೆಯೇ ಗಂಗಾವತಾರದ ಶುಭ ದಿನ.

ಈಕೆ ಮಹಾಭಾರತದ ಭೀಷ್ಮನ ತಾಯಿ. ಶಿವನ ಜಟೆಯಿಂದ ಅವತರಿಸಿದವಳು. ಇವಳೇ ಗಂಗೆ. ಇನ್ನಾವ ನದಿಗೂ ಈ ಬಗೆಯ ಕಥೆಯಿಲ್ಲ. ದೈವೀ ಹಿನ್ನೆಲೆಯಿಲ್ಲ.ಗಂಗೇಚ ಯಮುನೇಚೈವ. ಎನ್ನುತ್ತ ಸಪ್ತನದಿಗಳ ಸ್ಮರಣೆ ಮಾಡುವಾಗ ಮೊದಲಲ್ಲೇ ಬರುತ್ತದೆ. ಗಂಗೆಯ ಹೆಸರು. ದೇಶದ ನದಿಗಳಲ್ಲೆಲ್ಲ ಪಾವನವೆನಿಸಿದ ಈ ಏಳು ನದಿಗಳಲ್ಲಿ ಗಂಗಾ ನದಿಗೆ ಅತ್ಯಂತ ಪಾವನವೆಂಬ ಪಟ್ಟ. ಶಿವನ ಜಟೆಯಿಂದ ಅವತರಿಸಿದ್ದರಿಂದಲೇ ಇದಕ್ಕೆ ಈ ಪಾವನತೆಯು ಪ್ರಾಪ್ತವಾಗಿದೆ.ಈ ಗಂಗಾವರಣಕ್ಕೆ ಒಂದು ಪೌರಾಣಿಕ ಹಿನ್ನೆಲೆ ಇದೆ. ಹಿಂದಿನ ಕಾಲದಲ್ಲಿ ಕಪಿಲ ಋಷಿಯ ಶಾಪದಿಂದ ದಗ್ಧರಾದ ತನ್ನ ಪೂರ್ವಜರ ಉದ್ಧಾರಕ್ಕಾಗಿ ಭಗೀರಥನು ತಪಸ್ಸನ್ನು ಮಾಡಿ ಗಂಗೆ ಹಾಗೂ ಶಿವನನ್ನು ಮೆಚ್ಚಿಸಿಕೊಂಡಾಗ ಗಂಗಾಮಾತೆ ಮೊದಲು ಶಿವನ ಜಟೆಯಲ್ಲಿ ಅವತರಿಸುತ್ತಾಳೆ. ನಂತರ ಶಿವನ ಜಟೆಯಿಂದ ಭೂಮಿಗೆ ಇಳಿಯುತ್ತಾಳೆ. ಹೀಗೆ ಸ್ವರ್ಗದಿಂದ ಇಳಿದ ಗಂಗೆಯನ್ನು ಶಿವನು ತನ್ನ ಜಟೆಯಲ್ಲಿ ಧರಿಸಿ ಪುನಃ ಭೂಮಿಗೆ ಅನುಗ್ರಹಿಸುತ್ತಾನೆ. ಇದುವೇ ಶಿವನ ಗಂಗಾಧರ ಲೀಲೆಯು. ಹೀಗೆ ಸ್ವರ್ಗದಿಂದ ಗಂಗೆಯನ್ನು ಭೂಲೋಕಕ್ಕೆ ತರುವಲ್ಲಿ ಭಗೀರಥನ ಪಾತ್ರವು ಮಹತ್ವಪೂರ್ಣವಾದುದು. ಅಂತೆಯೇ ಗಂಗಾನದಿಗೆ ಭಗೀರಥಿ ಎಂತಲೂ ಕರೆಯುತ್ತಾರೆ.

### ಭಗೀರಥ ಪ್ರಯತ್ನ

ಗಂಗಾಮಾತ ಸ್ವರ್ಗದಿಂದ ಭುವಿಗೆ ಇಳಿದ ಪ್ರಸಂಗ ರಾಮಾಯಣದಲ್ಲಿ ಸುಂದರವಾಗಿ ವರ್ಣಿತವಾಗಿದೆ. ಇಕ್ಷ್ವಾಕು ವಂಶದ ಸಗರನ ಮೊಮ್ಮಗನೇ ಅಂಶುಮನ್ಯು. ಅಂಶುಮನ್ಯು ವಿನ ಮಗನೇ ಭಗೀರಥ. ಅಂಶಮನ್ಯು ಸಗರನ ಮೊದಲ ಹೆಂಡತಿಯ ಮಗ. ಸಗರನ ಎರಡನೆಯ ಹೆಂಡತಿಯೇ ಸುಮತಿ. ಸುಮತಿ ತನಗೆ ಅರವತ್ತು ಸಾವಿರ ಮಕ್ಕಳು ಬೇಕೆಂದು ಭೃಗು ಮಹರ್ಷಿಗಳನ್ನು ಬೇಡಿಕೊಳ್ಳುತ್ತಾಳೆ. ಅಂತೆಯೇ ಒಂದು ಮಾಂಸ ಮುದ್ದೆ (ಎಂಬ್ರಿಯೋ) ಆಕೆಗೆ ಲಭ್ಯವಾಗುತ್ತದೆ. ಆ ಎಂಬ್ರಿಯೋವೇ ಅರುವತ್ತು ಸಾವಿರ ಹೋಳುಗಳಾಗಿ ಅರುವತ್ತು ಸಾವಿರ ಮಕ್ಕಳು ಹುಟ್ಟುತ್ತಾರೆ.

ಒಮ್ಮೆ ಅಯೋಧ್ಯೆಯ ಸಗರ ಮಹಾರಾಜ ಅಶ್ವಮೇಧ ಯಾಗವನ್ನು 99 ಬಾರಿ ಯಶಸ್ವಿಯಾಗಿ ಪೂರ್ಣಗೊಳಿಸುತ್ತಾನೆ. ಪ್ರತಿ ಬಾರಿ ಯಾಗ ಪೂರ್ಣಗೊಂಡ ನಂತರ ಕುದುರೆಯನ್ನು ಭೂಪ್ರದಕ್ಷಿಣೆಗಾಗಿ ಕಳುಹಿಸುತ್ತಾನೆ. ಪ್ರತಿಭಾರಿಯೂ ಸಗರನಿಗೆ ವಿಜಯವಾಗುತ್ತದೆ. ಸಗರನ ದಿಗ್ವಿಜಯದಿಂದ ದೇವತೆಗಳ ರಾಜ ಇಂದ್ರನಿಗೆ ಈರ್ಷ್ಯೆ ಉಂಟಾಗುತ್ತದೆ. ಸಗರ ಮಹಾರಾಜ 100 ನೇ ಬಾರಿ ಅಶ್ವಮೇಧಯಾಗ ಮಾಡಿದಾಗ, ಇಂದ್ರ ಕುದುರೆಯನ್ನು ಅಪಹರಿಸುತ್ತಾನೆ. ಕಪಿಲ ಮಹಾಮುನಿಗಳ ಆಶ್ರಮದಲ್ಲಿ ಅದನ್ನು ಬಚ್ಚಿಡುತ್ತಾನೆ.

ಕುದುರೆಗಾಗಿ ಸಗರನ ಅರವತ್ತು ಸಾವಿರ ಮಕ್ಕಳು ಹುಡುಕಾಟ ನಡೆಸುತ್ತಾರೆ. ಅಂತಿಮವಾಗಿ ಅವರಿಗೆ, ಕಪಿಲ ಮಹಾಮುನಿಯ ಆಶ್ರಮದಲ್ಲಿ ಕುದುರೆ ಇರುವುದು ಕಂಡು ಬರುತ್ತದೆ. ರಾಜ್ಯದ ಆಸೆಯಿಂದ ಮುನಿಯೇ ಕುದುರೆಯನ್ನು ಕಟ್ಟಿ ಹಾಕಿದ್ದಾನೆ ಎಂದು ಭಾವಿಸುತ್ತಾರೆ, ಕಪಿಲ ಮಹಾ ಮುನಿಯ ಮೇಲೆ ಯುದ್ಧ ಮಾಡಲು ಸಿದ್ಧರಾಗುತ್ತಾರೆ. ಅಂತಿಮವಾಗಿ ಕಪಿಲ ಮಹಾಮುನಿಯ ಕೋಪಕ್ಕೆ ತುತ್ತಾಗಿ ಭಸ್ಮವಾಗುತ್ತಾರೆ.

ಎಷ್ಟು ದಿನವಾದರೂ ತಮ್ಮ ಮಕ್ಕಳು ವಾಪಸ್ಸು ಬಾರದಿರುವುದನ್ನು ಕಂಡ ಸಗರನಿಗೆ ವ್ಯಥೆಯಾಗುತ್ತದೆ. ತನ್ನ ಜ್ಯೇಷ್ಠ ಪುತ್ರ ಅಂಶುಮನ್ಯುವನ್ನು ಕೇಳಿಕೊಳ್ಳುತ್ತಾನೆ. ತಂದೆಯ ಆದೇಶದಂತೆ ಅಂಶಮನ್ಯು ಕುದುರೆಯನ್ನು ಹುಡುಕಿಕೊಂಡು ಹೋಗುತ್ತಾನೆ. ಕಪಿಲ ಮಹಾಮುನಿಗಳ ಆಶ್ರಮದಲ್ಲಿ ಕುದುರೆ ಸಿಗುತ್ತದೆ. ಅದರೊಂದಿಗೆ ಸುಟ್ಟು ಭಸ್ಮವಾದ ತನ್ನ ಸಹೋದರರನ್ನು ನೋಡುತ್ತಾನೆ. ಅವನಿಗೆ ದಿಕ್ಕೇ ತೋಚುವುದಿಲ್ಲ. ಆ ಕ್ಷಣದಲ್ಲಿ ಗರುಡದೇವ ಅಲ್ಲಿ ಪ್ರತ್ಯಕ್ಷನಾಗುತ್ತಾನೆ. ಇವರಿಗೆ ಸಾಮಾನ್ಯ ಜಲ ಪ್ರೋಕ್ಷಣೆಯಿಂದ ಮೋಕ್ಷ ದೊರೆಯುವುದಿಲ್ಲ. ಧರೆಗೆ ಬಂದ ಗಂಗೆಯ ಸ್ಪರ್ಶವಾಗಬೇಕು ಎನ್ನುತ್ತಾನೆ.

ಗಂಗೆಯನ್ನು ಧರೆಗೆ ತರಲು ಅಂಶುಮನ್ಯು ಪ್ರಯತ್ನಿಸಿದರೂ ಫಲಪ್ರದವಾಗುವುದಿಲ್ಲ. ನಂತರ ಭಗೀರಥ ಮಹಾರಾಜ ಪ್ರಯತ್ನ ಪಡುತ್ತಾನೆ. ಧವಳ ಗಂಗೆಯನ್ನು ಧರೆಗೆ ತರುವ ಸಲುವಾಗಿ, ರಾಜ್ಯವನ್ನು ತೊರೆಯುತ್ತಾನೆ. ತನ್ನ ಪಿತೃದೇವತೆಗಳ ಸ್ವರ್ಗ ಪ್ರಾಪ್ತಿಗಾಗಿ ಬ್ರಹ್ಮನನ್ನು ಕುರಿತು ತಪಸ್ಸಿಗೆ ತೊಡಗುತ್ತಾನೆ. ತಿಂಗಳಿಗೆ ಒಪ್ಪತ್ತಿನಂತೆ ಆಹಾರ ಸೇವಿಸುತ್ತಾ ಕಠಿಣ ತಪಸ್ಸನ್ನು ಮಾಡುತ್ತಾನೆ ಭಗೀರಥನ ತಪಸ್ಸಿಗೆ ಬ್ರಹ್ಮದೇವರು ಒಲಿಯುತ್ತಾರೆ. 'ಪುತ್ರ ಭಗೀರಥ, ನಿನ್ನ ಆಸೆ ಈಡೇರುತ್ತದೆ. ಆದರೆ ಮೇಲಿನಿಂದ ಧಾರಾಕಾರವಾಗಿ ಸುರಿಯುವ ಗಂಗೆಯ ರಭಸವನ್ನು ತಡೆಯಲು ಯಾರಿಂದಲೂ ಸಾಧ್ಯವಿಲ್ಲ. ಅದನ್ನು ತಡೆಯಲು ಶಿವನೊಬ್ಬನಿಂದಲೇ ಸಾಧ್ಯ. ನೀನು ಆ ಪರಶಿವನನ್ನು ಪ್ರಾರ್ಥಿಸು' ಎನ್ನುತ್ತಾನೆ ಬ್ರಹ್ಮ. ಭಗೀರಥ ಮಹಾರಾಜನು ಶಿವನ ಒಲುಮೆಯನ್ನು ಅಡಗಿಸಲು ಕಟ್ಟಿಹಾಕುತ್ತಾನೆ. ನಂತರ, ಗಂಗೆ ನಿಧಾನವಾಗಿ ಭೂಮಿಯತ್ತ ಸಾಗುತ್ತಾಳೆ. ಪಾತಾಳಲೋಕದಲ್ಲಿದ್ದ ಸಗರನ ಚಿತಾಭಸ್ಮ ತೊಳೆಯುತ್ತಾಳೆ. ಅವರಿಗೆ ಸದ್ಗತಿ ಒದಗಿಸುತ್ತಾಳೆ. ಗಂಗೆಯನ್ನು ಶಿವನು ಧರಿಸಿದ್ದರಿಂದ ಗಂಗಾಧರನೆಂದೇ ಹೆಸರಾಗಿದ್ದಾನೆ.

ಗಂಗೆ ನಮಗೆ ಬರಿ ನದಿಯಲ್ಲ. ನಮ್ಮ ಭಾವಕೋಶದಲ್ಲಿ ಸೇರಿ ಹೋಗಿರುವ ದೇವನದಿ. ಭಾರತೀಯ ಪರಂಪರೆಯಲ್ಲಿ ಗಂಗೆಯ ಜುಳು ಜುಳು ನಾದ ನಿರಂತರ. ಧಾರ್ಮಿಕವಾಗಿ, ಆಧ್ಯಾತ್ಮಿಕವಾಗಿ, ಪರಿಸರ ಮತ್ತು ಆರೋಗ್ಯದ ದೃಷ್ಟಿಯಿಂದ ಗಂಗಾ ನದಿಗೆ ಅಪಾರ ಮಹತ್ವವಿದೆ. ತನ್ನ ಮಡಿಲಲ್ಲಿ ನಾಗರೀಕತೆಗಳನ್ನು ಪೋಷಿಸಿದ ಈ ಮಹಾಮಾತೆ ಇಂದಿಗೂ ಕೋಟ್ಯಾಂತರ ಜನರ ಜೀವನಧಾರ. ಜೀವನದಲ್ಲಿ ಒಮ್ಮೆಯಾದರೂ ಕಾಶಿಗೆ ಹೋಗಿ ಗಂಗೆಯಲ್ಲಿ ಮುಳುಗು ಹಾಕಿ ವಿಶ್ವನಾಥನ ದರ್ಶನ ಮಾಡದಿದ್ದರೆ ಹಿಂದೂಗಳಿಗೆ ಸಮಾಧಾನವಿಲ್ಲ.

### ಸಹಜಶುದ್ಧ ಜೀವಜಲ

ಇಂದಿನ ಗಂಗೋತ್ರಿಯು ಗಂಗಾನದಿಯ ಉಗಮ ಸ್ಥಾನ. ಅದುವೇ ಭಗೀರಥ ಪ್ರಯತ್ನದ ಮೂಲ ಸ್ಥಾನ. ಇದು ಉತ್ತರಾಖಂಡ ರಾಜ್ಯದಲ್ಲಿದ್ದು ಸಮುದ್ರ ಮಟ್ಟದಿಂದ ಸುಮಾರು 12,769 ಅಡಿ ಎತ್ತರದಲ್ಲಿ ಇದೆ. ಗಂಗಾ ನದಿಯು ಗಂಗೋತ್ರಿ

ಯಿಂದ ಗಂಗಾಸಾಗರದವರೆಗೆ 2,525 ಕಿ.ಮೀ. ಪ್ರವಹಿಸುವ ಬಹು ದೊಡ್ಡ ನದಿ. ಉತ್ತರಾಖಂಡ, ಉತ್ತರಾಂಚಲ, ಉತ್ತರ ಪ್ರದೇಶ, ಬಿಹಾರ ಮತ್ತು ಪಶ್ಚಿಮ ಬಂಗಾಳ ರಾಜ್ಯಗಳ ವಿಶಾಲ ವಾದ ಭೂ ಪ್ರದೇಶದಲ್ಲಿ 31 ಮೀಟರ್ ಆಳವಾಗಿ ಹರಿಯುವ ಗಂಗಾ ನದಿಯು ಆ ಪ್ರದೇಶಗಳ ಅಂತರ್ಜಲವನ್ನು ಹೆಚ್ಚಿಸು ವುದರ ಜೊತೆಗೆ ತನ್ನ ಎಡ ಬಲ ಭೂಪ್ರದೇಶವನ್ನು ಸುಜಲಾಂ ಸುಫಲಾಂ ಮಾಡಿ ಲಕ್ಷಾಂತರ ಜನರಿಗೆ ಜೀವನದಾಯಿ ಯಾಗಿದೆ.

ಈ ಗಂಗಾನದಿಯು ಕೇವಲ ನೀರಿನ ಪ್ರವಾಹವಾಗಿರದೆ ಪ್ರವಹಿಸುವ ಭಾರತೀಯ ಸಂಸ್ಕೃತಿಯಾಗಿದೆ. ಭಾರತೀಯ ಆಸ್ತಿಕ ಜನರು ಇದನ್ನು ಗಂಗಾಮಾತೆ ಮತ್ತು ಗಂಗಾ ದೇವಿ ಎಂತಲೇ ಕರೆಯುತ್ತಾರೆ. ಇದು ಹನ್ನೆರಡು ತಿಂಗಳು ತುಂಬಿ ಹರಿಯುವ ಜೀವನದಿ. ಶಿವನ ಜಡೆಯಿಂದ ಧರೆಗಿಳಿದ ಕಾರಣ ಇದು ಶಿವನಷ್ಟೇ ಪರಮ ಪಾವನವಾದುದು. ಅಷ್ಟೇ ಅಲ್ಲ ಅತ್ಯಂತ ಪರಿಶುದ್ಧವಾದುದೂ ಹೌದು. ಇದು ಹಿಮಾಲಯದಿಂದ ಇಳಿದು ಬರುವಾಗ ಅಲ್ಲಿ ವಿಲಕ್ಷಣವಾದ ಮಣ್ಣು, ಖನಿಜದ್ರವ್ಯ ಮತ್ತು ವನಸ್ಪತಿಗಳೊಂದಿಗೆ ಮಿಶ್ರಣವಾಗಿ ಬರುವುದರಿಂದ ಈ ನೀರಿನಲ್ಲಿ ಸಹಜವಾಗಿ ರೋಗಾಣು ಪ್ರತಿರೋಧಕ ಶಕ್ತಿ ಇರುತ್ತದೆ. ಈ ಗಂಗಾ ಜಲವು ಎಷ್ಟು ದಿನ ಇಟ್ಟರೂ ಕೆಡುವುದಿಲ್ಲ. ಅಂತೆಯೇ ಭಾರತೀಯರು ಗಂಗಾ ಜಲವನ್ನು ತಾಮ್ರದ ಪಾತ್ರೆ ಯಲ್ಲಿಟ್ಟು ವರ್ಷಾನುವರ್ಷ ಉಪಯೋಗಿಸುವ ಪದ್ಧತಿಯು ರೂಢಿಯಲ್ಲಿದೆ. ಇಂದಿಗೂ ರಾಮೇಶ್ವರ ಮಹಾಲಿಂಗಕ್ಕೆ ಪ್ರತಿದಿನ ಗಂಗಾ ಜಲದಿಂದಲೇ ಅಭಿಷೇಕವಾಗುತ್ತಿರುವುದನ್ನು ಇಲ್ಲಿ ಗಮನಿಸಬೇಕು. ಗಂಗೋತ್ರಿಯಿಂದ ವಾರಣಾಸಿಯವರೆಗೆ ಬರುವ ಮಾರ್ಗದಲ್ಲಿ ಈ ಗಂಗಾನದಿಗೆ ಅನೇಕ ನದಿಗಳು ಕೂಡಿದರೂ ಸಹ ಈ ನೀರು ದೂಷಿತವಾಗುವುದಿಲ್ಲ. ಕಾರಣವೇನೆಂದರೆ ಗಂಗಾ ಜಲದಲ್ಲಿ ವಾತಾವರಣದಲ್ಲಿಯ ಪ್ರಾಣವಾಯುವನ್ನು ಹೀರಿಕೊಂಡು ತನ್ನ ಪರಿಶುದ್ಧತೆಯನ್ನು ಕಾಪಾಡಿಕೊಳ್ಳುವ ಗುಣವಿದೆ ಎಂಬುದನ್ನು ರುಡಕಿಯ ಪರ್ಯಾವರಣ ವಿಜ್ಞಾನಿ ಪ್ರೊ. ದೇಶೇಂದ್ರ ಸ್ವರೂಪ ಭಾರ್ಗವ ಇವರು ಪ್ರಯೋಗದಿಂದ ಕಂಡು ಹಿಡಿದಿದ್ದಾರೆ. ಗಂಗಾ ಜಲದ ಪರಿಶುದ್ಧತೆಯನ್ನರಿತ ಸಾಮ್ರಾಟ್ ಅಕ್ಬರ್ ಪ್ರತಿದಿನ ಗಂಗಾಜಲವನ್ನೇ ಸೇವಿಸುತ್ತಿದ್ದ ನಲ್ಲದೇ ತನ್ನೆಡೆಗೆ ಬಂದ ಅತಿಥಿಗಳಿಗೆ ಗಂಗಾಜಲವನ್ನೇ ಪಾನ ಮಾಡಿಸುತ್ತಿದ್ದನು. ಇದು ಅಲ್ಲದೇ ಬ್ರಿಟಿಷರು ಸಹ ಭಾರತದಿಂದ ತಮ್ಮ ದೇಶಕ್ಕೆ ಹೋಗುವಾಗ ಮಧ್ಯ ಮಾರ್ಗದಲ್ಲಿ ಕುಡಿಯಲು ಗಂಗಾ ಜಲವನ್ನೇ ತೆಗೆದು ಕೊಂಡು ಹೋಗುತ್ತಿದ್ದರೆಂದು ಹೇಳ ಲಾಗಿದೆ.

### ಅಖಂಡ ಭಾರತದ ಏಕಸೂತ್ರ

ಸಂಗಮ ಹಾಗೂ ಸಂಗಮಸ್ನಾನಗಳ ಮತ್ತೊಂದು ವೈಶಿಷ್ಟ್ಯವೇನೆಂದರೆ ಬೇರೆ ಬೇರೆ ಮೂಲಗಳಿಂದ ಹರಿದು ಬಂದು ನದಿಗಳು ಒಂದೆಡೆ ಸೇರುವುದೇ ಸಂಗಮಕ್ಷೇತ್ರವು. ಹೀಗೆ ಸೇರಿದ ನದಿಗಳು ಮುಂದೆ ಎಂದೂ ಅಗಲದೇ ಒಂದಾಗಿಯೇ ಸಮುದ್ರವನ್ನು ಸೇರುತ್ತವೆ. ಭಾರತದಲ್ಲೂ ಸಹ ಜನರು ಧರ್ಮ, ಸಂಪ್ರದಾಯ, ಜಾತಿ, ಭಾಷೆ ಮುಂತಾದ ಭೇದಗಳಿಂದ ತಮ್ಮನ್ನು ಬೇರೆ ಬೇರೆ ಮೂಲದವರೆಂತಲೇ ಭಾವಿಸಿ ಯಾವಾಗಲೂ ಕಲಹಗಳನ್ನು ಮಾಡುತ್ತಿರುತ್ತಾರೆ. ಆನರ ಈ ಭೇದ ಬುದ್ಧಿ ಯನ್ನು ತೊಲಗಿಸಿ ದೇಶದಲ್ಲಿ ಸದಾ ಶಾಂತಿ ನೆಲೆಸಲೆಂಬ ಉದ್ದೇಶದಿಂದ ಈ ದೇಶದ ಋಷಿಮುನಿಗಳು ಆಚಾರ್ಯರು ಸಾಧುಸಂತರು ಸಂಗಮಸ್ನಾನದ ವಿಧಾನವನ್ನು ಮಾಡಿದ್ದಿದೆ. ಸಂಗಮದಲ್ಲಿ ಮುಳು ಮುಳುಗಿ ಏಳುವಾಗ ನದಿಗಳ ಸಂಗಮ ವನ್ನು ಮತ್ತೆ ಮತ್ತೆ ನೋಡಿ ಬೇರೆ ಬೇರೆ ಮೂಲದ ನದಿಗಳು ಕೂಡಿಕೊಂಡು ಹೋಗುವಂತೆ ನಾವೂ ನಮ್ಮ ನಮ್ಮೆಲ್ಲ ಭೇದ ವನ್ನು ಮರೆತು ನಾವೆಲ್ಲರೂ ಒಂದಾಗಿ ಹೋಗಬೇಕೆನ್ನುವ ಮನೋಭಾವ ಮೂಡಿ ಬರುವುದರಿಂದಲೇ ಇಂದು ಜನರಲ್ಲಿ ಸೌಹಾರ್ದತೆಯು ಕಂಡು ಬರುವುದು. ಅಂತೆಯೇ 'ಅನೇಕತಾ ಮೇ ಏಕತಾಯಹ ಭಾರತೀಯೋಂಕಿ ವಿಶೇಷತಾ'ಎನ್ನುವ ಉಕ್ತಿಯು ಪ್ರಸಿದ್ಧವಾಗಿದೆ. ಹೀಗೆ ಗಂಗಾ ಮಾತೆ ಸರ್ವರನ್ನು ಪಾಪಮುಕ್ತರನ್ನಾಗಿಸುತ್ತ ತನ್ನ ಸಂಗಮಗಳಿಂದ ಸರ್ವರಲ್ಲಿ ಸೌಹಾರ್ದತೆಯನ್ನು ಮೂಡಿಸಿ ಭಾರತವು ಅಖಂಡವಾಗಿರಲು ಕಾರಣೀಭೂತಗಳಾಗಿದ್ದಾಳೆ.

### ಮಂಗಲಸ್ನಾನದ ತಾಣ

ಹೀಗೆ ಪವಿತ್ರವೂ ಪರಿಶುದ್ಧವೂ ಆದ ಗಂಗಾ ನದಿಯು ಗಂಗೋತ್ರಿಯಿಂದ ಬಂಗಾಲ ಸಾಗರವನ್ನು ತಲುಪುವ ಮಧ್ಯ ಮಾರ್ಗದಲ್ಲಿ ಅನೇಕ ಕಿರಿ ಕಿರಿ ನದಿಗಳು ಇದರೊಂದಿಗೆ ಸಂಗಮವಾಗುತ್ತವೆ. ಈ ಸಂಗಮಗಳಿಗೆ ಪ್ರಯಾಗವೆಂದು ಕರೆ ಯುವರು. ಗಂಗೋತ್ರಿ ಮತ್ತು ಹರಿದ್ವಾರಗಳ ಮಧ್ಯದಲ್ಲಿ 1) ದೇವ ಪ್ರಯಾಗ 2) ರುದ್ರಪ್ರಯೋಗ 3) ಕರ್ಣಪ್ರಯಾಗ 4) ನಂದ

ಪ್ರಯಾಗ 5) ವಿಷ್ಣುಪ್ರಯಾಗ ಹೀಗೆ ಐದು ಪ್ರಯಾಗಗಳಿವೆ. ಮುಂದೆ ಗಂಗಾ ನದಿಯು 800 ಕಿ.ಮೀ. ಪ್ರವಾಸ ಮಾಡಿದಾಗ ಅಲಹಬಾದ್‌ದಲ್ಲಿ ಯಮುನಾ ಮತ್ತು ಸರಸ್ವತಿ ನದಿಗಳೂ ಗಂಗೆಯನ್ನು ಸೇರುತ್ತವೆ ಇದುವೇ ತ್ರಿವೇಣಿ ಸಂಗಮ. ಇದಕ್ಕೆ ಪ್ರಯಾಗ ರಾಜ ಎಂತಲೂ ಕರೆಯುವರು. ಇಲ್ಲಿಯ ಸ್ನಾನಕ್ಕೆ ವಿಶೇಷ ಮಹತ್ವವಿದೆ. ಅಂತೆಯೇ ಪ್ರತಿಯೊಂದು ಪರ್ವಕಾಲ ದಲ್ಲಿ ಮಾಘಮಾಸದ ಮಹಾ ಕುಂಭದಲ್ಲಿ ದೇಶ ವಿದೇಶಗಳ ಕೋಟ್ಯಾಂತರ ಜನರು ಅಲಹಾಬಾದ್ ಪ್ರಯಾಗದಲ್ಲಿ ಮಂಗಲ ಸ್ನಾನ ಮಾಡಿ ತಮ್ಮ ಎಲ್ಲ ಪಾಪಗಳನ್ನು ಕಳೆದುಕೊಂಡು ಪುಣ್ಯ ಜೀವಿಗಳಾಗುತ್ತಾರೆ. ಚಂದ್ರನ ಕಿರಣಗಳು ತಾಪವನ್ನು ದೂರ ಮಾಡುವಂತೆ ಗಂಗಾಜಲವು ಸಕಲ ಜೀವಿಗಳ ಪಾಪವನ್ನು ದೂರ ಮಾಡುವುದು.

'ಗಂಗೆ ತವ ದರ್ಶನಾನ್ಮುಕ್ತಿಃ' 'ಗಂಗೆ ಗಂಗೇತಿ ಯೋ ಬ್ರೂಯಾತ್ ಯೋಜನಾನಾಂ ಶತೈರಪಿ' ಮುಂತಾದ ಉಕ್ತಿ ಗಳಲ್ಲಿ ಗಂಗಾಮಾತೆಯ ಸ್ಮರಣೆ ಮತ್ತು ದರ್ಶನದಿಂದಲೂ ಜೀವಿ ಗಳು ಪಾಪಮುಕ್ತರಾಗುತ್ತಾರೆಂದು ಹೇಳಿರುವುದರಿಂದ ಭಾವಿಕ ಭಕ್ತರು ಗಂಗೋತ್ರಿ, ಹೃಷಿಕೇಶ, ಹರಿದ್ವಾರ, ಪ್ರಯಾಗ, ಕಾಶೀ ಮತ್ತು ಗಂಗಾ ಸಾಗರ ಸಂಗಮಗಳಲ್ಲಿ ಸ್ನಾನಮಾಡಲು ಯಾವಾ ಗಲೂ ತೀರ್ಥಯಾತ್ರೆಯನ್ನು ಮಾಡುತ್ತಲೇ ಇರುತ್ತಾರೆ. ಈ ಗಂಗಾ ನದಿಯಿಂದಲೇ ಸಂಪೂರ್ಣ ಭಾರತವೇ ಒಂದು ಪುಣ್ಯ ಕ್ಷೇತ್ರವಾಗಿ ಪರಿಣಮಿಸಿದೆ.

**ಜ್ಞಾನಿವಾಹಿನಿ**

ಮುಂದೆ ಯಮುನಾ ಮತ್ತು ಸರಸ್ವತಿ ನದಿಗಳೊಂದಿಗೆ ಕೂಡಿ ಕೊಂಡ ಗಂಗಾನದಿಯು ಕಾಶಿಯನ್ನು ತಲುಪುತ್ತಿರು ವಂತೆ ಉತ್ತರವಾಹಿನಿಯಾಗಿ ಮಾರ್ಪಡುತ್ತದೆ. ವಾಸ್ತುಶಾಸ್ತ್ರದ ಪ್ರಕಾರ ಯಾವ ಊರಿನ ಮುಂದೆ ಹಳ್ಳ ಇಲ್ಲವೇ ನದಿಗಳು ಉತ್ತರ ದಿಕ್ಕಿಗೆ ಮುಖವಾಗಿ ಹರಿಯುವವೋ ಅದೊಂದು ದಿವ್ಯ ಕ್ಷೇತ್ರವಾಗಿ ಮಾರ್ಪಡುತ್ತದೆ. ಅಂತೆಯೇ ಶಿವನ ಜಟೆಯಿಂದ ಹರಿದು ಬಂದ ಗಂಗಾಮಾತೆ ಕಾಶಿಯಲ್ಲಿ ಉತ್ತರ ಮುಖವಾಗಿ ಹರಿದಿರುವುದರಿಂದ ವಿಶ್ವಕ್ಕೆ ಬಹು ದೊಡ್ಡ ತೀರ್ಥಕ್ಷೇತ್ರವಾಗಿ ಮಾರ್ಪಟ್ಟಿದೆ. ನದಿಯ ಉತ್ತರ ಮುಖ ಪ್ರವಾಹವು ಜ್ಞಾನವೃದ್ಧಿಗೆ ಕಾರಣವಾಗಿರುತ್ತದೆ. ಅಂತೆಯೇ ಕಾಶೀ ಕ್ಷೇತ್ರವು ಅನಾದಿ ಕಾಲ ದಿಂದಲೂ ಜ್ಞಾನಾರ್ಜನೆಯ ಪ್ರಮುಖ ಕೇಂದ್ರವಾಗಿ ಪ್ರಖ್ಯಾತಿ ಪಡೆದುಕೊಂಡಿದೆ. ಅಂತೆಯೇ ಪಂಚ ಪೀಠಗಳಲ್ಲೊಂದಾದ ಕಾಶೀ ಮಹಾಪೀಠವೂ ಸಹ ಜ್ಞಾನಪೀಠವೆಂದೇ ಪ್ರಸಿದ್ಧ ವಾಗಿದೆ. ಸಂಸ್ಕೃತ ಭಾಷೆ ಮತ್ತು ಶಾಸ್ತ್ರಗಳ ವಿಶೇಷಾಧ್ಯಯನ ಕ್ಕಾಗಿ ದೇಶ ವಿದೇಶಗಳ ಜನರು ಈಗಲೂ ಕಾಶಿಗೆ ಬರುತ್ತಲೇ ಇರುತ್ತಾರೆ. ಅಂತೆಯೇ ಕಾಶಿಯಲ್ಲಿ ಸಂಸ್ಕೃತ ವಿಶ್ವ ವಿದ್ಯಾಲಯ, ಕಾಶೀ ಹಿಂದೂ ವಿಶ್ವವಿದ್ಯಾಲಯ,ಕಾಶೀ ವಿದ್ಯಾ ಪೀಠ ಮತ್ತು ಪರ್ಷಿಯನ್ ವಿಶ್ವವಿದ್ಯಾಲಯಗಳೆಂಬ ಐದು ವಿಶ್ವ ವಿದ್ಯಾಲಯ ಗಳು ತಲೆಯೆತ್ತಿ ನಿಂತಿವೆ. ಇದು ಗಂಗೆಯ ಮಹತ್ತೆಂದರೆ ಅತಿಶ ಯೋಕ್ತಿ ಎನಿಸದು.

**ಸುಜಲಾಂ ಸುಫಲಾಂ..**

ಹೀಗೆ ಕಾಶಿಯಿಂದ ಬಿಹಾರ ಮತ್ತು ಪಶ್ಚಿಮ ಬಂಗಾಳ ಪ್ರದೇಶಗಳನ್ನು ಸುಜಲಾಂ ಸುಫಲಾಂಗೊಳಿಸುತ್ತ ಗಂಗಾಮಾತೆ ಬಂಗಾಲ ಮಹಾಸಾಗರದಲ್ಲಿ ಲೀನಗೊಳ್ಳುತ್ತಾರೆ. ಅಲ್ಲಿಯೂ ಗಂಗಾಸಾಗರವೆಂಬ ಬಹುದೊಡ್ಡ ತೀರ್ಥಕ್ಷೇತ್ರವು ನಿರ್ಮಾಣ ವಾಗಿದೆ. ಮಕರ ಸಂಕ್ರಮಣದ ಪರ್ವಕಾಲದಲ್ಲಿ ಲಕ್ಷಾಂತರ ಜನರು ಅಲ್ಲಿಯೂ ಮಂಗಲ ಸ್ನಾನ ಮಾಡಿ ಪಾವನರಾಗುತ್ತಾರೆ.


**ಸ್ವಾಮಿಯ ಆಲಯದಲ್ಲಿ ಸೆಲ್‌ಫೋನ್ ನಿಷೇಧ**

ತಿರುಮಲೆ ಸ್ವಾಮಿಯವರ ಆಲಯ ದಲ್ಲಿ ಸೆಲ್‌ಫೋನ್,ಕೆಮರಾ,ಇತರ ಎಲೆಕ್ಟ್ರಾನಿಕ್ ವಸ್ತುಗಳನ್ನು ನಿಷೇಧಿಸ ಲಾಗಿದೆ.ನಿಷೇಧಿಸಿದ ವಸ್ತುಗಳೊಂದಿಗೆ ಭಕ್ತರು ಕಂಡು ಬಂದರೆ ಅಂತಹ ವ್ಯಕ್ತಿಯ ರನ್ನು ಆಲಯದೊಳಗೆ ಅನುಮತಿಸಲಾಗು ವುದಿಲ್ಲ.ಆದ್ದರಿಂದ ಭಕ್ತರು ತಿ.ತಿ.ದೇ. ಯೊಂದಿಗೆ ಸಹಕರಿಸಬೇಕಾಗಿ ಕೋರ ಲಾಗಿದೆ.

- ಕಾರ್ಯನಿರ್ವಹಣಾಧಿಕಾರಿ



ಭಾಗವತ ಕಥಾಸಾಗರ

# ಭಗವಂತ ಸಮದರ್ಶಿ


ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್
ಅನುವಾದ : ಡಿ.ಎಸ್.ಬದ್ರಿನಾಥ್


ಭಗವಂತನು ಇಂದ್ರ ಪಕ್ಷಪಾತಿಯಂತೆ ವರ್ತಿಸುವುದು, ದಾನವರನ್ನು ವಧಿಸಿದ್ದನ್ನು ಕೇಳಿ ಪರೀಕ್ಷಿತ ಮಹಾರಾಜನು ವಾಸ್ತವದಲ್ಲಿ ನಾರಾಯಣನು ಪಕ್ಷಪಾತಿಯೇ ಅಥವಾ ನಿಷ್ಪಕ್ಷ ಪಾತಿಯೇ ಎಂದು ಶ್ರೀ ಶುಕದೇವಗೋಸ್ವಾಮಿ ಪ್ರಶ್ನಿಸಿದ್ದಾನೆ. ಭಗವಂತನು ಪರಮಾನಂದನಿಧಿಯಾದ್ದರಿಂದ ದೇವತೆಗಳ ಪಕ್ಷವನ್ನು ಸ್ವೀಕರಿಸುವುದರ ಮೂಲಕ ಆತನಿಗೆ ಆಗುವ ಲಾಭವಾದರೂ ಏನು? ಅದರಿಂದ ಆತನು ಸಾಧಿಸಬೇಕಾದುದು ಏನು? ನಿರ್ಗುಣವಾದ ಆತನಿಗೆ ಅಸುರರಿಂದ ಭಯವೆಂತದ್ದು? ಅವರೆಡೆಗೆ ಆತನು ದ್ವೇಷವನ್ನಾದರೂ ಹೇಗೆ ನೋಡಬಲ್ಲ? ಇಂತಹ ಪ್ರಶ್ನೆಗಳು ಪರೀಕ್ಷಿತ ಮಹಾರಾಜನನ್ನು ಬಹಳವಾಗಿಯೇ ಬಾಧಿಸಿವೆ. ಆದ್ದರಿಂದಲೇ ಅವುಗಳನ್ನು ಆತನು ಶುಕಮಹರ್ಷಿಗೆ ಕೇಳಿದ್ದಾನೆ. ಪರೀಕ್ಷಿತನು ಈ ರೀತಿಯಾಗಿ ಪ್ರಶ್ನಿಸಿದಾಗ ವ್ಯಾಸನಂದನನಾದ ಶುಕದೇವ ಗೋಸ್ವಾಮಿ ಈ ರೀತಿಯಾಗಿ ಉತ್ತರಿಸುತ್ತಾನೆ. ಈ ಸಂವಾದವು ಭಾಗವತದ ಸಪ್ತಮ ಸ್ಕಂದದಲ್ಲಿ ಬರುತ್ತದೆ.

"ಓ ಪರೀಕ್ಷಿತ ಮಹಾರಾಜ! ಹಿಂದೆ ರಾಜಸೂಯ ಯಾಗ ಸಮಯದಲ್ಲಿ ಧರ್ಮರಾಜ ಕೇಳಿದ ಪ್ರಶ್ನೆಗೆ ಪ್ರತ್ಯುತ್ತರವಾಗಿ ಶ್ರೀಯುತ ನಾರದ ಮಹರ್ಷಿ ಒಂದು ಇತಿಹಾಸವನ್ನೇ ದೃಷ್ಟಾಂತವಾಗಿ ನೀಡಿದ್ದಾರೆ. ಧರ್ಮರಾಜ ಮಾಡಿದ ರಾಜಸೂಯಯಜ್ಞದ ಪ್ರಾಂಗಣದಲ್ಲಿ ಶಿಶುಪಾಲನು ಶ್ರೀ ಕೃಷ್ಣನ ಚಕ್ರಾಯುಧದಿಂದ ಸಂಹರಿಸಲ್ಪಟ್ಟು ಸಾಯುಜ್ಯ ಪದವಿಗೆ ಅರ್ಹನಾಗಿದ್ದಾನೆ. ಅದನ್ನು ನೋಡಿದ ಧರ್ಮರಾಜನಿಗೆ ಆಶ್ಚರ್ಯವುಂಟಾಗಿದೆ. ಋಷಿಗಳ ಸಮಕ್ಷೇಮದಲ್ಲಿ ಆತನು ತನ್ನ ಸಂದೇಹವನ್ನು ನಾರದಮುನಿಗೆ ಕೇಳಿದ್ದಾನೆ."

ಶಿಶುಪಾಲನು ಕೃಷ್ಣನ ಕುರಿತು ಪರಮದ್ವೇಷವನ್ನು ಹೊಂದಿದವನು. ಅಂತಹವನಿಗೆ ಸಾಯುಜ್ಯಮುಕ್ತಿ ಲಭಿಸಿರುವುದು ಪರಮಾಶ್ಚರ್ಯದ ಸಂಗತಿ. ದಮಘೋಷನ ಸುತನಾದ ಶಿಶುಪಾಲನು ಸ್ಪಷ್ಟನುಡಿಗಳನ್ನು ಮಾತಾಡುವುದನ್ನು ಕಲಿತ ಚಿಕ್ಕ ಪ್ರಾಯದಿಂದಲೇ ಶ್ರೀ ಕೃಷ್ಣನನ್ನು ನಿಂದಿಸುವುದನ್ನು ಆರಂಭಿಸಿ ಮರಣದ ಪರ್ಯಂತ್ಯ ಪಾಪ ಸ್ವಭಾವವನ್ನೇ ಹೊಂದಿದವನು. ಆತನ ಸೋದರನಾದ ದಂತವಕ್ರರು ಕೂಡ ಅದೇ ಪದ್ಧತಿಯನ್ನೇ ಪಾಲಿಸಿದ್ದಾನೆ. ಶಿಶುಪಾಲದಂತವಕ್ರರು ಮಾತು ಮಾತಿಗೂ ಭಗವನ್ನಿಂದನೆಯನ್ನು ಮಾಡುತ್ತಿದ್ದರೂ ಅವರು ಸುಸ್ಥಿತಿಯಲ್ಲೇ ಇದ್ದಾರೆ. ಅವರ ನಾಲಿಗೆ ಯಾವುದೇ ಹುಣ್ಣು ಬಂದಿಲ್ಲ. ಅವರಿಗೆ ನರಕವಾಸ ಉಂಟಾಗಿಲ್ಲ. ಕಡೆಗೆ ಅವರು ಮಹನೀಯರ ಸನ್ನಿಧಿಯಾದ ಶ್ರೀ ಕೃಷ್ಣನನ್ನೇ ಪ್ರವೇಶಿಸಿದ್ದಾರೆ. ಈ ವಿಷಯವು ಧರ್ಮರಾಜನನ್ನು ವಿಸ್ಮಯಗೊಳಿಸಿದೆ. ಪಾಂಡುಸುತನಾದ ಧರ್ಮರಾಜನ ಸಂದೇಹವನ್ನು ನಿವಾರಿಸಲು ನಾರದಮುನಿ ಈ ವಿಧವಾಗಿ ಉತ್ತರಿಸಿದ್ದಾರೆ.

"ರಾಜಾ! ನಿಂದಾ ಸ್ತುತಿಗಳು, ಸತ್ಕಾರ - ತಿರಸ್ಕಾರಗಳು ಅಜ್ಞಾನದಿಂದಲೇ ಉಂಟಾಗುತ್ತವೆ. ಮಾಯೆಯ ಮೂಲಕ ಭೌತಿಕ ಜಗತ್ತಿನಲ್ಲಿ ದುಃಖವನ್ನು ಅನುಭವಿಸಲೆಂದೇ ಬುದ್ಧಿಜೀವಿಯ ದೇಹವು ಭಗವಂತನಿಂದ ರಚಿಸಲ್ಪಟ್ಟಿದೆ. ದೇಹ, ಆತ್ಮ-ಬುದ್ಧಿಗಳನ್ನು ಪಡೆದುಕೊಂಡ ಬುದ್ಧಿಜೀವಿಯು ದೇಹವೇ ತಾನೆಂದೂ, ದೇಹಸಂಬಂಧಗಳೇ ತನಗೆಲ್ಲವೂ ಎಂದು ಭಾವಿಸುತ್ತಾನೆ. ಈ ವೈಷಮ್ಯಗಳಿಂದಲೇ ಪ್ರಶಂಸೆ - ನಿಂದನೆಗಳೆಂಬ ದ್ವಂದ್ವಗಳುಂಟಾಗುತ್ತವೆ. ಆದರೆ ಪರಮಾತ್ಮನಿಗೆ ಶತ್ರು ಮಿತ್ರರೆಂಬರಿಲ್ಲ. ದಾನವರನ್ನು ಆದ ಶಿಕ್ಷಿಸುವುದು ಅವರ ಒಳ್ಳೆಯದಕ್ಕೇ ಆಗಿರುತ್ತದೆ. ಭಕ್ತರ ಸ್ತುತಿಯನ್ನು ಸ್ವೀಕರಿಸುವುದೂ ಸಹಾ ಅವರ ಒಳ್ಳೆಯದಕ್ಕೇ ಆಗಿರುತ್ತದೆ. ನಿಂದಾಸ್ತುತಿಗಳಿಂದ ಆ ದೇವದೇವನು ಪ್ರಸನ್ನನಾಗಲಾರನು. ಆದ್ದರಿಂದ ವೈರ, ಭಕ್ತಿ, ಭಯ,ಸ್ನೇಹ ಇಲ್ಲವೇ ಕಾಮದಂತಹವೆಲವುಗಳಿಂದಲೇ ಆಗಲೀ, ಅವುಗಳಲ್ಲಿ ಒಂದರಿಂದಲೇ ಆಗಲೀ, ಬುದ್ಧಿಜೀವಿಯ ಮನಸ್ಸು

ಭಗವಂತನ ಮೇಲೆ ಮಗ್ನನಾದರೆ ಒಂದು ವಿಧವಾದ ಫಲವು ಲಭಿಸುತ್ತದೆ. ಭಗವಂತನು ನಿತ್ಯಾನಂದಸ್ಥಿತನು. ಆದ್ದರಿಂದ ತನ್ನ ಮೇಲೆ ತೋರಿಸುವ ಶತ್ರುತ್ವವೂ ಮಿತ್ರುತ್ವವಾಗಿ ಆತನನ್ನು ಪ್ರಸನ್ನ ಗೊಳಿಸುಲಾರವು."ಧರ್ಮರಾಜಾ! ಗೋಪಿಕೆಯವರು ಕಾಮದ ಮೂಲಕ, ಕಂಸನು ಭಯದ ಮೂಲಕ, ಶಿಶು ಪಾಲನು ದ್ವೇಷದ ಮೂಲಕ, ಯಾದವರು ಭಕ್ತಿಯ ಮೂಲಕ, ನೀವು (ಪಾಂಡವರು) ಸ್ನೇಹದ ಮೂಲಕ, ನಾವು ಭಕ್ತಿಯ ಮೂಲಕ ಕೃಷ್ಣ ಕರುಣೆಯನ್ನು ಹೊಂದಿದ್ದೇವೆ. ಆದರೆ ಈ ಐದು ಉಪಾಯಗಳಿಂದಲೂ ಯಾರೂ ತಂತಮ್ಮ ರೀತಿಯಲ್ಲಿ ಭಗವಂತನನ್ನು ಸ್ಮರಿಸಿದರೂ ಕೂಡಾ ಮೋಕ್ಷವನ್ನು ಹೊಂದದೇ ಇರುತ್ತಾರೆ. ಆದ್ದರಿಂದ ಸ್ನೇಹದಿಂದಾಗಲೀ, ವೈರ ದಿಂದಾಗಲೀ ಮನುಷ್ಯ ಶ್ರೀ ಕೃಷ್ಣನನ್ನೇ ಸ್ಮರಿಸಬೇಕು (ತಸ್ಮಾತ್ ಕೇನ್ಮಾಪ್ಯುಪಾಯೇನ ಮನಃ ಕೃಷ್ಣ ನಿವೇಶನಂ).ನಿನ್ನ ಚಿಕ್ಕಪ್ಪನ ಮಗನಾದ ಶಿಶುಪಾಲ ದಂತವಕ್ರರು ಹಿಂದೆ ವಿಷ್ಣು ಭಕ್ತರು. ಆದರೆ ಬ್ರಾಹ್ಮಣ ಶಾಪದಿಂದ ಅವರು ವೈಕುಂಠದಿಂದ ಬಹಿಷ್ಕೃತಗೊಂಡು ಭೂ ಲೋಕಕ್ಕೆ ಬಂದಿದ್ದಾರೆ."

"ಧರ್ಮರಾಜಾ! ಬ್ರಹ್ಮತನಯರಾದ ಸನಕ ಸನಂದನ ಸನತ್ಕುಮಾರರು ಸಕಲಲೋಕ ಸಂಚಾರಗೈಯುತ್ತ ವಿಷ್ಣು ಲೋಕಕ್ಕೆ ಬಂದಿದ್ದಾರೆ. ನಿಜದಲ್ಲಿ ಅವರು ಮರಿ ಮುತ್ತಾತರ ವಯಸ್ಸಿನವರಾದರೂ ಐದು ವರ್ಷದ ಬಾಲಕರಂತೆ ಕಂಡಿದ್ದಾರೆ. ನಗ್ನರಾಗಿದ್ದ ಬಾಲರು ವೈಕುಂಠವನ್ನು ಪ್ರವೇಶಿಸುತ್ತಲೇ ದ್ವಾರಪಾಲಕರಾದ ಜಯವಿಜಯರು ಅವರನ್ನು ತಡೆದಿದ್ದಾರೆ ಅದುಬ್ರಹ್ಮಸುತರನ್ನು ಕೆರಳಿಸಿದೆ. ಅವರು ಕೂಡಲೇ ಅಸುರ ಜನ್ಮಗಳನ್ನು ಹೊಂದಿರಿ ಎಂದು ಶಪಿಸಿದ್ದಾರೆ. ಈ ರೀತಿಯಾಗಿ ಶಪಿತರಾದ ಜಯವಿಜಯರು ವೈಕುಂಠವನ್ನು ತೊರೆದು ಹೋಗುತ್ತಿರುವಾಗ ಸನತ್ಕುಮಾರರಿಗೆ ಅವರ ಮೇಲೆ ಕರುಣೆ ಹುಟ್ಟಿದೆ. ಮೂರು ಜನ್ಮಾಂತರ ದ್ವಾರಪಾಲಕರು ತಿರುಗಿ ಮರಳಿ ತಮ್ಮ ಸ್ವಸ್ಥಾನವನ್ನು ಪಡೆಯುತ್ತಾರೆಂದು ಅವರು ಶಾಪೋಶಮನವನ್ನು ಹೇಳಿದ್ದಾರೆ.ಮೂರು ಜನ್ಮಕ್ಕೆ ಅವರ ಶಾಪವು ಪರಿಸಮಾಪ್ತಗೊಳ್ಳುವುದೆಂದು ಅವರು ತಿಳಿಸಿದ್ದಾರೆ.

'ರಾಜಾ! ಶ್ರೀ ವಿಷ್ಣು ಪರಿಚಾರಕರೇ (ಜಯವಿಜಯರು) ದಿತಿಯ ಗರ್ಭದಲ್ಲಿ ಮೊದಲು ಹಿರಣ್ಯಕಶಿಪು ಹಾಗೂ ಹಿರಣ್ಯಕ್ಷರಾಗಿ ಜನಿಸಿದ್ದಾರೆ. ದೇವದೇವನಾದ ಶ್ರೀಹರಿ ನೃಸಿಂಹನ ರೂಪದಲ್ಲಿ ಬಂದು ಹಿರಣ್ಯಕಶಿಪುವನ್ನು ವಧಿಸಿದ್ದಾರೆ. ಧರಣಿಯನ್ನು ಗರ್ಭೋದಕ ಸಮುದ್ರದಿಂದ ಉದ್ಧರಿಸುವ ಸಮಯದಲ್ಲೇ ಹಿರಣ್ಯಾಕ್ಷ ಪ್ರತಿರೋಧ ಮಾಡಲು ಯಜ್ಞವರಾಹಮೂರ್ತಿ ಆ ದಾನವನನ್ನು ಸಂಹರಿಸಿದ್ದಾನೆ.ಹಿರಣ್ಯಕಶಿಪುವಿನ ಮಗನೇ ಪ್ರಹ್ಲಾದನು. ಪ್ರಹ್ಲಾದನು ಭಗವಂತನಿಂದ ಸದಾ ರಕ್ಷಿಸಲ್ಪಡುವ ಕಾರಣಕ್ಕೆ, ಆತನನ್ನು ಕೊಲ್ಲಲು ಹಿರಣ್ಯಕಶಿಪು ಎಷ್ಟೇ ಪ್ರಯತ್ನ ಪಟ್ಟರೂ ಸಫಲನಾಗಲಿಲ್ಲ. ಧರ್ಮರಾಜಾ! ಜಯವಿಜಯರೇ ನಂತರ ಕೇಶಿನಿಯ ಗರ್ಭದಲ್ಲಿ ರಾವಣ ಕುಂಭಕರ್ಣರಾಗಿ ಜನಿಸಿ ಲೋಕದ ಜನರಿಗೆ ಕಂಟಕಪ್ರಾಯರಾಗಿದ್ದಾರೆ. ಅವರಿಬ್ಬರೂ ಶ್ರೀ ರಾಮಚಂದ್ರನ ಕೈಯಿಂದ ಹತರಾಗಿದ್ದಾರೆ. ಇನ್ನು ಮೂರನೇ ಜನ್ಮದಲ್ಲಿರುವರು ಕ್ಷತ್ರಿಯ ಕುಲದಲ್ಲಿ ನಿನ್ನ ಚಿಕ್ಕಪ್ಪನ ಮಕ್ಕಳಾಗಿ ಜನಿಸಿದ್ದಾರೆ.ಶ್ರಿಕೃಷ್ಣನ ವಜ್ರಾಯುಧದಿಂದ ಹತರಾದ ಇವರ ಶಾಪವು ಪೂರ್ತಿಯಾಗಿ ಮುಗಿದಿದೆ. ಆದ್ದರಿಂದ ಅವರು ಮರಳಿ ತಮ್ಮ ಲೋಕಕ್ಕೆ ತೆರಳಿದ್ದಾರೆ.

ನಾರದರ ಈ ವಿವರಣೆಯು ಧರ್ಮರಾಜನಲ್ಲಿ ಮತ್ತೊಂದು ಸಂದೇಹಕ್ಕೀಡು ಮಾಡಿದೆ. ಹಿರಣ್ಯಕಶಿಪುವಿಗೂ ಆತನ ಪುತ್ರನಾದ ಪ್ರಹ್ಲಾದನಿಗೂ ವೈರವೇರ್ಪಡಲು ಕಾರಣವನ್ನು ತಿಳಿದುಕೊಳ್ಳಬೇಕೆಂದಿದ್ದಾನೆ. ಪ್ರಹ್ಲಾದನು ಅಂತಹ ಘನವಾದ ಭಕ್ತನು ತೊಂದರೆಗೇಡಾಗಿದ್ದರೂ ಹೇಗೆಂದು ತಿಳಿಯಬೇಕೆಂಬ ಹಂಬಲ ಧರ್ಮರಾಜನಲ್ಲಿ ಬೆಳೆದಿದೆ. ಅದೇ ವಿಷಯವನ್ನು ಆತನು ನಾರದಮುನಿಯಲ್ಲಿ ಕೇಳಿದ್ದಾನೆ. ಧರ್ಮರಾಜ ಕೇಳಿದ ಪ್ರಶ್ನೆಯಿಂದ ಭಕ್ತಪ್ರಹ್ಲಾದನ ಕಥೆಯನ್ನು ನಾರದಮುನಿ ವರ್ಣಿಸಲನುವಾಗಿದ್ದಾನೆ. ಹೀಗೆ ಪ್ರಹ್ಲಾದ ಚರಿತ್ರೆಯು ಇವರೀರ್ವರ ನಡುವೆ ಭಾಗವತದ ಭಾಗವಾಗಿ ಸಾಕ್ಷಾತ್ ಶ್ರೀಕೃಷ್ಣನ ಸಮಕ್ಷಮದಲ್ಲಿ ಹೇಳಲ್ಪಟ್ಟು ಒಂದು ಮಹೋನ್ನತ ಸ್ಥಾನವನ್ನೇ ಪಡೆದಿದೆ.ಶ್ರೀಯುತ ನಾರದರು ಇದನ್ನು ಅಮೋಘವಾಗಿ ವಿವರಿಸಿದ್ದಾರೆ.

ವಿಷ್ಣು ಭಗವಂತನು ವರಹಾರೂಪದಿಂದ ಹಿರಣ್ಯಕಶಿಪುವನ್ನು ವಧಿಸಿದಾಗ ಹಿರಣ್ಯಕಶಿಪು ಘೋರ ಕ್ಷುದ್ರನಾಗಿ ತ್ರಿಶೂಲ ಪಾಣಿಯಾಗಿ ರಾಕ್ಷಸರು ತಕ್ಷಣಕ್ಕೆ ಮಾಡಬೇಕಾದ ಕಾರ್ಯವನ್ನು ಬೋಧಿಸಿದ್ದಾನೆ.

"ಓ ದೈತ್ಯದಾನವರೇ ! ಎಲ್ಲರೂ ಸಾವಧಾನದಿಂದ ನನ್ನ ಮಾತನ್ನು ಕೇಳಿರಿ ಅನಂತರ ನಾನು ಹೇಳಿದ ಹಾಗೆ ಕಾರ್ಯ ನಿರತರಾಗಿರಿ. ಅಲ್ಪ ಸಂಖ್ಯಾತರಾದ ದೇವತೆಗಳೆಲ್ಲರೂ ಸೇರಿ ನನ್ನ ಪ್ರಿಯ ತಮ್ಮನಾದ ಹಿರಣ್ಯಾಕ್ಷನನ್ನು ಸಂಹರಿಸಿದ್ದಾರೆ. ಆದ್ದರಿಂದ ನೀವೆಲ್ಲರೂ ಭೂಮಿಯ ಮೇಲೆ ತಪಸ್ಸು, ಯಜ್ಞ, ವೇದಾಧ್ಯಯನ, ವ್ರತಪಾಲನೆ ದಾನವೇ ಮುಂತಾದ ಪುಣ್ಯ ಕಾರ್ಯಗಳಲ್ಲಿ ತೊಡಗಿರುವ ಜನಗಳನ್ನು ನಾಶಮಾಡಿರಿ. ಬ್ರಾಹ್ಮಣರನ್ನು ಸಂಹರಿಸಿರಿ. ಬ್ರಾಹ್ಮಣರಿಲ್ಲದಿದ್ದರೆ ಯಜ್ಞ ನಿರ್ವಹಣೆ ಇರದು ಯಜ್ಞ ನೆರವೇರದಿದ್ದರೆ ದೇವತೆಗಳು ಅಪ್ರಯತ್ನವಾಗಿ ಮರಣಿಸುತ್ತಾರೆ."ಈ ವಿಧವಾಗಿ ಹಿರಣ್ಯಕಶಿಪುವಿನ ಮಾತುಗಳು ದೈತ್ಯದಾನವರಲ್ಲಿ ತೀವ್ರವಾದ ಉತ್ಸಾಹವನ್ನುಂಟು ಮಾಡಿದೆ. ಆ ಕ್ಷಣವೇ ಅವರು ಹಿರಿಣ್ಯಕಶಿಪುವಿನ ಆದೇಶಾನುಸಾರ ವಿಧ್ವಂಸರ ಕೃತ್ಯಗಳಲ್ಲಿ ತೊಡಗಿದ್ದಾರೆ.ಹಿರಣ್ಯಕಶಿಪುವಿನ ಅನುಚರರಿಂದುಂಟಾದ ಈ ಉತ್ಪಾತಗಳಿಂದ ಜನರು ಬವಣೆಗೊಂಡು ವೈದಿಕ ಕಾರ್ಯಗಳನ್ನು ಮಾಡುವುದನ್ನೇ ನಿಲ್ಲಿಸಿದ್ದಾರೆ. ಇದರಿಂದ ದೇವತೆಗಳಿಗೆ ಯಜ್ಞಫಲವು ಲಭಿಸಲಿಲ್ಲ ಅವರು ಸಹಾ ವಿಕೋಪಗಳಿಗೆ ತುತ್ತಾಗಿದ್ದಾರೆ. ಇದೇ ಕಾರಣಕ್ಕಾಗಿ ಅವರು ಸ್ವರ್ಗವನ್ನು ತೊರೆದು ದಾನವರಿಗೆ ಕಾಣಿಸಿಗದೇ ಧರಣಿಯ ಮೇಲ್ ಸಂಚರಿಸಲು ಆರಂಭಿಸಿದ್ದಾರೆ.






ಯೋಗ ವಿದ್ಯೆಯು ವಿಶ್ವಕ್ಕೆ ಭರತವರ್ಷವು ನೀಡಿರುವ ಒಂದು ಮಹಾಕೊಡುಗೆ. ಅದು ಅತಿ ಪ್ರಾಚೀನವಾಗಿರುವಂತೆಯೇ ಸಮೀಚೀನವೂ ಕೂಡ ಆಗಿದೆ. ವೇದೋಪನಿಷತ್ತುಗಳಲ್ಲಿ, ಶೃತಿಶಾಸ್ತ್ರ ಪುರಾಣಗಳಲ್ಲಿ, ಭಗವದ್ಗೀತೆ ಮತ್ತು ಇತಿಹಾಸಗಳಲ್ಲಿ ಕೂಡ ಯೋಗಕ್ಕೆ ಸಂಬಂಧಪಟ್ಟ ಉಲ್ಲೇಖಗಳಿರುವುದನ್ನು ನೋಡಿದರೆ ಇದಕ್ಕೆ ಸುಮಾರು ನಾಲ್ಕೈದು ಸಾವಿರ ವರ್ಷಗಳ ಹಿನ್ನೆಲೆ ಇರುವಂತೆ ಕಾಣುತ್ತದೆ. ಆದರೂ ಈ ಒಂದು ವಿದ್ಯೆಯು ಯಾವುದೇ ಒಂದು ವ್ಯಕ್ತಿಗೆ, ಸಮಾಜಕ್ಕೆ, ಪಂಗಡಕ್ಕೆ, ಜಾತಿಗೆ,ಧರ್ಮಕ್ಕೆ ಅಥವಾ ರಾಷ್ಟ್ರಕ್ಕೆ ಸೀಮಿತವಾದುದಿಲ್ಲ. ಇದು ಇಡಿಯ ವಿಶ್ವಕ್ಕೆ ಪ್ರಾಚೀನ ಋಷಿಮುನಿಗಳು ನೀಡಿರುವ ಒಂದು ವರ ಪ್ರಸಾದ.ಹಾಗಾದರೆ ಈ ಮಹಾ ವಿದ್ಯೆಯು ಎಲ್ಲಿಂದ ಪ್ರಾರಂಭವಾಯ್ತು? ಅದರ ಕರ್ತೃಗಳಾರು? ಅದು ಹೇಗೆ ಬೆಳೆದು ಬಂತು? ಅದರಲ್ಲಿರುವ ಅಂತಹ ಅಂತಃ ಶಕ್ತಿ ಏನು? ಇವೇ ಮೊದಲಾದ ಪ್ರಶ್ನೆಗಳು ಸಾಮಾನ್ಯವಾಗಿ ನಮ್ಮ ಮುಂದೆ ಬರುತ್ತವೆ.

ಪ್ರಾಚೀನ ಮಹರ್ಷಿಗಳು-'ಯೋಗೀಶ್ವರಂ ಶಿವಂ ವಂದೇ-ವಂದೇ ಯೋಗೇಶ್ವರಂ ಹರಿಮ್' ಎಂದರು - ಎಂದರೆ ಶ್ರೀ ಮನ್ನಾರಾಯಣನನ್ನು ಮತ್ತು ಶ್ರೀ ರುದ್ರನನ್ನು (ಶಂಕರನನ್ನು) ಯೋಗಿಗಳೆಲ್ಲರ ಯೋಗೇಶ್ವರರು ಎಂಬುದಾಗಿಯೂ ಅಲ್ಲದೇ ಇವರೇ ಮೊತ್ತ ಮೊದಲನೆಯ ಯೋಗಾಚಾರ್ಯರೆಂಬುದಾಗಿಯೂ ಮಹರ್ಷಿಗಳೆಲ್ಲರ ಅಭಿಪ್ರಾಯ. ಮೂಲತಃ ಶಂಕರ-ನಾರಾಯಣರಲ್ಲಿ ಯಾವ ಭೇದವಿಲ್ಲದಿದ್ದರೂ ಅನೂಚಾನವಾಗಿ ಇವರೀರ್ವರ ಹೆಸರಿನಲ್ಲೂ ಒಂದೊಂದು ಯೋಗ ಸಂಪ್ರದಾಯವು ನಡೆದುಕೊಂಡು ಬಂದಿರುವುದು ರೂಢಿಯಲ್ಲಿದೆ. ಹೀಗಾಗಿ ಕೆಲ ಕೆಲವು ಉಪನಿಷತ್ತುಗಳಲ್ಲಿ ಶ್ರೀಮನ್ನಾರಾಯಣನೇ ಯೋಗದ ಮೂಲ ಆಚಾರ್ಯನೆಂದು ಪ್ರತಿಪಾದಿಸಿದರೆ ಇನ್ನು ಕೆಲವು ಉಪನಿಷತ್ತುಗಳಲ್ಲಿ ರುದ್ರನನ್ನೇ ಯೋಗದ ಮೂಲ ಆಚಾರ್ಯನೆಂಬುದಾಗಿ ನಿರೂಪಿಸಲಾಗಿದೆ. ಆದರೂ ಉಪನಿಷತ್ತುಗಳಲ್ಲಿ ವಿಷ್ಣು (ನಾರಾಯಣ) ಮತ್ತು ಶಂಕರಿಂದಲೇ ಹಿರಣ್ಯಗರ್ಭನೆಂನ್ನಿಸಿ ಕೊಂಡಿರುವ ಬ್ರಹ್ಮನಿಗೆ ಯೋಗಪದೇಶವಾಯಿತೆಂದೂ ಮತ್ತು ಆತನು ಅನೇಕ ಋಷಿಮಹರ್ಷಿಗಳಾದ ಯೋಗಾಚಾರ್ಯರುಗಳಿಂದ ಆ ಯೋಗವಿದ್ಯೆಯನ್ನು ಪ್ರಚುರ ಪಡಿಸಿದನೆಂದು ತಿಳಿಯುತ್ತದೆ.

ವೇದೋಪನಿಷತ್ತುಗಳ ಕಾಲದಲ್ಲಾಗಲೀ ಅಥವಾ ಪುರಾಣೇತಿಹಾಸಕಾಲದಲ್ಲಾಗಲೀ ಗುರುಶಿಷ್ಯರಲ್ಲಿ ಒಂದು ಆತ್ಮೀಯತೆಯ ಸಂಬಂಧವಿತ್ತು. ಅಲ್ಲಿ ಕೊಟ್ಟು ತೆಗೆದುಕೊಳ್ಳುವ ವ್ಯಾಪಾರೀಮನೋಭಾವವಿರಲಿಲ್ಲ. ಲೋಕಕಲ್ಯಾಣಾಕಾಂಕ್ಷೆಯಿಂದಲೇ ಗುರುಗಳು ಶಿಷ್ಯರಿಗೆ ವಿದ್ಯಾದಾನವನ್ನು ಮಾಡುತ್ತಿದ್ದರು, ಶಿಷ್ಯರಾದರೂ ಅದೇ ಭಾವನೆಯಿಂದಲೇ ಕಲಿತು ಸಾಧನೆ ಮಾಡುತ್ತಿದ್ದರು.ಆಗ ಯಾಕೆ - ಇತ್ತೀಚೆಗೆ ಕೆಲವು

ದಶಕಗಳ ಹಿಂದಿನವರೆಗೂ ಯೋಗವು ಸಾಗಿಬಂದ ರೀತಿಯನ್ನು ನೋಡಿದರೆ ಈ ಗುರುಶಿಷ್ಯ.ಬಾಂಧವ್ಯದಲ್ಲಿ ಒಂದು ಆದರ್ಶವಾದ ಪ್ರೇಮ ಸಂಬಂಧವಿತ್ತು. ಅಲ್ಲಲ್ಲೊ ಕೊಟ್ಟು ಕೊಳ್ಳುವ ವ್ಯಾಪಾರೀ ಧರ್ಮವು ಇಣಿಕಿ ಹಾಕದಂತೆ ಕಾಣುವುದಿಲ್ಲ.ಆದುದರಿಂದಲೇ ನಶಿಸಿಯೇ ಹೋಗಬೇಕಾಗಿದ್ದ ಯೋಗ ವಿದ್ಯೆಯು ಮಾನ್ಯತೆಯನ್ನು ಹೊಂದಿದರೂ ಅದು ಬೇಸಿಗೆಯ ಕ್ಷೀಣ ನದಿಯಂತೆ ಹರಿಯುತ್ತಲೇ ಬಂದಿದೆ. ಈ ಮಧ್ಯಕಾಲದಲ್ಲೇ ಅದು ಸಮುದ್ರೋಲ್ಲಂಘನ ಮಾಡಿ ತನ್ನ ಉಜ್ವಲ ಕೀರ್ತಿಯನ್ನು ವಿದೇಶಗಳಲ್ಲೂ ಹರಡಿತ್ತು ಎಂಬುದು ಇಲ್ಲಿ ನೆನೆಪಿಸಿಕೊಳ್ಳತಕ್ಕ ವಿಚಾರ ಶ್ರೀ ವಿವೇಕಾನಂದರು. ಶ್ರೀ ರಾಮತೀರ್ಥರೇ ಮೊದಲಾದ ಸನ್ಯಾಸಿಗಳು ವಿದೇಶಗಳಲ್ಲಿ ಭಾರತೀಯ ಸಂಸ್ಕೃತಿಯನ್ನೂ, ಯೋಗವಿದ್ಯೆಯನ್ನೂ ಪ್ರಚಾರ ಪಡಿಸುವುದರಲ್ಲಿ ಅತಿ ಮುಖ್ಯವಾದ ಪಾತ್ರವನ್ನು ವಹಿಸಿದ್ದಾರೆ. ಇದೇ ಕಾಲದಲ್ಲಿ ತಮ್ಮ ತಮ್ಮ ಕ್ಷೇತ್ರದಲ್ಲಿ ಶ್ರಮಿಸಿದ್ದಾರೆ. ಇದಕ್ಕೆ ವ್ಯಾಪಕವಾದ ಪುನಶ್ಚೇತನವನ್ನಿತ್ತು ಯೋಗವಿದ್ಯೆಯ ಕೀರ್ತಿ ಪತಾಕೆಯನ್ನು ವಿಶ್ವದಾದ್ಯಂತ ಹಾರಿಸಿದವರೆಂದರೆ ಶ್ರೀ ರಮಣ ಮಹರ್ಷಿಗಳು ಮತ್ತು ಶ್ರೀ ಅರವಿಂದರು. ಇವರು ಕ್ಷೀಣಿಸುತ್ತಿದ್ದ ಯೋಗ ವಿದ್ಯೆಯ ದೀಪಜ್ಯೋತಿಗೆ ತೈಲವನ್ನೆರೆದು ಅದು ಪ್ರಜ್ವಲಿಸಿ ಉರಿಯುವಂತೆ ಮಾಡಿದರು. ಹೀಗಾಗಿ ವಿದೇಶದ ಆಸ್ತಿಕರನೇಕರು ಭಾರತದ ಕಡೆಗೆ ಆಶಾಭಾವನೆಯಿಂದ ನೋಡುವಂತಾಯ್ತು. ಅವರಲ್ಲನೇಕರಿಗೆ ಯೋಗವಿದ್ಯೆಯ ಸಂಬಂಧದಲ್ಲಿ ಅದರ ಸಾಧನೆಯ ವಿಚಾರದಲ್ಲಿ ವಿಶೇಷ ಆಸಕ್ತಿಯುಂಟಾಯಿತು. ಬಾಹ್ಯ ಸುಖ ಸಂಪತ್ತಿನಲ್ಲಿ ಭೋಗೈಶ್ವರ್ಯಗಳಲ್ಲಿ ಶಾಶ್ವತ ಸುಖ ಕಾಣದ ಅವರು ಭಾರತೀಯ ಸಂಸ್ಕೃತಿಯಲ್ಲಿ, ಯೋಗ ವಿದ್ಯೆಯಲ್ಲಿ ಆನಂದವನ್ನು ಕಂಡು ಆಧ್ಯಾತ್ಮಿಕ ಮಹದ್ವ್ಯಕ್ತಿಗಳೂ ಅಲ್ಲಿ ಅಪಾರ ಕೆಲಸವನ್ನು ಮಾಡಿದ್ದುಂಟು.



ಆದರೆ ಇಡೀ ಕಾಳಿನ ಜೊತೆಯಲ್ಲಿ ಜೊಳ್ಳುತೂರಿ ಬಂದಂತೆ ಈ ಕಾಲದಲ್ಲೇ ಅನೇಕ ವ್ಯಾಪಾರೀ ಮನೋಭಾವದ ಯೋಗಶಿಕ್ಷಕರು ಕೇವಲ ಹಣಗಳಿಸುವ ದೃಷ್ಟಿಯಿಂದ ವಿದೇಶ ಸಂಚಾರ ಕೈಗೊಂಡು ಯೋಗಶಿಕ್ಷಣದ ನೆಪದಲ್ಲಿ ಧನ ಸಂಪಾದನೆಗೆ ನಿಂತಿರುವುದು ತೀರ ಶೋಚನೀಯವಾದ ವಿಚಾರ. ಅಂತೂ ಯಾವುದೋ ರೀತಿಯಲ್ಲಿ ಇಂದು ಯೋಗ ವಿದ್ಯೆಯ ಮಾತೃಸ್ಥಾನವಾದ ಭಾರತದಲ್ಲಿದ್ದು ನಶಿಸುತ್ತಿದ್ದರೂ ವಿದೇಶಗಳಲ್ಲದು ವ್ಯಾಪಕವಾಗಿ ಬೆಳೆಯುತ್ತಿದೆ ಎಂಬುದಂತೂ ತೀರಸತ್ಯ. ಇಂಥಲ್ಲಿ ನಮ್ಮಿಂದಲೇ ಕಲಿತ ಯೋಗವಿದ್ಯೆಗೆ ವಿಜ್ಞಾನದ ಲೇಪನವನ್ನಿತ್ತು ತಿರುಗಿ ನಮಗೇ ಮರಳಿಸುವ ಪ್ರಯತ್ನ ನಡೆದಿದೆ... ಅದರಲ್ಲಿಯೇ ಆಗಲಿ ಎಲ್ಲಿಯೇ ಆಗಲಿ ಈ ಹಿಂದಿನ ಗುರುಶಿಷ್ಯ ಬಾಂಧವ್ಯ ವಳಿದು ಅಲ್ಲಿ ಕೊಟ್ಟುಕೊಳ್ಳುವ ಮಾರು ಕಟ್ಟೆಯ ಧರ್ಮವು ಕಾಣಿಸಿಕೊಂಡಿರುವುದು ತೀರ ಶೋಚನೀಯವೆಂದು ಹೇಳದೆ ವಿಧಿಯಿಲ್ಲ. ಅದೊಂದು ಮುಖ-ಇದೊಂದು ಮುಖ. ಇದು ಪ್ರಾಚೀನಕಾಲದಿಂದ ಯೋಗವು ನಡೆದು ಬಂದ ದಾರಿ.ಇದೇ ಯೋಗದ ವಿರಾಟ್ ಸ್ವರೂಪ.

ವಾಸ್ತವಿಕವಾಗಿ ಯೋಗ ಮಾರ್ಗದಿಂದ ಐಹಿಕಾಭ್ಯುದಯ ಮತ್ತು ಆಮುಷ್ಮಿಕ ಶ್ರೇಯಸ್ಸು ಇವೆರಡನ್ನು ಧಾರಾಳವಾಗಿ ಸಾಧಿಸಬಹುದಾಗಿದೆ. ಅಭ್ಯಾಸ ಪ್ರಧಾನವಾದ ಯೋಗ ಮಾರ್ಗದಿಂದ ಅದ್ಭುತ ಮಹಿಮೆಯನ್ನೂ ಮೋಕ್ಷ ಸಾಮ್ರಾಜ್ಯವನ್ನೂ ಸಾಧಿಸಿದ ಅನೇಕ ಮಹಾನುಭಾವರುಗಳು ಇದ್ದಾರೆ. ಯೋಗ ಪ್ರಸ್ಥಾನ ಪ್ರಾಚೀನವಾದುದೆಂಬ ಪ್ರತೀತಿಯೂ ಪುರಾಣಗಳಲ್ಲಿ ಪ್ರಸಿದ್ಧವಾಗಿದೆ.ರಾಮಾಯಣದಲ್ಲಿ ಲಕ್ಷ್ಮಣನೂ ಯೋಗ ಮಾರ್ಗದಿಂದಲೇ ಸ್ವಸ್ಥಾನವಾದ ವೈಕುಂಠವನ್ನು ಸೇರಿದನೆಂಬ ಐತಿಹ್ಯವಿದೆ. ಭಾರತ ಭಾಗವತಗಳಲ್ಲಿ ಬಲರಾಮ, ಶ್ರೀ ಕೃಷ್ಣ, ವಿದುರ ಮೊದಲಾದವರು ಯೋಗಾರೂಢರಾಗಿಯೇ ಪರಂ ಧಾಮವನ್ನೈದಿದರೆಂದಿದೆ. “ಯೋಗೇನಾಂ ತೇತನುತ್ಯ ಜಾಮ್”

ಯೋಗಶಾಸ್ತ್ರವೆಂಬುದು ಒಂದು ದೇಶಕ್ಕಾಗಲೀ ಒಂದು ಜನಾಂಗಕ್ಕಾಗಲೀ ಅಥವಾ ಒಂದು ಧರ್ಮಕ್ಕಾಗಲಿ ವಿಷಯವಾಗಿದ್ದು ಭರತಖಂಡದ ಪ್ರಮುಖ ವಿಜ್ಞಾನಗಳಲ್ಲೊಂದಾಗಿದೆ. ಭಾರತದ ವೈದ್ಯ ವಿಜ್ಞಾನವಾದ ಆಯುರ್ವೇದಶಾಸ್ತ್ರವೂ ಯೋಗ ಶಾಸ್ತ್ರವೂ ಮೊತ್ತಮೊದಲಿಗೆ ಈ ದೇಶದಲ್ಲೇ ಉತ್ಪತ್ತಿಯಾದುವು ಎಂತಲೂ ಈ ಶಾಸ್ತ್ರಗಳ ಪೂರ್ವ ಇತಿಹಾಸವೂ ಇನ್ನಾವ ದೇಶಗಳಲ್ಲಿ ದೊರೆಯಲಾರವು ಎಂಬುದು ತಿಳಿದು ಬಂದಿದೆ. ಆದರೆ ಸಹಸ್ರಾರು ವರುಷಗಳ ಹಿಂದೆಯೇ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಯೋಗಾಭ್ಯಾಸವು ಪ್ರಚಾರದಲ್ಲಿದ್ದ ಉದಾಹರಣೆಗಳು ದೊರಕಿವೆ.ಪ್ರಾಯಶಃ ಕೆಲವು ಸಾವಿರ ವರ್ಷಗಳ ಹಿಂದೆಯೇ ಈ ವಿಜ್ಞಾನವು ಬೇರೆ ಬೇರೆ ರಾಷ್ಟ್ರಗಳಿಗೆ ಹರಡಿರಬಹುದು.

ಪೂರ್ವಕಾಲದಲ್ಲಿ ಸಾಮಾನ್ಯವಾಗಿ ಸನ್ಯಾಸವನ್ನು ಸ್ವೀಕರಿಸಿದ ವ್ಯಕ್ತಿಗಳೇ ಯೋಗಭ್ಯಾಸಮಾಡಿಕೊಂಡಿದ್ದು ಪ್ರಾಪಂಚಿಕ ವ್ಯವಹಾರಗಳಿಂದ ದೂರವಾಗಿ ಉಳಿಯುತ್ತಿದ್ದರು. ಇದನ್ನೆಲ್ಲಾ ನೋಡಿದ ಜನಸಾಮಾನ್ಯರು ಯೋಗಾಭ್ಯಾಸ ಮಾಡುವುದರಲ್ಲಾಗಲೀ ಈ ಬಗ್ಗೆ ವಿಷಯಗಳನ್ನು ತಿಳಿದುಕೊಳ್ಳುವುದಲ್ಲಾಗಲೀ ಆಸಕ್ತಿ ತೋರಿಸುತ್ತಿರಲಿಲ್ಲ.

ಸುಮಾರು ಐವತ್ತು ವರ್ಷಗಳ ಹಿಂದೆ ಯೋಗಶಾಸ್ತ್ರದ ಬಗ್ಗೆ ಮಾತನಾಡುವ ಹಾಗೂ ಅಭ್ಯಾಸ ಮಾಡುವ ಜನ ಅತೀ ವಿರಳವಾಗಿದ್ದರು,ಯೋಗವೆಂಬ ಶಬ್ದ ಕೇಳುತ್ತಲೇ ಜನ ಸಾಮಾನ್ಯರು ಇದು ಸನ್ಯಾಸಕ್ಕೆ ಸಂಬಂಧಪಟ್ಟ ವಿಷಯವೆಂದು ತಿಳಿದು ದೂರ ಸರಿಯುತ್ತಿದ್ದರು. ಈ ಶಾಸ್ತ್ರವನ್ನು ತಿಳಿದು ಅಭ್ಯಾಸದಲ್ಲಿಟ್ಟುಕೊಂಡಿದ್ದ ಅನೇಕರು ಇತರರಿಗೆ ಈ ಶಾಸ್ತ್ರದ ಬಗ್ಗೆ ಮಾಹಿತಿ ಕೊಡದೆ ಇದೊಂದು ಗುಪ್ತ ವಿಜ್ಞಾನವೆಂದುಕೊಂಡು ಈ ಬಗ್ಗೆ ವಿಚಾರಿಸಿದ ಜನರ ಮನಸ್ಸಿನಲ್ಲಿ ಭಯವುಂಟಾಗುವ ರೀತಿಯಲ್ಲಿ ಬೋಧಿಸುತ್ತಿದ್ದರು. ಈ ಅನುಭವವನ್ನು ಪಡೆದವರಲ್ಲಿ ನಾನು ಒಬ್ಬ ಇದರಿಂದಾಗಿ ಸಾಮಾನ್ಯ ಜನರು ಈ ವಿಜ್ಞಾನದಿಂದ ದೂರವಾಗಿರುತ್ತಿದ್ದರು.

ಆಧುನಿಕ ಕಾಲದಲ್ಲಿ ಯೋಗವು ವಿಶ್ವದಲ್ಲೆಲ್ಲಾ ಪ್ರಚಾರವಾಗಿರುವುದನ್ನೂ, ದಿನೇ ದಿನೇ ಈ ವಿಜ್ಞಾನವು ಪ್ರಖ್ಯಾತಿಗೆ ಬರುತ್ತಿರುವುದನ್ನೂ ನೋಡುತ್ತಿದ್ದೇವೆ. ಸೂಕ್ಷ್ಮವಾಗಿ ನೋಡುತ್ತಾ ಹೋದರೆ ಯೋಗದ ಮಾತೃಭೂಮಿಯಾದ ಭಾರತದಲ್ಲಿ ಇರುವುದಕ್ಕಿಂತ ಹೆಚ್ಚು ಯೋಗ ಪ್ರಚಾರ ಅಭ್ಯಾಸಗಳನ್ನು ಇತರ ಅನೇಕ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ನೋಡಬಹುದು. ಅಲ್ಲದೆ ಅನೇಕ ಕಡೆಗಳಲ್ಲಿ ಬೃಹದ್ ಯೋಗ ಸಮ್ಮೇಳನಗಳಾಗುತ್ತಿರುವುದೂ ಕಂಡು ಬರುತ್ತಿದೆ.

ಆಫ್ರಿಕಾ, ಸುಜರ್‌ಲ್ಯಾಂಡ್, ಜರ್ಮನಿ, ಇಟಲಿ, ಫ್ರಾನ್ಸ್ ಮತ್ತು ಇಂಗ್ಲೆಂಡ್ ದೇಶಗಳಲ್ಲಿ ಅನೇಕ ಯೋಗ ಕೇಂದ್ರಗಳನ್ನೂ, ಕೆಲವು ಆಸ್ಪತ್ರೆಗಳಲ್ಲಿ ನಡೆಸಲ್ಪಡುತ್ತಿರುವ ಯೋಗ ಚಿಕಿತ್ಸೆಗಳನ್ನೂ, ನೂರಾರು ಯೋಗ ಅಧ್ಯಾಪಕರುಗಳನ್ನೂ ಮತ್ತು ಸಾವಿರಾರು ಯೋಗ ವಿದ್ಯಾರ್ಥಿಗಳನ್ನು ಕಂಡ ನನಗೆ ಆತ್ಯಾಶ್ಚರ್ಯವಾಗಿದೆ. ಇದೇ ರೀತಿಯಲ್ಲಿ ಮುಂದೋತ್ತಿದ್ದ ಅನೇಕ ಪಾಶ್ಚಾತ್ಯ ದೇಶಗಳಲ್ಲೂ ಸಾಕಷ್ಟು ಯೋಗ ಕೇಂದ್ರಗಳಿವೆ ಎಂಬುದನ್ನು ತಿಳಿದಿದ್ದೇನೆ.

ಭಾರತದಲ್ಲಿ ಮಾನವನು ದೈಹಿಕ ಮತ್ತು ಮಾನಸಿಕ ಆರೋಗ್ಯವನ್ನು ಕ್ರಮಬದ್ಧವಾಗಿ ಹೊಂದಿರಬೇಕಾದ ಅಗತ್ಯಗಳ ಬಗ್ಗೆ ಅನೇಕ ಸಾವಿರ ವರ್ಷಗಳ ಹಿಂದೆಯೇ ಆಯುರ್ವೇದ ಮತ್ತು ಯೋಗಶಾಸ್ತ್ರಗಳು ಬೋಧಿಸಿದ ವಿಚಾರಗಲೂ ಇಂದಿಗೂ ಅನ್ವಯಿಸುತ್ತಿವೆ. ಮನುಷ್ಯನು ನಿರೋಗಿಯಾಗಿ ಬಾಳ ಬೇಕಾದರೆ ಕೇವಲ ಐಶ್ವರ್ಯ ಉನ್ನತ ಅಧಿಕಾರ ಎಲ್ಲಾ ತರದ ಸೌಕರ್ಯಗಳಿಂದ ಕೂಡಿರುವುದು ಇವು ಯಾವುದೂ ಸಾಲದೆಂಬುದು ಖಚಿತ. ದೇಹದ ಸ್ಥಿತಿಗತಿಗಳು ಸಮವಾಗಿದ್ದು ಅಗ್ನಿಯು ಕ್ರಮವಾಗಿ ತಿಂದ ಆಹಾರಗಳನ್ನು ಜೀರ್ಣಿಸಿ ಮಲಮೂತ್ರಗಳ ವಿಸರ್ಜನೆಗಳು ಕ್ರಮವಾಗಿ ನಡೆಯುತ್ತಿದ್ದು, ದೇಹದ ಧಾತುಗಳು ಸುಸೂತ್ರವಾಗಿದ್ದು ಮನಸ್ಸು ಪ್ರಫುಲ್ಲವಾಗಿದ್ದರೆ ಮಾತ್ರ ಮನುಷ್ಯನು ಸುಖಿಯೂ ಆರೋಗ್ಯವಂತನೂ ಎಂತ ಎನ್ನಿಸಿಕೊಳ್ಳುವನು.

ಈ ರೀತಿಯ ಆರೋಗ್ಯ ಮತ್ತು ಮನಃ ಸಂತೋಷವನ್ನುಂಟು ಮಾಡಿಕೊಳ್ಳಬೇಕಾದಲ್ಲಿ ಆಯುರ್ವೇದಶಾಸ್ತ್ರದಲ್ಲಿ ವಿವರಿಸಿದ 'ಸ್ವಸ್ಥವೃತ್ತ' ತತ್ತ್ವವನ್ನೂ ಯೋಗಶಾಸ್ತ್ರದಲ್ಲಿ ವಿವರಿಸಿದ ತತ್ತ್ವಗಳನ್ನು ಪರಿಪಾಲಿಸಿದಲ್ಲಿ ಮಾತ್ರ ಸಾಧ್ಯ.

ಇಂದಿನ ಕಾಲದಲ್ಲಿ ಪ್ರಪಂಚದಲ್ಲೆಲ್ಲಾ ಬಹುಭಾಗ ಜನರು ಕೃತಕ ಜೀವನಗಳನ್ನೇ ನಡೆಸುತ್ತಿರುವುದು ಕಂಡು ಬರುತ್ತದೆ. ಭಾರತದಲ್ಲಂತೂ ಕೋಟ್ಯಾಂತರ ಜನಸಮೂಹ ಆಹಾರ ಬಟ್ಟೆ ಮತ್ತು ಇನ್ನಿತರ ಸೌಕರ್ಯಗಳಿಲ್ಲದೆ ನರಳುತ್ತಿದ್ದರೂ ಸಾವಿರಾರು ಜನರು ತುಂಬಿದ ಐಶ್ವರ್ಯದಿಂದ ಕೂಡಿದ್ದು ಜಗತ್ತನೇ ಮರೆತಿರುವುದೂ ಕಂಡು ಬರುತ್ತಿದೆ. ಈ ಮೇಲೆ ವಿವರಿಸಿದ ಕಾರಣಗಳಿಂದಾಗಿ ಬಹುಭಾಗ ಜನರಲ್ಲಿ ಶಿಸ್ತಿನ ಜೀವನದ ಅಭ್ಯಾಸವೇ ಕುಂಠಿತವಾಗಿದೆ. ಇದರಿಂದಾಗಿ ಜನರು ಅನಗತ್ಯವಾದ ಅಭ್ಯಾಸಗಳಿಗೆ ಬಲಿಬಿದ್ದು ರೋಗ ಪೀಡಿತರಾಗಿ ನರಳುತ್ತಿರುವುದನ್ನೂ ಎಲ್ಲೆಲ್ಲೂ ನೋಡಬಹುದಾಗಿದೆ.

ವಿಜ್ಞಾನಯುಗವೆಂತ ಕರೆಯಲ್ಪಡುತ್ತಿರುವ ಈ ಆಧುನಿಕ ಕಾಲದಲ್ಲಿ ಮಾನವನು ದುರಭ್ಯಾಸಗಳಿಂದ ದೂರಸರಿದು ಸುಖಿಯಾಗಿ ಬಾಳಬೇಕಾದರೆ 'ಯೋಗಭ್ಯಾಸ' ಒಂದೇ ದಾರಿ ಎಂದರೆ ಅತಿಶಯೋಕ್ತಿಯಾಗಲಾರದು. ಯೋಗದಲ್ಲಿ ಹೇಳಿರುವ ಅಷ್ಟ ಅಂಗಗಳ ಪೈಕಿ ಪ್ರಪ್ರಥಮದ ನಾಲ್ಕು ಭಾಗಗಳನ್ನು ಶಿಸ್ತಿನಿಂದ ಅಭ್ಯಾಸ ಮಾಡುತ್ತಾ ಬಂದಲ್ಲಿ ಸುಖಿಯಾಗಿ ಬಾಳ ಬಹುದೆಂಬುದು ನಿಃಸಂಶಯ.

ವಿವೇಕಾನಂದರು ಹೇಳಿದ್ದಾರೆ. ಇಲ್ಲಿ ಸಮನ್ವಯ ತರುವುದು ಹೇಗೆ? ಅದಕ್ಕೆ ಒಂದು ತಂಡವನ್ನು ರಚನೆ ಮಾಡುವುದು, ಅದರಲ್ಲಿ ಎಲ್ಲ ವಯೋಮಾನದವರು ಇರಬೇಕು. (ಸಣ್ಣವರು, ದೊಡ್ಡವರು, ಹೆಣ್ಣು ಗಂಡು). ಹೀಗೆ ತಂಡಗಳನ್ನು ಮಾಡಿ ಯೋಗದ ಪ್ರದರ್ಶನ ಮಾಡಬೇಕು. ನಂತರ ಸ್ಪರ್ಧೆಯ ಮೂಲಕ ತಾಲ್ಲೂಕು, ಜಿಲ್ಲೆ ಹೀಗೆ ಬೇರೆ ಬೇರೆ ಹಂತಗಳವರೆಗೂ ಹೋಗಬೇಕು. ಹೀಗೆ ವಿಶ್ವ ಯೋಗ ದಿನವೂ ಹಳ್ಳಿಹಳ್ಳಿಗಳಿಗೂ ಹೋಗಿ ತಲುಪಬೇಕು. ಇದರಲ್ಲಿ ತಂಡದ ಕಾರ್ಯಕ್ಕೂ ಅಂಕಗಳಿರುತ್ತವೆ. ಮತ್ತು ಈ ಒಂದು ತಂಡದಲ್ಲಿ ಎಲ್ಲ ವಯೋಮಾನದವರು ಇರುವ ಕಾರಣದಿಂದ ಅನ್ಯೋನ್ಯತೆ ಮತ್ತು ಒಗ್ಗಟ್ಟು ಎರಡು ಇರುತ್ತದೆ. ಈ ವಿಶ್ವಯೋಗ ದಿನಾಚರಣೆಗೆ ಪ್ರಧಾನಿ ಮೋದಿಯವರು ತುಂಬಾ ಪ್ರೋತ್ಸಾಹವನ್ನು ನೀಡುತ್ತಿದ್ದಾರೆ. ಈ ಒಂದು ದಿನ ವಿಶ್ವದಲ್ಲೇ ಯೋಗವನ್ನು ಹರಡಲು ಇದೊಂದು ಸದವಕಾಶ...



# ದಾಸಸಾಹಿತ್ಯದ ಪ್ರಸ್ತುತತೆ

ಹರಿದಾಸ ಸಾಹಿತ್ಯವು ಕನ್ನಡ ಸಾಹಿತ್ಯದ ತವನಿಧಿಗಳಲ್ಲೊಂದು. ಕನ್ನಡ ಆರ್ಷೇಯವಾಣಿ, ಕನ್ನಡ ಪೌರಾಣಿಕ ಸಂಪತ್ತು,ಪುರಾಣತ್ರಯ ಪ್ರವಚನತ್ರಯಗಳ ಸರಳೀಕೃತ ಅಮೃತಧಾರೆ ಪುರಂದರೋಪನಿಷತ್ತು, ಸುಧಾ ಓದಿ ಪದ ಹಾಡಿದರು ಹೀಗೆಲ್ಲ ಕಳೆದ ೬೦೦ ವರ್ಷಗಳಿಂದ ನಮ್ಮೆಲ್ಲರ ನುಡಿ ನಾಲಿಗೆಯ ಮೇಲೆ ನಲಿಯುತ್ತಿರಲು ಕಾರಣ ಈ ಸಾಹಿತ್ಯದಲ್ಲಿ ಕಾಲಕಾಲಕ್ಕೆ ಆಗುತ್ತಿರುವ ಪ್ರಸ್ತುತೀಕರಣ. ಶ್ರೀ ಶ್ರೀಪಾದರಾಜರು, ಶ್ರೀ ವ್ಯಾಸರಾಯರು, ಶ್ರೀ ರಾಘವೇಂದ್ರ, ಸ್ವಾಮಿಗಳವರು ತಮ್ಮ ತಮ್ಮ ಕಾಲ ಖಂಡದಲ್ಲಿ ದಿಟ್ಟ ಹೆಜ್ಜೆ ಇಡುವುದರ ಮೂಲಕ ಮಠದಲ್ಲಿ ಕನ್ನಡಕ್ಕೆ ಪ್ರವೇಶ ನೀಡಿದರು.ಅದರಂತೆ ಸುಬೋಧ ರಾಮ ರಾವ್, ಪಾವಂಜಿಗುರುರಾವ್, ಗೋರೆಬಾಳ್ ಹನುಮಂತರಾಯರು ಸಂಪಾದನೆ ಮೂಲಕ ಕೃತಿ ರೂಪದಲ್ಲಿ ತಂದರು. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ಡಾ.ಜಿ. ವರದರಾಜರಾವ್, ಡಾ.ಕೆ.ಎಂ.ಕೃಷ್ಣರಾವ್, ಡಾ. ಎ.ಬಿ.ಪಾಟೀಲರು, ಪ್ರೊ.ವಸಂತ ಕುಷ್ಟಗಿ, ಅಂತಹ ಹಿರಿಯ ತಲೆಮಾರಿನ ಸಂಶೋಧಕರಿಂದ ದಾಸ ಸಾಹಿತ್ಯವು ವಿಶ್ವವಿದ್ಯಾಲಯಗಳಲ್ಲಿ ಒಂದು ಪಠ್ಯಕ್ರಮವಾಗುವಂತೆ ಅದಕ್ಕೆ UGC, Ph.d,JRF, SRF, B.O.S, Academic council projects, ಮೊದಲಾದ ಬೇರೆಲ್ಲ. ವಿಷಯ ಮತ್ತು ಭಾಷೆಗಳಿಗೆ ಸಿಗುವಂತೆ ದರ್ಜೆ, ಸೌಲಭ್ಯ, ಅನುದಾನ ದೊರೆಯಿತು.

ಇನ್ನು ಸಾಮಾಜಿಕ ಸ್ತರದಲ್ಲಿ ಹೇಳುವುದಾದರೆ ಶ್ರೀ ಬೇಲೂರು ಕೇಶವದಾಸರಿಂದ ಮೊದಲುಗೊಂಡು ನೂರಾರು ಭಕ್ತರು ಸಹಸ್ರಾರು ಮಾತೆಯರು ಗಾಯನ, ಪ್ರಕಟಣೆ, ಪ್ರಚಾರ ಪ್ರಸಾರದ ಕಾರ್ಯದಲ್ಲಿ ತೊಡಗಿದ್ದಾರೆ. ಹರಿದಾಸ ಸಾಹಿತ್ಯವು ರಾಯಚೂರು ಜಿಲ್ಲೆಯ ಕೃಷ್ಣ ಹಾಗೂ ತುಂಗಾನದಿಗಳ ಸೇಚನದಿಂದ ಬೆಳೆದಿದೆಯಾದರೂ ಈ ಅರ್ಧಶತಮಾನದಲ್ಲಿ ಶ್ರೀ ರಾಘವೇಂದ್ರ ಗುರು ಸಾರ್ವಭೌಮರ ಮಠಗಳ ಸ್ಥಾಪನಾಕಾರ್ಯ ವಿಸ್ತಾರವಾದಂತೆ ಅವುಗಳನ್ನು ಕೇಂದ್ರಗಳನ್ನಾಗಿ ಮಾಡಿ ಕೊಂಡು ಗುರುವಾರದ ಭಜನೆ, ಆದಿವಾರದ ಸತ್ಸಂಗ, ಅಧಿಕಮಾಸ, ಹೂವಳ್ಳಿ,ಏಕಾದಶಿ,ನವರಾತ್ರಿ, ಶ್ರಾವಣಮಾಸ, ವಿಶೇಷ ಹಬ್ಬಹರಿ ದಿನಗಳು, ಸಂಗೀತ ಕಛೇರಿಗಳು, ಜಾತ್ರೆ ಉತ್ಸವಗಳು, ಪುಣ್ಯತಿಥಿ, ಆರಾಧನೆಗಳು ಹೀಗೆಲ್ಲ ಸಹಸ್ರಾರು ಸಂದರ್ಭಗಳಲ್ಲಿ ಕೀರ್ತನೆಗಳನ್ನು ಹಾಡುವ, ನರ್ತಿಸುವ ಕ್ರಮದಿಂದಾಗಿ ಇಂದಿಗೂ ಎಲ್ಲರ ಮನೆಗಳಲ್ಲಿ ಮನಗಳಲ್ಲಿ ಈ ಸಾಹಿತ್ಯ ಉಳಿದುಕೊಂಡು ಬಂದಿದೆ. ಇತ್ತೀಚೆಗೆ ಕೇಳಿದ ಮಾತೆಂದರೆ ಲತಾಮಂಗೇಶ್ಕರರ ಹಾಡು ಜಗತ್ತಿನಲ್ಲಿ ಯಾವಾಗಲೂ ಎಲ್ಲಿಯಾದರೂ, ಯಾರಾದರೂ ಹಾಡುತ್ತಲೇ ಇರುತ್ತಾರೆ. ಅಂದರೆ ಗಾನ ಕೋಗಿಲೆಯ ಹಾಡು ಜಗತ್ತಿನಲ್ಲಿಲ್ಲದ ಕ್ಷಣವಿಲ್ಲ. ಅದರಂತೆ ಕರ್ನಾಟಕದಲ್ಲಿ ದಾಸರ ಕೀರ್ತನೆಗಳನ್ನು ಕೇಳದ ದಿನವೇ ಇಲ್ಲ ಎಂದರೆ ನಮ್ಮ ರಾಜ್ಯದ ಮಟ್ಟಿಗೆ ಅತಿಶಯೋಕ್ತಿ ಅಲ್ಲ. ಈ ಎಲ್ಲದರ ಜೊತೆಗೆ ಭೂವೈಕುಂಠ ವೆನಿಸಿದ ತಿರುಪತಿಯಲ್ಲಿ ಆ ತಿಮ್ಮಪ್ಪನ ಮಹಿಮೆಯಿಂದ ಕಳೆದು ೨೫ ವರ್ಷಗಳಿಂದ ದಾಸ ಸಾಹಿತ್ಯದ ಕಾರ್ಯ ಅವ್ಯಾಹತವಾಗಿ ನಡೆಯುತ್ತಿದೆ. ಹೊಸ ಹೊಸ ಯೋಜನೆಗಳು ಸಾಧನೆಗಳು ನಡೆದಿವೆ. ಭದ್ರಗಿರಿ ಸಹೋದರರು, ಪಂಡಿತ್ ಭೀಮಸೇನ್ ಜೋಶಿ, ಶ್ರೀ ವಿದ್ಯಾಭೂಷಣರು, ಶ್ರೀ ಪುತ್ತೂರು ನರಸಿಂಹನಾಯಕ, ಶ್ರೀ ಶೇಷಗಿರಿದಾಸ, ಶ್ರೀ ಅನಂತ ಕುಲಕರ್ಣಿ ಹೀಗೆ ನೂರಾರು ಜನ ಸಂಗೀತ ವಿದ್ವಾಂಸರು, ವಿದೂಷಿಯರು, ಕ್ಯಾಸೆಟ್, ಸಿ.ಡಿ, ಫ್ಲಾಪಿ ಇತ್ತೀಚೆಗೆ ಅದಕ್ಕಾಗಿಯೇ ವೆಬ್ ಸೈಟ್ ಮೊದಲಾದ ಅತ್ಯಾಧುನಿಕ ಉಪಕರಣಗಳ ಸಹಾಯದಿಂದ ಸಾಹಿತ್ಯದ ಪ್ರಚಾರ,ಶ್ರವಣ ತನ್ಮೂಲಕ ಸಾಮಾಜಿಕ ಶಾಂತಿ ನೆಮ್ಮದಿ ಬರುತ್ತಿದೆ. ಇದಕ್ಕೆ ಕಾರಣ ದಾಸರು ಹೇಳಿದಂತೆ ಕಲಿಯುಗದಲ್ಲಿ ಹರಿನಾಮವು ನೆನೆದರೆ ಕುಲಕೋಟಿಗಳು ಉದ್ಧರಿಸುವವು. ಸಂಸ್ಕೃತ ಬಾರದೇ ಇರುವುದು, ಸಮಯ, ಸ್ಥಳ ಮತ್ತು ಆದಾಯದ ಅಭಾವದ ಮಧ್ಯದಲ್ಲಿರುವ ಜನಸಾಮಾನ್ಯರಿಗೆ ಸಂಸ್ಕೃತಿ, ಸ್ವಾವಲಂಬನೆ ಮತ್ತು ಸಹಬಾಳ್ವೆ ಪ್ರೇರೇಪಿಸುವ ಏಕ ಮಾತ್ರ ಸಾಧನವೆಂದರೆ ದಾಸ ಸಾಹಿತ್ಯ. ವೇದಕಾಲ, ಇತಿಹಾಸ ಕಾಲ, ಪುರಾಣಕಾಲ, ಲೋಹಯುಗ ಇವೆಲ್ಲವನ್ನೂ ನಮ್ಮ ಸಮಾಜ ದಾಟಿ ಬಂದಿದೆ. ಹೊಸ ದೃಷ್ಟಿಯಲ್ಲಿ ಹೇಳುವುದಾದರೆ ಜಗತ್ತಿನಲ್ಲಿ ಔದ್ಯೋಗಿಕ ಕ್ರಾಂತಿಯಾದಾಗ ನಮ್ಮ ದೇಶ ಗುಲಾಮ ಗಿರಿಯಲ್ಲಿತ್ತು. ಅಣುಶಕ್ತಿ ಕ್ರಾಂತಿಯಾದಾಗ

ಅಲ್ಪಸ್ವಲ್ಪ ಎಚ್ಚೆತ್ತಿತ್ತು. ಕಂಪ್ಯೂಟರ್ ಕ್ರಾಂತಿ ಬಂದಾಗ ತುಸು ನಮ್ಮ ಕಿಟಕಿ ಬಾಗಿಲುಗಳನ್ನು ಪೂರ್ವಾಗ್ರಹ ಪೀಡೆ ಇಲ್ಲದೆ ತೆರೆದಿಟ್ಟ ಕಾರಣ ನಾವು ಇಂದು ಈ ವೇಗದ ಜಗತ್ತಿಗೆ ಬಂದು ತಲುಪಿದ್ದೇವೆ. ಇಂದು ಹೆಚ್ಚು ಕಡಿಮೆ ಹೇಳುವುದಾದರೆ ಭಾಗಶಃ ಸಮಯದ ಕೊರತೆ ಯೊಂದು ಬಿಟ್ಟರೆ ಬೇರೆ ಯಾವ ಕೊರತೆಯೂ ಇಲ್ಲ. ಒಂದು ವೇಳೆ ಇದ್ದರೂ ಅದು ಮುಂಬರುವ ದಿನಗಳಲ್ಲಿ ತುಂಬಿಕೊಳ್ಳುವ ವಿಶ್ವಾಸದಿಂದಲೇ ನಾವು ಬದುಕುತ್ತಿದ್ದೇವೆ. ಇಂದು ಶೇಖರಣೆಯ ಕೊರತೆ ಇಲ್ಲ, ಆಚರಣೆಯ ಕೊರತೆ ಇದೆ.

ಸಮಾಜದಲ್ಲಿ ಆದ ಪ್ರಮುಖ ಬದಲಾವಣೆಗಳೆಂದರೆ ಅವಿಭಕ್ತ ಕುಟುಂಬಗಳು One child family ಗಳಾಗಿವೆ. ಸ್ನಾನದ ಮನೆಗಳು Attached bathroom ಗಳಾಗಿವೆ. ೧೬ ದಿನಗಳಷ್ಟು ನಡೆಯುವ ಮದುವೆಯ ಜೀವನದ ದೊಡ್ಡ ಸಂಸ್ಕಾರವೇ one day match with limited overs ನಂತೆ ಆಗಿದೆ. ಹೀಗಿರುವಾಗ Bad light, pitch fault ನಂತಹ, risk ಇದ್ದೇ ಇದೆ.

ಇನ್ನು ವ್ಯವಹಾರ ಕಸುಬು, ಜೀವನಕ್ರಮ, ಓಡಾಟ, ಕೃಷಿ, ವಿಜ್ಞಾನ ತಂತ್ರಜ್ಞಾನ, ಬಯೋಟಿಕ್, ವ್ಯಾಪಾರ ವಹಿವಾಟಿನಲ್ಲಿ ಆದ ಬದಲಾವಣೆಗಳೋ ಊಹೆಗೆ ಮೀರಿದೆ. ಈ ಸಹಸ್ರಮಾನದಲ್ಲಿ ಜ್ಞಾನ, ಭಕ್ತಿ, ವೈರಾಗ್ಯದ ಸಾಧನೆ. ತನು, ಮನ, ಧನದಿಂದ ಸೇವೆ, ಸಾತ್ವಿಕತೆ, ಸದಾಚಾರ, ಇತಿಹಾಸ, ಸಂಸ್ಕೃತಿ ಸಂಗೀತ, ಸತ್ಸಂಗ ಇಂತಹವು ನಡೆಯಲಾರದ ನಾಣ್ಯಗಳಂತಾಗಿವೆ. ಅಥವಾ ದುಬಾರಿ ಹಣ ಕೊಟ್ಟು ಇವುಗಳನ್ನು ನೈಪುಣ್ಯ ಹೊಂದಿದ ಪ್ರೊಫೇಷನಲ್ಸ್ ಹತ್ತಿರ ಹಣ ಕೊಟ್ಟು ಕಲಿಯಬೇಕಾದ ಮತ್ತು ಕೌನ್ಸಲಿಂಗ್ ಪಡೆಯಬೇಕಾದರೆ ಕಾಲ ಬಂದಿದೆ. ಇದಕ್ಕೆ ಕಾರಣ ನನಗೆ ತಿಳಿದಂತೆ ಈ ಕೆಳಗಿನ ಅಂಶಗಳು WTO, GATT, LPG,MNC, use & Through, CTBT, Rural, Border, Backward, NRI, Foreign Banks, Patenty, Food Processing, structural Changes, careerism, CET credit card, ATM, cellphones, pollution, Terrorism, Multimedia, unemployment, under employment, AIDS, cancer, ನಮಗೆ ಬೇಕೋ ಬೇಡವೋ, ಒಳ್ಳೆಯದೋ ಕೆಟ್ಟದೋ, ತಿಳಿದೋ, ತಿಳಿಯದೆಯೋ ಈಗ ಇವೆಲ್ಲವೂ ಬಂದು ಬಿಟ್ಟಿವೆ. ಈ ಪ್ರತಿಯೊಂದು ಶಬ್ದದ ಹಿಂದೆ ಅದರದೇ ಆದ ತತ್ವ, ಜಾಲ, ವಿಚಾರ, ಆಚಾರ, ಹೀಗೆಲ್ಲ code of service ಇದ್ದೇ ಇವೆ.

ನಾವು ಖಂಡಿತ ಇವುಗಳ ಸೌಲಭ್ಯ ಪಡೆಯಲೇಬೇಕು. ಇನ್ನು ಕೆಲವುಗಳನ್ನು ದೂರವಿಡಬೇಕು ಅಥವಾ ಕಡಿಮೆ ಮಾಡಬೇಕು. ಕೆಲವೊಂದರ ಬಗ್ಗೆ ಎಚ್ಚರ ಇರಬೇಕು. ಒಟ್ಟಿನಲ್ಲಿ ನಾವು ಶಾಂತಿ ಹಾಗೂ ನೆಮ್ಮದಿಯನ್ನು ಅಭಿವೃದ್ಧಿಯ ಹೆಸರಿನಲ್ಲಿ ಕ್ರಮೇಣ ಕಳೆದುಕೊಳ್ಳುತ್ತಿದ್ದೇವೆ. ಅಭಿವೃದ್ಧಿಯು ಬೇಕು, ನೆಮ್ಮದಿಯು ಬೇಕು ಇಲ್ಲವಾದರೆ ನಮ್ಮ ಸಮಾಜ ಹಿಂದೆ ಬೀಳುತ್ತದೆ. ಏಕೆಂದರೆ ಈ ದೇಶದ ಅಭಿವೃದ್ಧಿಯ, ಸಮೃದ್ಧಿಯ ಜವಾಬ್ದಾರಿ ನಮ್ಮ ಮೇಲೆಯೇ ಇದೆ. ಅದನ್ನು ತೂಗಿಸುವುದೇ ನಮ್ಮ ಇಂದಿನ ವಿವೇಕ.

"ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಃ"

ಹೀಗಾಗಿ ಲೋಕವು ಸುಶಿಕ್ಷಿತರನ್ನು ಅನುಸರಿಸುತ್ತದೆ. ಈ ಎಲ್ಲವುಗಳೂ "ಶ್ರೀ ವಿಷ್ಣು ಪ್ರೇರಣೆಯೂ ಶ್ರೀ ವಿಷ್ಣು ಪ್ರೀತ್ಯರ್ಥಂ" ಎಂದು ಮಾಡುವುದರಲ್ಲಿಯೇ ಮತ್ತು ಮಾಡಬಾರದ್ದನ್ನು ಸಾಧ್ಯವಾದಷ್ಟು ತಡೆಯುವುದರಲ್ಲಿಯೇ ನಮ್ಮ ಸಮಾಜದ ಸುಧಾರಣೆ ಮತ್ತು ಶ್ರೇಯಸ್ಸಿದೆ. ನಾವು ನಮ್ಮ ನಿತ್ಯ ಜೀವನದ ಸತ್ಯ ಘಟನೆಗಳನ್ನು ಮಾಡುವಾಗ ಎಷ್ಟೋ ಸಲ ಅನಿವಾರ್ಯವಾಗಿ ತಪ್ಪು ಮಾಡುವ ಸಂದರ್ಭಗಳು ಬರಬಹುದು, ಅಂತಹ ತಪ್ಪನ್ನು ಮಾಡದಂತೆ ನಮ್ಮ "ಧಿಯೋ ಯೋನಃ ಪ್ರಚೋದಯಾತ್" ಇದ್ದೇ ಇದೆ. ಅದನ್ನು ನಾವು ದಿನಾಲೂ ಮಾಡಿದರೆ ಅದೇ ಆಚರಣೆ.

"ಅಪಿ ಚೇತ್ಸುದುರಾಚಾರೋ ಭಜತೇ ಮಾಮ ನನ್ಯಭಾಕ್
ಸಾಧುರೇವ ಸ ಮಂತವ್ಯಃ ಸಮ್ಯಗ್ವ್ಯವಸಿತೋ" ಸಃ
ಭಗವದ್ಗೀತೆ ೯/೩೦

ಅಷ್ಟೇ ಅಲ್ಲ ನನ್ನನ್ನು ಒಮ್ಮೆ ಶರಣಾಗತ ತತ್ವದಿಂದ ನಂಬಿ ನೆನೆದರೆ ಸಾಧುಗಳಿಗೆ ಕೊಡುವ ಸಾಯುಜ್ಯ ಮೋಕ್ಷ ಕೊಡುವೆನೆಂದು ಆಣೆ ಮಾಡಿ ಹೇಳಲು ಕೃಷ್ಣನು ಅರ್ಜುನನಿಗೆ ಬೋಧಿಸುತ್ತಾನೆ.

ನನ್ನನ್ನು ನಂಬಿದ ಭಕ್ತರಿಗೆ ಕಷ್ಟವಿಲ್ಲ ಇದನ್ನೇ ದಾಸರು ನಂಬಿ ಕೆಟ್ಟವರಿಲ್ಲವೋ ರಂಗನ ನಂಬದೆ ಕೆಟ್ಟರೆ ಕೆಡಲಿ ಎಂದು ಹೇಳಿದ್ದಾನೆ.

ನರಜನ್ಮ ಬಂದಾಗ ನಾಲಗೆ ಇರುವಾಗ ಕೃಷ್ಣ ಎನ ಬಾರದೇ
ಕೃಷ್ಣ ಎಂದರೆ ಕಷ್ಟವು ಪರಿಹಾರ ಕೃಷ್ಣ ಎನ್ನಬಾರದೇ

ಈ ಹಾಡಿನಲ್ಲಿ ದಾಸರು ನಮಗೆ ಎಷ್ಟೊಂದು ಮುಕ್ತ ಅವಕಾಶಗಳನ್ನು ಕೊಡುತ್ತಾರೆ.

ದಾರಿ ನಡೆಯುವಾಗ, ಭಾರ ಹೊರುವಾಗ, ಮಂದ ಗಾಮಿನಿಯೊಡನೆ ಸರಸವಾಡುವಾಗ, ಕಂದನ ಬಿಗಿದಪ್ಪಿ ಮುದ್ದಾಡುವಾಗ, ಕೊನೆಗೆ ಮನೆಯೊಳಗೆ ಸುಳಿದಾಡುವಾಗ ಏನೂ ಆಗದೇ ಇದ್ದಲ್ಲಿ ಪರಿಪರಿ ಕೆಲಸದೊಳಗೆ ಒಂದು ಕೆಲಸ ವೆಂದು ತಿಳಿದು ಕೃಷ್ಣನನ್ನು ನೆನೆಯಲು ದಾಸರು ಬಹಳ ಆತ್ಮೀ ಯತೆಯಿಂದ ಹೇಳಿದ್ದಾರೆ. ನಾವು ನಮ್ಮ Stress, strain, Tension, commitment, competition ಗಳಲ್ಲಿ ಕೃಷ್ಣನನ್ನು ಮರೆತ ಪರಿಣಾಮವೇ ಈ ಕೆಳಗಿನ ಪದ್ಯ ತಿಳಿಸುತ್ತದೆ.

"ರಮಾಧವನ ಒಲಿಸಲರಿಯದೆ ಪಾಮರರು ಬಳಲು ವರು ಭವದೊಳಗೆ' ಎಂದು ಹೇಳಿದ ಜಗನ್ನಾಥದಾಸರ ಮಾತು ಎಂದೆಂದಿಗೂ ಪ್ರಸ್ತುತ.

ಸಮಾಜದಲ್ಲಿ ವಿವಾಹ ವಿಚ್ಛೇದನಗಳಿಗೆ ದಂಪತಿಗಳ ಲ್ಲಿಯ ತಪ್ಪು ತಿಳಿವಳಿಕೆಗಳೇ ಕಾರಣ. ಅದನ್ನು ಅವರು ರಮಾ ಧವನ ಒಲಿಸಲರಿಯದೇ ಎಂದು ಹೇಳಿದ್ದು ಧ್ವನಿ ಪೂರ್ಣ. ವಿಷ್ಣು ವನ್ನು ಬೇರೆ ಯಾವ ಹೆಸರಿನಿಂದ ಹೇಳದೇ ರಮಾಧವ ಎಂದರೆ, ಲಕ್ಷ್ಮೀಪತಿ ಅವನನ್ನು ಒಲಿಸಲಾಗದೆ ಎಂದರೆ, ಪತಿಯ ಸ್ವಭಾವ ವನ್ನು ತಿಳಿದುಕೊಳ್ಳದ ಲೌಕಿಕ ಪತ್ನಿಗೆ ವಿಚ್ಛೇದನದ ಭಯ ತಿಳಿದು ಕೊಂಡವಳಿಗೆ ಸ್ವರ್ಗ ಸುಖ. ದಾಸರು ತಮ್ಮ ಜೀವನ ಧರ್ಮ ವನ್ನು ಹೇಳುತ್ತಾ ಸಾಲ ಮಾಡ ಬೇಡ, ಸಾಲದೆನಬೇಡ, ನಾಳೆ ಇಡಬೇಡ ಎಂದು ಹೇಳಿದರು. ಆದರೆ ಈಗ ಸಾಲವು ಜೀವನದ ಅವಿಭಾಜ್ಯ ಅಂಗ ATM card, credit card, Cell Phone ಇಲ್ಲದವನು ಮಿಡಲ್ ಕ್ಲಾಸ್ ಮೆಂಟಾಲಿಟಿ ಪರ್ಸನ್ ಎಂದು ತಾತ್ಸಾರ ಅಥವಾ ಅನುಕಂಪದಿಂದ ನೋಡುತ್ತಾರೆ. ಹಾಗಾದರೆ ಸುಧಾರಣೆ ಹೇಗೆ? ನಮ್ಮ ವಸ್ತು ಹಾಗೂ ಸೇವೆಗಳ ಉತ್ಪಾದನೆ ಹೆಚ್ಚಾಗಬೇಕು, ಅವುಗಳ ಹಂಚಿಕೆ ಸರಿಯಾಗಿ ಆಗಬೇಕು.ಕೌಟಿ ಲ್ಯನೂ ಹೇಳಿದಂತೆ ಸುಖದ ಮೂಲ ಧರ್ಮ ಹೊರತು ವಸ್ತು ಅಲ್ಲ ಎಂದು ತಿಳಿದುಕೊಂಡು ವಸ್ತುಗಳ ಹಂಚಿಕೆ ಸರಿಯಾಗಿ ಆಗಬೇಕು. ಶೇಖರಣೆ, ಸಂಗ್ರಹಣೆ ಸಲ್ಲದು.

ಶ್ರೀ ಸೂಕ್ತದಲ್ಲಿ ಬರುವ "ಪ್ರಾದುರ್ಭೂತೋಸ್ಮಿರಾಷ್ಟ್ರೇ ಸ್ಮಿನ್ ಕೀರ್ತಿವೃದ್ಧಿಂದದಾತುಮೆ" ನಾನು ಈ ರಾಷ್ಟ್ರದಲ್ಲಿ ಹುಟ್ಟಿ ದ್ದೇವೆ. ನನಗೆ ಕೀರ್ತಿ ಮತ್ತು ವೃದ್ಧಿಯಾಗಲು ನಿನ್ನ ಸಹಾಯ ಬೇಕು. ನಾನು Human resource " ಅಲ್ಲ resour Ceful human being ಆಗಬೇಕು. ಏಕೆಂದರೆ ಪ್ರಜಾ ಪ್ರಭುತ್ವದಲ್ಲಿ ನಾನು ಮತ್ತು ನನ್ನಂತಹ ಕೋಟ್ಯಾಂತರ ಪ್ರಜೆಗಳೇ ಇಲ್ಲಿಯ ಎಲ್ಲಾ ಸಂಪತ್ತಿನ ಪ್ರಭುಗಳು.ನಮ್ಮೆಲ್ಲರನ್ನು ಸಂಪದ್ಭರಿತರನ್ನಾಗಿ ಮಾಡಲು ನಿನ್ನನ್ನು ಪ್ರಾರ್ಥಿಸುವೆ.

"ರೋಹಂತುಸರ್ವಬೀಜಾನ್ಯವಬ್ರಹ್ಮದ್ವಿಷೋದ್‌ಜ" ನಾನು ಬಿತ್ತಿದ ಎಲ್ಲ ಬೀಜಗಳು ಈ ಭೂಮಿಯದಲ್ಲಿ ಫಲಿಸು ವಂತಾಗಲಿ, (ಕೂರಿಗೆ ಪೂಜೆ) ಅದರಿಂದ ಈ ದೇಶದ ಹಸಿವೆ, ನೀರಡಿಕೆ ಮೊದಲಾದವುಗಳನ್ನು ಕೃಷಿಯಿಂದ ನೀಗಿಸಿ ನಿನ ಗಿಂತ ಮೊದಲು ಹುಟ್ಟಿದ ದರಿದ್ರ ಲಕ್ಷ್ಮಿಯನ್ನು ತೊಲಗಿಸಲು ನನಗೆ ನೀನು ಅನುಗ್ರಹಿಸು."ಕ್ಷುತ್ ಪಿಪಾಸಮಲಾಂಜೇಷ್ಠಾಮ ಅಲಕ್ಷ್ಮೀಂನಾಶಯಾಮ್ಯಹಂ" ಅದಕ್ಕಾಗಿ ದಾಸರು ಲಕ್ಷ್ಮೀ ದೇವಿಗೆ ಅಮ್ಮ, ಅಕ್ಕ, ತಾಯಿ, ದೇವಿ ಎಂದೆಲ್ಲಾ ಪ್ರಾರ್ಥಿಸುವರು, ಅದನ್ನು ಈ ಮುಂದಿನ ಒಂದು ಕೀರ್ತನೆಯ ಉದಾಹರಣೆಯಿಂದ ನೋಡುವ.

ಬಾರೆ ಭಾಗ್ಯದ ನಿಧಿಯೇ ಕರವೀರ ನಿವಾಸಿನಿ ಸಿರಿಯೆ

ಆಕಳು ಕರುವನು ಸ್ವೀಕರಿಸುವ ಪರಿನೀಕರುಣದಿ ಕಾಲ್ಗಾಕು ಮನೆಗೆ ಎಂದು ಹೇಳಿ ಕ್ಷಮೆ ಕೇಳುತ್ತಾ ಒಂದು ವೇಳೆ ನನ್ನಿಂದೇನ್ನಾದರೂ ಅಪರಾಧಗಳಾದರೆ ಕ್ಷಮಿಸು ಎನ್ನುತ್ತಾ

ಮಗನಪರಾಧವ ತೆಗೆದೆಣಿಸದನೀ
ಲಗುಬಗೆಯಲಿ ಪನ್ನಾಗವೇಣಿ

ಎಂದು ಪ್ರಾರ್ಥಿಸುತ್ತಾರೆ. ಆಗಲಾದರೂ ಲಕ್ಷ್ಮೀ ಕರುಣೆ ತೋರದಿದ್ದರೆ ಕೊನೆಯಲ್ಲಿ ನೀನು ಸದ್ಯ ಎಲ್ಲಿ ಬೇಕಾದರೂ ಇರು, ಆದರೆ ಕಡೆಗೆ ನಮ್ಮ ಮನೆ ವಾಸ ಒಡೆಯ ಅನಂತಾದ್ರೀಶ

ಒಡೆಯನಿದ್ದಲ್ಲಿಗೆ ಮಡದಿ ಬರುವುದು
ರೂಢಿಗುಚಿತವಿದು ನಡೆ ನಮ್ಮ ಮನೆಗೆ

ಎಂದು ಚಂಚಲೆಯಾದ ಲಕ್ಷ್ಮೀಯನ್ನು ಪಡೆಯಬೇಕಾ ದಲ್ಲಿ ನಾರಾಯಣನನ್ನು ನಮ್ಮ ಹೃದಯ ಸನ್ನಿಧಾನದಲ್ಲಿ ಪಡೆದರೆ ಸಾಕು. ಲಕ್ಷ್ಮೀ ತಾನಾಗಿಯೇ ಬರುವಳು. ಇಲ್ಲವಾದರೆ ಅವಳ ಮಗ ಕರ್ದಮವನ್ನಾದರೂ ಕರೆದು ಸ್ವಲ್ಪ ಹೊತ್ತು ಇಟ್ಟು ಕೊಂಡರೆ ಅವನ ಮೇಲಿನ ಮಮತೆಯೆಂದರೆ ಬಂದೇ ಬರುವ ಳೆಂದು ಶ್ರೀ ಸೂಕ್ತದ ಪ್ರಭಾವದಿಂದ ದಾಸರು ಹಾಡುತ್ತಾರೆ. ಆ ನಾರಾಯಣನ ಸನ್ನಿಧಾನದ ನಮ್ಮ ಹೃದಯವನ್ನು ಕುರಿತು

ತಸ್ಯಾ ಶಿಖಾಯಾ ಮಧ್ಯೆ ಪರಮಾತ್ಮ ವ್ಯವಸ್ಥಿತಾ

ಎಂದು ಪುರುಷಸೂಕ್ತ ಹೇಳುತ್ತದೆ.ಇದು ನಮ್ಮ ಸಮೃಸ ದ್ಧಿಯ ರಹಸ್ಯ ಹಂಚಿಕೆ, ರಹಸ್ಯಗಳನ್ನು ಉಪನಿಷತ್ತುಗಳು ಹೇಳು ತ್ತವೆ.

ತೇನತ್ಯಕ್ತೇನ ಭುಂಜಿತಾ

ಇದನ್ನೇ ದಾಸರು "ಧರ್ಮಕ್ಕೆ ಕೈಬಾರದೀ ಕಾಲ ಇಕ್ಕಲಾರೆ ಕೈ ಎಂಜಲು" ಎನ್ನುವ ಕೀರ್ತನೆಗಳಲ್ಲಿ ಇಂದಿನ ಬದುಕಿನ ಎಂದರೆ ನಿತ್ಯ ಜೀವನದ ಸತ್ಯ ಶೋಧವನ್ನು ಚಿತ್ರಿಸುತ್ತಾರೆ. ಥಳಿಕೆ ಮತ್ತು ಹಂಚಿಕೆಗಳು ಒಂದೇ ನಾಣ್ಯದ ಎರಡು ಮುಖಗಳು.

ನಮ್ಮೆಲ್ಲರ ಹೃದಯಗಳಲ್ಲಿ ಒಡೆಯನಾದ ಲಕ್ಷ್ಮೀಪತಿಯನ್ನು ಇಟ್ಟುಕೊಂಡು ನವವಿಧ ಭಕ್ತಿಗಳಲ್ಲಿ ಯಾವುದಾದರೊಂದರಿಂದ ನೆನೆದರೆ ಸಾಕು. ಪಂಚಭಾವಗಳಲ್ಲಿ ಆವುದಾದರೊಂದು ಮಾಡಿದರೆ ಸಾಕು. ಮನುಷ್ಯನಿಗೆ ಕಣ್ಣು, ಮೆದುಳು, ಕಿಡ್ನಿ, ಲಂಗ್ಸ್ ಇವೆಲ್ಲವೂ ಕೈಕಾಲಿನಂತೆ ಎರೆಡೆರಡು ಇವೆ. ಆದರೆ ಹೃದಯವು ಮಾತ್ರ ಒಂದೇ ಇದೆ. ಅದಕ್ಕಾಗಿಯೇ ಹೆಂಡತಿಗೆ ಹೃದಯೇಶ್ವರಿ ಎಂದು ಹೇಳಿರುವುದು. ಇಲ್ಲವಾದರೆ, ಕಿಡ್ನೇಶ್ವರಿ ಮೊದಲಾಗಿ ಅನ್ನಬಹುದಾಗಿತ್ತಲ್ಲವೇ? ಇದು ಹಾಸ್ಯಕ್ಕಾಗಿ ಹೇಳಿದ ಮಾತಾದರೂ ಶಾಸ್ತ್ರಗಳಲ್ಲಿ ಹೃತ್ಪೂರ್ವಕ ಎಂಬ ಶಬ್ದಕ್ಕೆ ಬಹಳ ಮಹತ್ವವಿದೆ.

ದಾಸರು ಹೇಳಿದ ಜ್ಞಾನ ಮತ್ತು ಭಕ್ತಿಯ ಬಗ್ಗೆ ಸಮಯದ ಅಭಾವದಿಂದ ಇಲ್ಲಿಗೆ ನಿಲ್ಲಿಸಿ ವೈರಾಗ್ಯದ ಬಗ್ಗೆ ಹೇಳುವುದಾದರೆ ಗೋಪಾಲದಾಸರು ಈ ಕೆಳಗಿನ ಪದ್ಯದಲ್ಲಿ ಹೀಗೆ ಹೇಳುತ್ತಾರೆ.

ಸ್ವಯೋಗ್ಯತೆಯ ಆಯತದಲಿ ಅಪ್ಪುದುದನು
ನೋಯದೆ ಉಣ್ಣುವುದೇ ನ್ಯಾಯದ ವೈರಾಗ್ಯ

ಎಂದರೆ ವ್ಯಕ್ತಿಯು ತನ್ನ ಸ್ವರೂಪ, ಪ್ರವೃತ್ತಿ ಮತ್ತು ಯೋಗ್ಯತೆಗಳಿಗನುಗುಣವಾಗಿ ಲಭಿಸಿರುವುದನ್ನು ನೋಯದೇ ಉಣ್ಣುವುದು ಎಂದರೆ ಮತ್ಸರ ಪಡದೆ ಭೋಗಿಸುವುದು ನ್ಯಾಯದ ವೈರಾಗ್ಯ. ಇದನ್ನು ಹರಿಕೊಟ್ಟ ಕಾಲಕ್ಕೆ ಉಣಬೇಕು. ವೈರಾಗ್ಯದ ಹೆಸರಿನಲ್ಲಿ ಜಿಪುಣತನ ಬೇಡ. ಅದನ್ನು ಅನ್ಯಾಯದ ವೈರಾಗ್ಯ ಎಂದು ಹೇಳುತ್ತಾರೆ. ಹೀಗೆ ದಾಸ ಸಾಹಿತ್ಯದ ಪ್ರಸ್ತುತೀಕರಣ ಅದರಿಂದ ಸಾಮಾಜಿಕ ಸಂಬಂಧಗಳು, ವ್ಯವಹಾರ ವಹಿವಾಟುಗಳನ್ನು ಸುಧಾರಿಸಿಕೊಂಡು (self management style) ಬದುಕಿದರೆ ಸಹಬಾಳ್ವೆಯಿಂದ ಒಂದು ಸುಖಿ ಸಮಾಜ ನಿರ್ಮಿಸಿಕೊಳ್ಳಬಹುದು. ಸಂಗೀತದೊಂದಿಗೆ, ಹಾಡಿರುವು ದರಿಂದ ಅವು ಕೇಳಲು ತಿಳಿಯಲೂ ಬಹಳ ಸುಲಭ. ಈಗ ಬೇಕಾಗಿರುವುದು. ತಿಳುವಳಿಕೆ ಜೊತೆಗೆ ಆಚರಣೆಯ ಮುಚ್ಚಳಿಕೆ. ಅವರ ಕೃತಿಗಳಲ್ಲಿ ಕೆಲವು ರಾಜನಿಕ ವೈರುಧ್ಯಗಳು ಕಾಣುತ್ತವೆ. ಅವು ವಿವೇಕದ ಮಾತುಗಳು ಅಥವಾ ಕಿವಿ ಮಾತುಗಳು. ಅವು ಸಾಮಾಜಿಕ ವಿಘಟನೆಯ ಕಾಲದಲ್ಲಿ ಬದುಕಿ ಸಮಾಜದ ಏಳಿಗೆ ಬಯಸುವಲ್ಲಿ ಅವರಿಗೊದಗಿದ ಸವಾಲುಗಳು ಮತ್ತು ಅದನ್ನು ಎದುರಿಸಿದ ಅವರ ಸಮಜೋ ಶೈಕ್ಷಣಿಕ ಸಿದ್ಧತೆಗಳು ಉದಾಹರಣೆಗಾಗಿ.

"ಡಂಗೂರವ ಸಾರಿಯ್ಯ ಡಿಂಗರೀಗರೆಲ್ಲರು ಭೂಮಂಡಲಕ್ಕೆ ಪಾಂಡುರಂಗ ವಿಠ್ಠಲನೆ ಪರದೈವವೆಂದು" ಎಂದು ಒಂದು ಕಡೆ ಹೇಳಿದರೆ ಇನ್ನೊಂದು ಕಡೆ "ಮೆಲ್ಲನೇ ಮಾಧವನ ಮನವ ಮೆಚ್ಚಿಸಬೇಕು. ಬೆಲ್ಲವಾಗಿರಬೇಕು ಬಂಧು ಜನರೊಳಗೆ" ಇಲ್ಲಿ ವಿದ್ಯೆಗಿಂತಲೂ ವಿವೇಕದ್ದೇ ಮೇಲುಗೈ ಎಂಬ ಮಾತು ಬಿಡಿಸಿ ಹೇಳಬೇಕಾಗಿಲ್ಲ.

ಎಲ್ಲಕ್ಕಿಂತ ಮುಖ್ಯವಾಗಿ ಅವರು ಇಂದಿನ ಸಮಾಜಕ್ಕೆ ಕೊಟ್ಟ ಬಹುಮುಖ್ಯ ಕೊಡುಗೆ ಎಂದರೆ ಈ ಕೆಳಗಿನ ಕೆಲವು ಹಾಡುಗಳು. ಪಾಪಭೀತಿ, ಪ್ರಭುಭೀತಿ, ಪ್ರಜಾಭೀತಿ ಇಲ್ಲದೆ ಅಪರಾಧಗಳನ್ನು ಮಾಡುತ್ತಾ ಪ್ರಜಾ ಪ್ರಭುತ್ವದ ಅಡಿಯಲ್ಲಿ ಸಂವಿಧಾನದ ಚೌಕಟ್ಟಿನಲ್ಲಿ ಸರಿಪಡಿಸಲು ಆಗದೇ ಇರುವಾಗ ಇನ್ನು ಮುಂದೆಯಾದರೂ ದುಷ್ಟರಿಂದ ಆಗುವ ಭಯೋತ್ಪಾದನೆ ಬೃಹತ್ ಹಗರಣಗಳನ್ನು ತಪ್ಪಿಸಲು ಸ್ವಾತಿಕರಿಗೆ, ಸುಶಿಕ್ಷಿತರಿಗೆ, ಸದಾಚಾರಿಗಳಿಗೆ ಪರೋಪಕಾರ ಮನೋಭಾವ ಉಳ್ಳ ಸಜ್ಜನರಿಗೆ ಈ ದೇಶದ ಸಮೃದ್ಧಿಗಾಗಿ, ಸಮಾಜದ ಒಳಿತಿಗಾಗಿ ಈ ಕೆಳಗಿನ ಕೋಷ್ಟಕ ಅಥವಾ Equation ಗಳನ್ನು ಕೊಡುತ್ತಾರೆ. ಇಂತಹ ಒಂದು co-living scale ಉಪಯೋಗಿಸಿ live and let live ಎನ್ನುವ ತತ್ವದಿಂದ ಬಾಳಬಹುದು.

೧. ಧರೆಯೊಳು ದುರ್ಜನರು ಜಾಲಿಯ ಮರದಂತೆ

೨. ರೊಕ್ಕ ಎರಡಕ್ಕೂ ದುಃಖ

೩. ಮೂರ್ಖರಾದರು ಜನರು ಲೋಕದೊಳಗೆ

೪. ಆಚಾರವಿಲ್ಲದ ನಾಲಿಗೆ

೫. ಕುರುಡು ನಾಯಿ ಸಂತೆಗೆ ಬಂದಿತ್ತು

೬. ಮಾನವ ಜನ್ಮ ದೊಡ್ಡದು

೭. ಡೊಂಕು ಬಾಲದ ನಾಯಕರೆ

೮. ಕಲ್ಲು ಸಕ್ಕರೆ ಕೊಳ್ಳಿರೊ

೯. ನಿನ್ನ ಒಲುಮೆಯಿಂದ

೧೦. ಈಸಬೇಕು ಇದ್ದು ಜೈಸಬೇಕು

೧೧. ದಾನವನ ಕೊಂದದ್ದಲ್ಲವೋ

೧೨. ಅಜ್ಞಾನಿಗಳಕೂಡ ಅಧಿಕ ಸ್ನೇಹಕ್ಕಿಂತ

೧೩. ನಿಂದಕರಿರಬೇಕು ಇರಬೇಕು.

೧೪. ತಲ್ಲಣಿಸದಿರು ಕಂಡ್ಯ ತಾಳು ಮನವೆ

೧೫. ಉದರ ವೈರಾಗ್ಯವಿದು

೧೬. ತಾಳುವಿಕೆಗಿಂತ ಅನ್ಯತಪವು ಇಲ್ಲ

೧೭. ಕಂಗಳಿದ್ಯಾತಕೋ ಕಾವೇರಿ ರಂಗನ್ನ ನೋಡದ

೧೮. ಎಲ್ಲರೂ ಮಾಡುವದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ

ಒಟ್ಟಿನಲ್ಲಿ ದಾಸರು ಎಲ್ಲಾ ಸಚ್ಛಾಸ್ತ್ರ ವೇದೋಪನಿಷತ್ತುಗಳು ಭಾಗವತವೇ ಮೊದಲಾದ ಪುರಾಣಗಳ ಸಮಗ್ರ ಸಾರವನ್ನು ಪ್ರಸ್ತುತೀಕರಿಸಿ ಸಮಾಜ ಸುಧಾರಣೆಗಾಗಿ ತಮ್ಮ ಸೇವೆ ಮಾಡಿದ್ದಾರೆ.ಸಮಾಜದ ಅಭಿವೃದ್ಧಿಗೆ ವ್ಯಕ್ತಿಯ ಅಭಿವೃದ್ಧಿಯೇ ಮೂಲ. ಹಿಂದೆ ಯಜ್ಞ ಯಾಗಾದಿಗಳನ್ನು ಮಾಡಿ ಮಳೆ ಪಡೆದು ಸಮೃದ್ಧಿ ಹೊಂದುತ್ತಿರುವಂತೆ ಇಂದಿಗೂ ಭಕ್ತಿಯಿಂದ ದೇವರ ನಾಮಗಳನ್ನು ಹಾಡಿ ಕೇಳಿ ನೆನೆದು ಸುಖ ಶಾಂತಿಯನ್ನು ಪಡೆಯಬಹುದೆಂದು ಬಹಳ ಮಾರ್ಮಿಕವಾಗಿ ಹೇಳಿದ್ದಾರೆ. ಹೈದ್ರಾಬಾದ್ ಕರ್ನಾಟಕದವರು ಅದರಲ್ಲೂ ರಾಯಚೂರಿನ ತೊಟ್ಟಿಲಲ್ಲಿ ಬೆಳೆದ ದಾಸರು ವಿಶ್ವಸಂತರ ವಿರಳ ಪಂಕ್ತಿಯಲ್ಲಿ ನಿಲ್ಲಬಹುದಾದವರು. ಅವರ ಸಾಹಿತ್ಯದ ಸೌರಭವನ್ನು ಹೀರೋಣ, ಹಂಚೋಣ. ಅದರಲ್ಲೇ ಹೈದ್ರಾಬಾದ್ ಕರ್ನಾಟಕದ ಅಭಿವೃದ್ಧಿ ಇದೆ. ದಾಸ ಸಾಹಿತ್ಯದಲ್ಲಿಯ ಸಾರ್ವತ್ರಿಕ ಅಂಶಗಳನ್ನು ಹೆಚ್ಚು ಪ್ರಸಾರ, ಪ್ರಚಾರ ಮಾಡಬೇಕು. ಅಂತಹ ಸಂದರ್ಭದಲ್ಲಿ ವಿಳಂಬ ಅಥವಾ ತೊಂದರೆಗಳಾದರೆ ಕಲ್ಲಾಗಿ ಇರಬೇಕು. ಭವತೊರೆಯೊಳಗೆ ಎಂದು ಹೇಳಿದ್ದಾರೆ. ದಾಸರು ಸಮಾಜ ಸುಧಾರಕರಲ್ಲ ಆದರೆ ಸಮಾಜದ ವ್ಯಾಧಿಗೆ ಬೇಕಾದ ಸಿದ್ಧೌಷಧಿಗಳು ಅವರ ಕೃತಿಗಳಲ್ಲಿವೆ. ಈ ದೇಶದ ಋಷಿಮುನಿಗಳು ಸಂತ ಮಹಂತರು ಮಾಡಿದಂತೆ ಕನ್ನಡ ನಾಡಿನಲ್ಲಿ ಶರಣರು, ದಾಸರು ಸಮಾಜ ಸುಧಾರಣೆಗಾಗಿ ಸಾಕಷ್ಟು ಶ್ರಮಿಸಿದ್ದಾರೆ.

ದಾಸರು ಸಮಾಜದ ಮೇಲಿನ ಅಪಾರವಾದ ಕಳಕಳಿ ಹಾಗೂ ಲೋಕಾನುಭವದಿಂದ ಈ ಕೆಳಗಿನ ಅಂಶಗಳನ್ನು ಅಳವಡಿಸಿಕೊಂಡರು ಹಾಗೂ ಅಳವಡಿಸಿದರು. ಡಾಂಭಿಕ ಭಕ್ತಿಯ ಖಂಡನೆ, ನೈಜ ಭಕ್ತಿಯ ಪ್ರೇರಣೆ, ಸಹವಾಸದೋಷದ ದುಷ್ಫಲ, ಸತ್ಸಂಗದ ಮಹತ್ವ, ಹಣದ ಒಳಿತು ಕೆಡುಕುಗಳು, ಆಯುಷ್ಯದ ಸದುಪಯೋಗ, ಇವೆಲ್ಲವೂ ಪ್ರತಿಯೊಬ್ಬರಿಗೂ ಯಾವಾಗಲೂ ಅಗತ್ಯವಾಗಿ ತಿಳಿದಿರಬೇಕಾದ ಅಂಶಗಳು.

ಭಾಗವತ ಧರ್ಮ ಅನುಸರಿಸುವುದರ ಮೂಲಕ ಹರಿದಾಸರು ಸಮಾಜದಲ್ಲಿಯ ಸರ್ವದೇಶವು ಪುಣ್ಯದೇಶವು, ಸರ್ವಕಾಲವು ಪುಣ್ಯಕಾಲವು, ಸರ್ವಜೀವರು ದಾನಪಾತ್ರರು ಎಂದು ಹೇಳುತ್ತಾ ಸರ್ವರಿಗೂ ಸರ್ವರೊಂದಿಗೆ ಸಾರ್ವಕಾಲಿಕ ಸಹಬಾಳ್ವೆಯ ಗುಟ್ಟನ್ನು ತಿಳಿಸಿದರು.

ಶ್ರೀಸೂಕ್ತದಲ್ಲಿ ಹೇಳಿದಂತೆ "ನಕ್ರೋಧೋ ನಚ ಮಾತ್ಸರ್ಯಂ,ನಲೋಭೋನ ಅಶುಭಮತಿ" ಎಂಬುದು ಇಂದು ಅತ್ಯಂತ ಅಗತ್ಯ, ಮಾನವ ಜನ್ಮ ದೊಡ್ಡದು, ಈಸಬೇಕು ಇದ್ದು ಜೈಸಬೇಕು, ಆದದ್ದೆಲ್ಲ ಒಳಿತೇ ಆಯಿತು, ಇಂದಿನ ದಿನವೇ ಶುಭ ದಿನವು ಅಲ್ಲವೇ?




ಸ್ವಾಮಿಯ ದರ್ಶನಾರ್ಥ ತಿರುಮಲೆಗೆ ಬರುವ ಭಕ್ತರ ಸೌಕರ್ಯಾರ್ಥ ತಿರುಮಲೆ ತಿರುಪತಿ ದೇವಸ್ಥಾನದವರು ಟೋಲ್ ಫ್ರಿ ನಂಬರ್ ಅನ್ನು ಏರ್ಪಡಿಸಿದ್ದಾರೆ.ಯಾತ್ರಿಕರು, ಭಕ್ತರು ದೇವಸ್ಥಾನಕ್ಕೆ ಸಂಬಂಧಿಸಿದ ಸೂಚನೆ /ದೂರುಗಳನ್ನು ಮತ್ತು ಇತರ ಸಮಾಚಾರಕ್ಕಾಗಿ ಈ ನಂಬರನ್ನು ಸಂಪ್ರದಿಸಬಹುದು.

ತಿರುಮಲೆ ತಿರುಪತಿ ದೇವಸ್ಥಾನಗಳು

ಟೋಲ್ ಫ್ರಿ ನಂಬರ್

18004254141

ಈ ಅವಕಾಶವನ್ನು ಎಲ್ಲರೂ ಉಪಯೋಗಿಸಿಕೊಳ್ಳಿ!


ತಿರುಮಲೆ ತಿರುಪತಿ ದೇವಸ್ಥಾನವು ಯಾತ್ರಿಕರಿಗೆ ಮತ್ತಷ್ಟು ಸೇವೆಯನ್ನು ನೀಡಲು ನಿಮ್ಮ ಸೂಚನೆಗಳನ್ನು ನೀಡಿರಿ.

(ಮುಂದುವರೆದ ಭಾಗ)

# ಅನ್ನಮಯ್ಯ ಚರಿತ್ರೆಯ

– ಮೂಲ. ಎಂ. ಶಿವ ಪ್ರವೀಣ್

– ಅನುವಾದ ಬಿ. ಪದ್ಮಜ




## ನಾರಾಯಣ ಸೂರಿ

ಅಂತಹಾ ಸರ್ವಜ್ಞ ನಾಮಧೇಯವನ್ನು ಪಡೆದ ನಾರಾಯಣನಿಗೆ 'ನಾರಾಯಣಸೂರಿ' ಎಂಬ ಮಗ ಜನ್ಮಿಸಿದ. ಇವನೂ ತಂದೆಯಂತೆಯೇ ಎಲ್ಲ ವಿದ್ಯೆಗಳಲ್ಲೂ ಪ್ರವೀಣನಾಗಿ, ಪ್ರಜೆಗಳಿಂದ ಸೂರಿ ಅನಿಸಿಕೊಂಡ.ಸೂರಿ ಅಂದರೇ ಪಂಡಿತ ಎಂದರ್ಥ.ನಾರಾಯಣ ಸೂರಿಯ ಪತ್ನಿಯ ಹೆಸರು ಲಕ್ಕಮಾಂಬ.ಲಕ್ಕಮಾಂಬ ಗಂಡನ ಮನಸ್ಸನ್ನು ಅರಿತು ನಡೆದು ಕೊಳ್ಳುತ್ತಿದ್ದ ಹೆಂಗಸು. ಸಾದ್ವೀಮಣಿ, ಪರಮಭಕ್ತೆ, ತಾಳ್ಳಪಾಕಕ್ಕೆ ಸ್ವಲ್ಪ ದೂರದಲ್ಲಿದ್ದ ಮುಡುಪುರುನಲ್ಲಿ ಮಾಧವ ಮೂರ್ತಿ (ಆರ್ಚಾಮೂರ್ತಿ) ಈಕೆ ಕರೆದರೆ ಓಗೂಡುತ್ತಿದ್ದಾನೆಂದು ಪ್ರತೀತಿ. ಈ ಪುಣ್ಯದಂಪತಿಗಳಿಗೆ ತಮ್ಮನ್ನು ನರಕದಿಂದ ಕಾಪಾಡುವ ವಂಶೋದ್ಧಾರಕ ಬೇಕೆಂದು ತಿರುಮಲೆ ವೇಂಕಟೇಶ್ವರನನ್ನು ಶರಣು ಬೇಡಿದರು. ತಿರುಮಲೆಗೆ ಹೋಗಿ ಗರುಡ ಗಂಬದ ಹತ್ತಿರ ನಿಂತು,'ಕುಲವನ್ನು ಉದ್ದರಿಸುವ ತನಯನುಬೇಕೆಂದು ಸ್ವಾಮಿಯನ್ನು ಬೇಡಿಕೊಂಡರು.

ಭಕ್ತರು ಕೂಗಿದ ಕೂಡಲೇ ಓಗೊಡುವ ವೇಂಕಟೇಶ್ವರನು ಅವರ ಕನಸ್ಸಿನಲ್ಲಿ ಸಾಕ್ಷಾತ್ಕಾರಗೊಂಡು ನಂದಕವನ್ನು ಬಹು ಮಾನವಾನ್ನಾಗಿ ನೀಡಿದನು. ಅಷ್ಟೇ ಆ ದಂಪತಿಗಳ ಆನಂದಕ್ಕೆ ಪಾರವೇ ಇರಲಿಲ್ಲ.ಕೋಟಿ ಜನ್ಮಗಳನ್ನು ಎತ್ತಿದರೂ ಸಾಧ್ಯವಾಗದ ವಿಷ್ಣು ದರ್ಶನ, ಯುಗಯುಗಗಳು, ತಪಸ್ಸು ಮಾಡಿದರೂ ಲಭಿಸದ ಸ್ವಾಮಿ ದರ್ಶನ ಭಕ್ತ ಪ್ರಹ್ಲಾದ, ಧ್ರುವ, ಅಂಬರೀಷಾದಿಗಳಿಗೆ ಸಾಧ್ಯವಾಗದ ಶ್ರೀ ಹರಿ ನಿಜದರ್ಶನ ಭಾಗ್ಯ ಆ ದಿನ ಅವರಿಗೆ ಸ್ವಪ್ನದಲ್ಲಿ ಲಭಿಸಿತು ದಂಪತಿಗಳಲ್ಲಿ ಕೇವಲ ಯಾರಿಗೂ ಒಬ್ಬರಿಗೆ ಸ್ವಪ್ನ ದರ್ಶನವಾಗದೇ ಇಬ್ಬರಿಗೂ ಒಂದೇ ರೀತಿಯ ಸ್ವಪ್ನ ಬಂದಿದ್ದು ಅದು ದೈವ ಸಂಕಲ್ಪ. ತಮ್ಮ ಕನಸು ನೆರವೇರಿದೆ ಎಂಬ ಆನಂದ, ತಮ್ಮ ತಪಸ್ಸು ಫಲಿಸಿದೆ ಎಂದು ಸಂತೋಷದಿಂದ ತಮ್ಮ ಗ್ರಾಮಕ್ಕೆ ಸೇರಿಕೊಂಡರು.

## ಅನ್ನಮಯ್ಯ ಜನನ


ಶ್ರೀ ವೆಂಕಟೇಶ್ವರ ಸ್ವಾಮಿಯ ಅನುಗ್ರಹವು ವಿಶೇಷವಾದ್ದರಿಂದ ಆ ಪುಣ್ಯ ದಂಪತಿಗಳಾದ ನಾರಾಯಣಾಸೂರಿ, ಲಕ್ಕಮಾಂಬ,ವೈಶಾಖಮಾಸ ವಿಶಾಖ ನಕ್ಷತ್ರದಲ್ಲಿ ಶುಭ ಮುಹೂರ್ತದಲ್ಲಿ ಶುಭವನ್ನುಂಟು ಮಾಡುವ ಮೂರು ಗ್ರಹಗಳು, ಉಚ್ಚ ಸ್ಥಿತಿಯಲ್ಲಿ ಇರುವಾಗ, ರಾಜೀವ ನಯನ ವರ ಪ್ರಸಾದದ ಶಕ್ತಿ ಮುನಿಗೆ ಪರಾಶರನು ಜನಿಸಿದಂತೆ ಶ್ರೀ ಹರಿ ಖಡ್ಗವಾದ ನಂದಕಂ ಅಂಶದಿಂದ ಅನ್ನಮಯ್ಯ ಉದಹಿಸಿದನು.



ಶ್ರೀ ವೆಂಕಟೇಶ್ವರ ವರ ಪ್ರಭಾವ ಸಂಜಾತನಾದ ಆ ಮಗುವಿಗೆ ಜಾತಶೌರಿ ಸ್ಮಾರ್ತಾದಿ ಕರ್ಮಗಳನ್ನು ಶಾಸ್ತ್ರೋಕ್ತವಾಗಿ ನಾರಾಯಣಸೂರಿ ನೆರವೇರಿಸಿದನು. ಆ ಮಗುವಿಗೆ ಭಗವಂತನು ವಿಷ್ಣುವು ಆಜ್ಞಾಪಿಸಿದ ರೀತಿಯಲ್ಲಿ, ಬ್ರಹ್ಮನಿಗೆ ಇನ್ನೊಂದು ಹೆಸರಾದ 'ಅನ್ನಂ' ಎಂಬ ಪದ ಬರುವಂತೆ ಅನ್ನಮಯ್ಯ ಎಂದು ನಾಮಕರಣವನ್ನು ಮಾಡಿದರು. ಅಪುರೂಪವಾಗಿ ಹುಟ್ಟಿದ್ದರಿಂದ ಜೊತೆಗೆ ಶ್ರೀ ಹರಿಯ ವರ ಪ್ರಸಾದನಾದ್ದರಿಂದ ಆ ಮಗುವನ್ನು ತುಂಬಾ ಮುದ್ದಿನಿಂದ ಬೆಳೆಸಿದರು.

## ಅನ್ನಮಯ್ಯನ ಬಾಲ್ಯ


ಧರ್ಮಪರಾಯಣರೂ, ಭಾಗ್ಯವಂತರೂ ಆದ ಅನ್ನಮಯ್ಯನ ತಂದೆತಾಯಿಗಳಿಗೆ ಕಾರಣ ಜನ್ಮನಾದ ಅನ್ನಮಯ್ಯ ಜನಿಸಿದ್ದನು. ಹೂವು ಅರಳುತ್ತಲೇ ಪರಿಮಳಿಸುವಂತೆ ಅನ್ನಮಯ್ಯ ಹುಟ್ಟುತ್ತಲೇ ಸುಜ್ಞಾನವನ್ನು ಸಂಪಾದಿಸಿಕೊಂಡಿದ್ದನು. ನಂದಕ ಅಂಶದವನಾದ್ದರಿಂದ ಅನ್ನಮಯ್ಯನಿಗೆ ಚಿಕ್ಕಂದಿನಿಂದಲೇ ಆಧ್ಯಾತ್ಮಿಕ ಚಿಂತನೆ ಅಭ್ಯಾಸಗೊಂಡಿತು. ಆ ಜ್ಞಾನದಿಂದಾಗಿ ಅವನ ತಾಯಿ ತುಪ್ಪದ ಅನ್ನವನ್ನು ತಿನ್ನಿಸಲು ಹೋದರೆ ಹಾಗೆ ತಿನ್ನುವುದಕ್ಕೆ



ಒಪ್ಪುತ್ತಿರಲಿಲ್ಲ. ತಾಯಿ ಕೈ ತುತ್ತು ತಿನ್ನಿಸುತ್ತಿದ್ದರು. ಹಾಲನ್ನಾದರೂ ಅದು ತಿರುಮಲೇಶನ ವರಪ್ರಸಾದವೆಂದು ಹೇಳಿದರೆ ಮಾತ್ರ ತಿನ್ನುತ್ತಿದ್ದ. ನೀರಿನ ಓಟ ಯಾವ ಕಡೆ ಇದೆ ಎಂದು ಹೇಳಿದರವರು ಯಾರು? ಜೇನಿಗೆ ಹೂವಿನ ಮಕರಂದದ ರುಚಿಯನ್ನು ತಿಳಿದವರು ಯಾರು? ರಾಜ ಹಂಸಕ್ಕೆ ಸರೋವರದಲ್ಲಿ ತೇಲಾಡುವುದನ್ನು ತಿಳಿಸಿದವರು ಯಾರು? ಮಾವಿನ ಚಿಗುರನ್ನು ತಿಂದು ಇಂಪಾಗಿ ಹಾಡುವುದನ್ನು ಕೋಗಿ ಲೆಗೆ ಕಲಿಸಿದವರು ಯಾರು? ತುಂಬು ಚಂದಿರನನ್ನು ನೋಡಿ ಅದರ ಚಿಂತನೆಯನ್ನು ಮಾಡುವುದನ್ನು ಯಾರೂ ಹೇಳಬೇಕಾಗಿಲ್ಲ. ಅನ್ನಮಯ್ಯ ಜನ್ಮವೇ ಭಗವಂತನ ಸಂಕಲ್ಪ. ಅನ್ನಮಯ್ಯನ ಗಾನ ಭಗವಂತನ ಲೀಲಾ ವಿನ್ಯಾಸ. ತನ್ನ ಮೇಲೆ ಹಾಡನ್ನು ಬರೆದು, ಹಾಡನ್ನು ಹಾಡಿ,ತನ್ನನ್ನು ಪರವಶಗೊಳಿಸಬೇಕೆಂದು ಕಲಿಯುಗ ದೈವವಾದ ಸಪ್ತಗಿರಿ ಒಡೆಯನ ಇಚ್ಛೆ ಆದ್ದರಿಂದ ಪರಮಾತ್ಮನ ಸಂಕಲ್ಪ ದಿಂದಾಗಿ ಜನ್ಮಿಸಿದ ಅನ್ನಮಯ್ಯನಿಗೆ ಶ್ರೀ ಹರಿ ಭಕ್ತಿಯನ್ನು ಯಾರಾದರೂ ಕಲಿಸಬೇಕೆ?

ಎಡಪಕ ತೊಟ್ಟೆಲೋ ನೀಡಿ ಯಂತ ಪಾಟು
ಪಡಿ ಯಂತೆವಡಿ ಜೋಲಂ ಬಡನೆನಿಯುಣು
ವೆಂಕಟಪತಿ ಪೇರು ವಿವರಿಂಚಿ ಪಾಟಂ
ಬೊಂಕಿಂಚ ಕುಂದಿನಂ ಬೋರುಯದಿಲಾಂಡು
ಕೊಂಡಲಪ್ಪಣಿಕಿ ಮ್ರೊಕ್ಕು ಮಾತಂಚು ನನಕ
ಯೊಂದು ಲಾಗುಲ ಜತುಲೋನರಿಂಚಮ್ ದತಂಡು
ಈ ಲೀಲ ಶೇಷಶೈಲೇಂದ್ರುನಿ ಮೀಂದ

ಬಾಳಿನ ಪಡಿಯುಂಡುಮು ಬಸಿಬಿಡ್ಡಂಡಯ್ಯು (ಅನ್ನಮಯ್ಯ ಚರಿತ್ರೆ ಪುಟ 109, 110)



ಉಯ್ಯಾಲೆಯಲ್ಲಿ ಮಲಗಿಸಿ ಎಷ್ಟು ಹೊತ್ತು ತೂಗಿದರು, ಎಷ್ಟು ಲಾಲಿ ಹಾಡನ್ನು ಹಾಡಿದರೂ ವೆಂಕಟೇಶ್ವರನ ಹೆಸರು ಹೇಳದಿದ್ದರೆ ನಿದ್ರಿಸುತ್ತಿರಲಿಲ್ಲ. ಎಷ್ಟು ಪೂಜೆಗಳನ್ನು ಮಾಡಿದರೂ ಸಪ್ತಗಿರಿ ಒಡೆಯನಿಗೆ ಮಾತ್ರಾ ನಮಸ್ಕಾರ ಹಾಕುತ್ತಿದ್ದ ಲೋಕವೇ ತಿಳಿಯದ ಹಸುಗೂಸಿಗೆ ವೆಂಕಟೇಶ್ವರನ ಮೇಲೆ ಇಷ್ಟು ಭಕ್ತಿ ಹೇಗೆ ಸಾಧ್ಯ? ಇವೆಲ್ಲವೂ ಪೂರ್ವ ಜನ್ಮದ ಸಂಸ್ಕಾರವಿರಬೇಕು. ಹಾಗೆಯೇ ಅನ್ನಮಯ್ಯನಿಗೆ ಶ್ರೀ ವೇಂಕಟೇಶ್ವರನ ಭಕ್ತಿಯನ್ನು ಕಲಿಸುವ ಅಗತ್ಯವಿರಲಿಲ್ಲ.

## ಅನ್ನಮಯ್ಯನ ವಿದ್ಯಾಭ್ಯಾಸ

ಅನ್ನಮಯ್ಯ ಶುಕ್ಲ ಪಕ್ಷದ ಚಂದ್ರನಂತೆ ದಿನೇ ದಿನೇ ಪ್ರವರ್ಧಮಾನನಾಗಿ ಬೆಳೆಯುತ್ತಾ ಐದನೆಯ ವರುಷಕ್ಕೆ ಕಾಲಿಟ್ಟ. ಅಪಾರ ಪಾಂಡಿತ್ಯವನ್ನು ಹೊಂದಿದ್ದ ನಾರಾಯಣ ಸೂರಿ ಮಗನಿಗೆ ಉಪನಯನವನ್ನು ಮಾಡಿದ ಆ ಜನ್ಮ ಸುಜ್ಞಾನ ನಿಧಿಗೆ ಬ್ರಹ್ಮೋಪದೇಶವನ್ನು ಮಾಡಿದ ಬಾಲಕನಾದ ಅನ್ನಮಯ್ಯ ತಂದೆಯ ಮೂಲಕವೇ ವೇದಾಧ್ಯಾನವನ್ನು ಮಾಡಿದ ಶೇಷಾಚಲನಾದ ವೆಂಕಟೇಶ್ವರನ ಕೃಪಾಕಟಾಕ್ಷ ಹೇರಳವಾಗಿ ಹೊಂದಿದ್ದ ಅನ್ನಮಯ್ಯನ ನಾಲಿಗೆಯ ಮೇಲೆ ವೈದಿಕ, ನೈತಿಕ ವಿದ್ಯಗಳು ನಾಟ್ಯವಾಡಿದವು. ಆ ಚಿಕ್ಕ ವಯಸ್ಸಿನಲ್ಲೇ ಅವನು ಮಾತನ್ನಾಡಿದ್ದೆಲ್ಲಾ ಅಮೃತ ಕಾವ್ಯಗಳಾಯಿತು. ಹಾಡಿದ ಹಾಡುಗಳೆಲ್ಲಾ ಕೀರ್ತನೆಗಳಾಯಿತು. ತನ್ನ ಕವಿತೆಯು, ತನ್ನ ಗಾನವನ್ನು ತಾಳ್ಳಪಾಕದ ಗ್ರಾಮದ ಜನಗಳೆಲ್ಲರ ಬಾಯಲ್ಲಿ ನಲಿದಾಡುತ್ತಿತ್ತು. ಎಲ್ಲರೂ ವೆಂಕಟಪತಿಯ ಮೇಲೆ ಅದ್ಭುತ ರೀತಿಯಲ್ಲಿ ಹಾಡು ಗಳನ್ನು ಹಾಡತೊಡಗಿದ್ದರು.

ಮನೆಯಲ್ಲಿರುವವರು ಅನ್ನಮಯ್ಯನಿಗೆ ಯಾವ ಕೆಲಸ ಹೇಳಿದರೂ ಬೇಸರಿಕೊಳ್ಳದೆ ಮಾಡುತ್ತಿದ್ದ. ತಂದೆ ತಾಯಿಗಳು ಹೇಳಿದ ಕೆಲಸಗಳನ್ನು ಆನಂದದಿಂದ ಪೂರೈಸುತ್ತಿದ್ದ. ಒಂದು ದಿನ ತಂದೆತಾಯಿಗಳು ಅವನಿಗೆ ಹಸುಗಳಿಗೆ ಮೇವಿಗಾಗಿ ಹುಲ್ಲನ್ನು ತರುವಂತೆ ಕಳಿಸಿದರು. ಅನ್ನಮಯ್ಯ ಚೂಪಾದ ಕೊಡಲಿಯನ್ನು ಹಿಡಿದು ಊರಿನ ಹೊರಗೆ ಹೋದ ಆತ ಅಲ್ಲಿಗೆ ಹೋಗಿದ್ದು ಶ್ರೀ ಹರಿಗೆ ತನ್ನ ಹಾಡುಗಳಿಂದ ತೃಪ್ತಿ ಪಡಿಸುವುದಕ್ಕಾಗಿ ಹೋದ. ಅದೂ ಶ್ರೀ ವೆಂಕಟೇಶ್ವರನ ಸಂಕಲ್ಪ.

ಪಶುಗ್ರಾಸಕ್ಕಾಗಿ ಹೋದ ಅನ್ನಮಯ್ಯ ಕೈಯಲ್ಲಿದ್ದ ಕೊಡಲಿಯಿಂದ ಹುಲ್ಲನ್ನು ಕತ್ತರಿಸುವುದಕ್ಕೆ ಹೋಗಿ ತನ್ನ ಕಿರುಬೆರಳನ್ನು ಕತ್ತರಿಸಿಕೊಂಡ ಕೈಯಿಂದ ರಕ್ತ ಸುರಿಯುತ್ತಿತ್ತು. ಸ್ವಲ್ಪ ಹೊತ್ತು ಏನಾಗುತ್ತಿದೆಯೋ ಎಂದು ತಿಳಿಯುತ್ತಿರಲಿಲ್ಲ. ಆ ಕ್ಷಣದಲ್ಲಿ ಅಲ್ಲಿ ಗೇಕೆ ಬಂದೆನೋ? ಏನು ಮಾಡುತ್ತಿದ್ದಾನೋ ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡಿತು. ತನಗೆ ಕೆಲಸವನ್ನು ಹೇಳುವವರು ಎಂತಹಾ ಸಂಬಂಧಿಕರು? ತನಗೆ ಅವರೆಲ್ಲ ಎಷ್ಟು ವರ್ಷದ ಬಂಧುಗಳು? ಎಂಬ ಪ್ರಶ್ನೆ ಅವನನ್ನು ಕಾಡುತ್ತಿತ್ತು. ಚರಾಚರ ಸೃಷ್ಟಿಗೆ, ಎಲ್ಲರಿಗೂ ಶ್ರೀ ಹರಿಯೇ ಬಂಧುಗಳು, ಆ ಶೇಷಾದ್ರಿರಮಣನೆ ತಂದೆ,ತಾಯಿ, ಗುರುವು, ದೈವ, ಸ್ನೇಹಿತ ಎಲ್ಲವೂ ಅವನೇ ಅಂದುಕೊಳ್ಳುತ್ತಿರುವ ಸಮಯದಲ್ಲಿ ಎಲ್ಲಿಂದಲೋ ಗೋವಿಂದನಾಮ ಸ್ಮರಣೆ ಕಿವಿಗೆ ಕೇಳಿಸಿತು.ನಾಲ್ಕೂ ದಿಕ್ಕುಗಳಲ್ಲಿ ಪರಿಶೀಲಿಸಿ ನೋಡಿದಾಗ ಅನೇಕರು ಗುಂಪುಗುಂಪಾಗಿ ತಾಳ್ಳಪಾಕ ಗ್ರಾಮದಿಂದಲೇ ತಿರುಮಲೆಯ ಯಾತ್ರೆ ಮಾಡುತ್ತಿದ್ದ ಭಕ್ತ ಸಮೂಹದಲ್ಲಿ ಕಂಡು ಬಂತು. ಆ ಸಮೂಹದಲ್ಲಿ ಕೆಲವರು ತಂಬೂರಿಗಳನ್ನು ನುಡಿಸುತ್ತಿದ್ದರು.ಇನ್ನೂ ಕೆಲವರು ತಾಳವನ್ನು ತಟ್ಟುತ್ತಿದ್ದರು.ಮತ್ತೆ ಕೆಲವರು ಮೃದಂಗಗಳನ್ನು ಬಾರಿಸುತ್ತಿದ್ದರು. ಆ ಶಬ್ದಗಳಿಗೆ ಅನುಸಾರವಾಗಿ ಇನ್ನೂ ಕೆಲವರು ಹಾಡನ್ನು ಹಾಡುತ್ತಿದ್ದರು.ಅನ್ನಮಯ್ಯನಿಗೆ ಆ ಭಕ್ತಜನ ಸಮೂಹ ಆ ಕ್ಷಣದಲ್ಲಿ ಸನಕಾದಿ ಮುನಿಗಳಂತೆ ಕಾಣುತ್ತಿದ್ದರು.ಆ ಭಕ್ತರನ್ನು ತನಗೆ ತಿಳಿಯದಂತೆ ಅನ್ನಮಯ್ಯ ಅನುಸರಿಸಿದ.



# ಪದಬಂಧ - 6

**ಎಡದಿಂದ ಬಲಕ್ಕೆ**

01. ನೀರಿನಲ್ಲಿ ವಾಸ, ಬಹುಪಯೋಗಿ ...(2)
02. ಎಲ್ಲರಿಗೂ ಪ್ರೀತಿ ಪಾತ್ರ ಪಕ್ಷಿ - ಮಾಯವಾಗ್ತಿದೆ. ...(3)
03. ಮನೆಗಳಲ್ಲಿ ಓಡಾಡುವ (ಮಿಯಾಮ್) ...(2)
04. ಸ್ವಾಮಿಯ 3 ನೇ ಅವತಾರದ ಪ್ರಾಣಿ ...(3)
05. ಕಾಡಿನ ಆನೆಯಂತೆ ದೇಹದ ಪ್ರಾಣಿ ...(4)
06. (ಗೂಡನ್ನು) ಬಲೆಯನ್ನು ಕಟ್ಟುತ್ತೆ ...(2)
07. ಹಾವನ್ನು ಹೀಗೂ ಕರೆಯುತ್ತಾರೆ. ...(3)
08. ಮುದ್ದಾದ ಬೂದು ಬಣ್ಣದ ಹಕ್ಕಿ ...(4)

**ಬಲದಿಂದ ಎಡಕ್ಕೆ**

09. ಇದರ ಕಾಡಿನಲ್ಲಿನ ಕೂಗು, ಘರ್ಜನೆ ...(2)
10. ಸಿಕ್ಕಾಪಟ್ಟೆ ತಿನ್ನುವವನನ್ನು ಹೀಗೆನ್ನುತ್ತಾರೆ ...(3)
11. ಗಜೇಂದ್ರ ಮೋಕ್ಷದಲ್ಲಿ ಸ್ವಾಮಿಯಿಂದ ಸಾವು ...(3)
12. ದೇಹದ ತುಂಬಾ ಬಣ್ಣದ ಚಿತ್ತಾರ (ರೆಕ್ಕೆಯಲ್ಲಿ) ...(2)
13. ಬಿಲದಲ್ಲಿ ವಾಸಿಸುವ ಪ್ರಾಣಿ (ಹಾವಲ್ಲ) ...(2)

**ಮೇಲಿಂದ ಕೆಳಕ್ಕೆ**

14. ಕಾಡಿನಲ್ಲಿನ ದೊಡ್ಡ ಪ್ರಾಣಿ ಹಿಂಡಾಗಿ ಓಡಾಟ ...(2)
15. ಇದರ ಇಂಪಾದ ಕಂಠ ಕವಿಗಳಿಗೂ ಪ್ರಿಯ ...(3)
16. ಹುಲಿಯಂತೆ ಕಾಣುವ ಕಾಡು ಪ್ರಾಣಿ ...(3)
17. ಸೀತೆ ವನವಾಸದಲ್ಲಿ ಬಯಸಿದ ಸಾಧು ಪ್ರಾಣಿ ...(2)
18. ಹಲವಾರು ಕಾಲುಗಳಿಂದ ಓಡಾಡುವ ಕೆಂಪು ಬಣ್ಣದ ಪ್ರಾಣಿ ...(2)
19. ಈ ಪ್ರಾಣಿಗೆ ಜಿಂಕೆಯೆಂದರೆ ಬಲು ಇಷ್ಟ ...(2)
20. ಬೈಯ್ಯುವುದಕ್ಕೆ ಸಾಮಾನ್ಯವಾಗಿ ಈ ಆಗಸರ ಪ್ರಾಣಿಯನ್ನು ಉಪಯೋಗಿಸುತ್ತಾರೆ. ...(2)

**ಕೆಳಗಿನಿಂದ ಮೇಲಕ್ಕೆ**

21. ಮನೆಗಳಲ್ಲಿ ಓಡಾಡುವ ವಿಷ ತುಂಬಿದ ಪ್ರಾಣಿ ...(2)
22. ಬೈಯುವುದಕ್ಕೆ ಈ ಪ್ರಾಣಿಯನ್ನು ಉಪಯೋಗಿಸುತ್ತಾರೆ (ರಾತ್ರಿ ಹೆಚ್ಚು ಓಡಾಟವಿಲ್ಲ) ...(2)


| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 | | | 2 | | | 3 | |
| 2 | 4 | | 21 | 9 | | ✽ | 22 | ✽ |
| 3 | 14 | ✽ | 5 | | 15 | | | 10 |
| 4 | | 6 | | | | | | 11 |
| 5 | | 12<br>16 | | | | | 17 | ✽ |
| 6 | 7 | | 23 | 24 | 18 | 25 | | |
| 7 | | | 19 | 8 | | | | 20<br>26 |
| 8 | 27 | ✽ | | 13 | 28 | ✽ | 29 | |

**- ಪಿ.ಜಿ. ಶ್ರೀನಿವಾಸನ್**

- 46 ನೇ ಪುಟದಲ್ಲಿ ಉತ್ತರವನ್ನು ನೋಡಬಹುದು.

23. ಇದೊಂದು ಸ್ವಾಮಿಯ ವಾಹನ (ಪಕ್ಷಿ) ...(3)
24. ರಾಜರು ಇದನ್ನು ಸವಾರಿಗೆ ಉಪಯೋಗಿಸುತ್ತಿದ್ದರು ...(3)
25. ಅಡಿಗೆ ಮನೆಯಲ್ಲಿ ಇದರ ಓಡಾಟ ಹೆಚ್ಚು ...(3)
26. ಮಳೆಗಾಲದಲ್ಲಿ ಹೆಚ್ಚು ಕಾಣುವ, ಜಿಗಿದುಕೊಂಡು ಹೋಗುವ ಪ್ರಾಣಿ ...(2)
27. ಮರಳುಗಾಡಿನಲ್ಲಿ ಹೆಚ್ಚು ಉಪಯೋಗಿ, ಉದ್ದ ಕತ್ತಿನ ಪ್ರಾಣಿ ...(2)
28. ಅತಿಬುದ್ಧಿ ತೋರಿಸುವವರಿಗೆ ಇಂತಹ ಸ್ವಭಾವದವರೆನ್ನುತ್ತಾರೆ ...(2)
29. ನಾಯಿಯಂತೆ ಕಾಣುವ, ನರಿಯಂತಿರುವ ಭಯಂಕರ ಕಾಡುಪ್ರಾಣಿ ...(2)

# ತಿರುಪತಿ
# ಶ್ರೀ ಗೋವಿಂದರಾಜ ಸ್ವಾಮಿಯವರಿಗೆ
# ನಡೆದ ಜ್ಯೇಷ್ಠಾಭಿಷೇಕ ಮಹೋತ್ಸವ













ತಿರುಮಲೆ ನಾದನೀರಾಜನಂ ವೇದಿಕೆಯಲ್ಲಿ ಸುಂದರಕಾಂಡ ಪಾರಾಯಣ ಪ್ರಾರಂಭ

## ಲೋಕಕಲ್ಯಾಣಕ್ಕಾಗಿ ತಿರುಮಲೆ ಧರ್ಮಗಿರಿ ವೇದ ವಿಜ್ಞಾನ ಪೀಠದಲ್ಲಿ ನಿರ್ವಹಿಸಿದ ಮಹಾಸುದರ್ಶನ ಸಹಿತ ವಿಶ್ವಶಾಂತಿ ಮಹಾಯಾಗ


















## ತಿರುಪತಿ
## ಶ್ರೀ ಗೋವಿಂದರಾಜ ಸ್ವಾಮಿಯವರಿಗೆ
## ನಡೆದ ಬ್ರಹ್ಮೋತ್ಸವಗಳು





## ಅಪ್ಪಲಾಯಗುಂಟ
## ಶ್ರೀ ಪ್ರಸನ್ನ ವೆಂಕಟೇಶ್ವರ ಸ್ವಾಮಿಯವರಿಗೆ
## ನಡೆದ ಬ್ರಹ್ಮೋತ್ಸವಗಳು








ತಿ.ತಿ.ದೇ. ಧರ್ಮಕರ್ತೃ ಮಂಡಳಿ
ಎಕ್ಸ್‌ಅಫಿಷಿಯಾ ಸದಸ್ಯರಾಗಿ
27-05-2020 ರಂದು
ನೇಮಕಗೊಂಡ ಆಂಧ್ರಪ್ರದೇಶ್
ರಾಜ್ಯ ದೇವಾದಾಯ ಶಾಖೆ ಆಯುಕ್ತರು
ಶ್ರೀ .ಪಿ.ಅರ್ಜುನ್‌ರಾವ್, ಐ.ಎ.ಎಸ್., ರವರಿಗೆ
ಸ್ವಾಮಿಯವರ ಚಿತ್ರಪಟವನ್ನು ನೀಡುತ್ತಿರುವ
ತಿ.ತಿ.ದೇ. ಶ್ರೀ ಅಡಿಷನಲ್ ಕಾರ್ಯನಿರ್ವಹಣಾಧಿಕಾರಿ
ಶ್ರೀ ಎ.ವಿ. ಧರ್ಮಾರೆಡ್ಡಿಯವರು



ಆಂಧ್ರಪ್ರದೇಶದ ವತಿಯಿಂದ
ತಿ.ತಿ.ದೇ. ನೂತನ
ಸಂಯುಕ್ತ ಕಾರ್ಯನಿರ್ವಹಣಾಧಿಕಾರಿಯಾಗಿ
(ವಿದ್ಯೆ, ಆರೋಗ್ಯ) ನೇಮಕಗೊಂಡ
ಶ್ರೀಮತಿ ಎಸ್.ಭಾರ್ಗವಿ, ಐ.ಎ.ಎಸ್., ರವರು
20-05-2020 ರಂದು
ಬಾಧ್ಯತೆಯನ್ನು ಸ್ವೀಕರಿಸುತ್ತಿರುವ ದೃಶ್ಯ.



# ಪ್ರಕೃತಿಮಾತೆ ಪ್ರಸಾದಿಸಿದ ದಿವ್ಯೌಷಧಿ ಕತ್ತಾಳೆ


– ಮೂಲ : ಡಾ॥ ಸಿ. ಮಧುಸೂದನಶರ್ಮ
9000761390
ಅನುವಾದ : ಶ್ರೀಮತಿ


ಕತ್ತಾಳೆ (ಅಲೋ, ಲೋಳೆ) ಅತ್ಯಂತ ಸರ್ವೇ ಸಾಮಾನ್ಯವಾಗಿ ಎಲ್ಲಾ ಪ್ರದೇಶಗಳಲ್ಲಿ ಲಭಿಸುವುದು. ಆರೋಗ್ಯ ಸಂರಕ್ಷಣೆಗೆ, ಸೌಂದರ್ಯಕ್ಕೆ ಉಪಯೋಗಿಸಲ್ಪಡುವ ಔಷಧೀಯ ಬೇರು. ಈ ಸಸ್ಯವನ್ನು ನಮ್ಮ ಮನೆಗಳ ಕುಂಡಗಳಲ್ಲಿ ಗೃಹಾಲಂಕಾರದಲ್ಲಿ, ಕಾಂಪೌಂಡಿನ ಗೋಡೆಗಳ ಮೇಲೆ, ಉದ್ಯಾನವನಗಳಲ್ಲಿಯೂ ಬೆಳೆಸಬಹುದು.

ಒಂದು ಗುಚ್ಛದಂತೆ ಎಲೆಗಳು ಕಾಡದ ಕೆಳಭಾಗದಿಂದ ಬರುವ ಬಹು ವಾರ್ಷಿಕ ಸಸ್ಯವಿದು. ಈ ಸಸ್ಯದ ಎಲೆಗಳ ಅಂಚುಗಳು ಮುಳ್ಳಿನಂತಿರುವ ಹಲ್ಲುಗಳನ್ನು ಹೊಂದಿವೆ. ಈ ಎಲೆಗಳು ನೇರವಾಗಿ ನೀಳವಾಗಿ, ದಪ್ಪವಾಗಿರುವುದರಿಂದ 'ಸ್ಥೂಲದಳ' ವೆಂದೂ ಸ್ತ್ರೀಯರ ಅನಾರೋಗ್ಯ ಸಮಸ್ಯೆಗಳನ್ನು ಅದ್ಭುತವಾದ ರೀತಿಯಲ್ಲಿ ಪರಿಷ್ಕರಿಸುವುದರಿಂದ 'ಕುಮಾರಿ' ಎಂದೂ, ಇದರ ರಸವು ತುಪ್ಪದಂತಿರುವುದರಿಂದ 'ಘೃತಕುಮಾರಿ' ಎಂಬ ಹೆಸರುಗಳಿಂದ ಸಂಸ್ಕೃತದಲ್ಲಿ ವ್ಯವಹರಿಸುತ್ತಾರೆ.

'ಅಗಾವೇಸಿ'ಎಂಬ ವೃಕ್ಷ ಕುಟುಂಬಕ್ಕೆ ಸೇರಿದ ಈ ಕತ್ತಾಳೆಯ ಶಾಸ್ತ್ರೀಯ ನಾಮಧೇಯ 'ಅಲೋವೆರಾ'.

ಈ ಕತ್ತಾಳೆಯನ್ನು ವಿವಿಧ ವ್ಯಾಧಿಗಳಲ್ಲಿ ಹೇಗೆ ಬಳಸಬಹುದೆಂದೂ, ಯಾವ್ಯಾವ ಸಮಸ್ಯೆಗಳಿಂದ ಹೊರಬರಬಹುದೆಂದು ಪ್ರಸ್ತುತ ತಿಳಿಯೋಣ.

**ಚರ್ಮದ ಸಮಸ್ಯೆಗಳಿಗೆ : ಬಾವು, ಗಾಯ, ಹುಣ್ಣುಗಳಿಗೆ :** ದಿನವೂ ಒಂದೆರಡು ಬಾರಿ ಕತ್ತಾಳೆಯ ರಸದಲ್ಲಿ ತಕ್ಕಷ್ಟು ಅರಿಶಿನಪುಡಿ ಕಲಿಸಿ ಹಚ್ಚುತ್ತಿರಬೇಕು.

**ಇರುವೆ ಕಡಿತದಿಂದಾಗುವ ಗುಳ್ಳೆಗಳು ಒಡೆಯಲು:** ಲೋಳೆ ರಸದಲ್ಲಿ ತಕ್ಕಷ್ಟು ಉಪ್ಪು ಅರಿಶಿನ ಪುಡಿ ಕಲಿಸಿ ಗಾಯದ ಮೇಲೆ ಹಚ್ಚಿ ಕಟ್ಟುವುದರಿಂದ ಅವು ಬೇಗನೇ ಒಡೆದು, ನೋವು ಕೂಡಾ ಶಮನ ಗೊಂಡು ಗಾಯವು ಸಹ ಮಾಯುತ್ತದೆ.

**ಸೋರಿಯಾಸಿಸ್:** ಲೋಳೆವನ್ನು ಮಿಕ್ಸಿಯಲ್ಲಿ ಹಾಕಿ ರಸವನ್ನು ತೆಗೆದು ಸಮ ಪ್ರಮಾಣದಲ್ಲಿ ಜೌಡಲದ ಎಣ್ಣೆಯಲ್ಲಿ ಕಲಿಸಿ ಮೈಗೆ ಹಚ್ಚಿ ಒಂದೆರಡು ತಾಸು ಬಿಟ್ಟು ಸ್ನಾನ ಮಾಡುವುದರಿಂದ ಒಳ್ಳೆಯ ಫಲಿತಾಂಶ ದೊರಕುತ್ತದೆ.

**ಕಾಲಿನ ಒಡೆತಕ್ಕೆ:** ದಿನವೂ ಎರಡು ಬಾರಿ ಕತ್ತಾಳೆಯ ರಸವನ್ನು ಹಚ್ಚುತ್ತಿರುವುದರಿಂದ ಉರಿ ಕಡಿಮೆಯಾಗುವುದೊಂದೇ ಅಲ್ಲದೇ ಬೊಬ್ಬೆಗಳೇಳದಂತೆ ನೋಡುತ್ತದೆ. ಅಲೋವೆರಾದಲ್ಲಿರುವ ಟಿ.ಎಕ್ಸ್.ಎ.ಟಿ - 2 ಎಂಬ ರಸಾಯನವು ನೋವನ್ನು ಕಡಿಮೆ ಮಾಡುವುದೊಂದೇ ಅಲ್ಲದೇ ಸತ್ತ ಜೀವಕೋಶಗಳ ಜಾಗದಲ್ಲಿ ಹೊಸ ಕೋಶಗಳ ಉತ್ಪತ್ತಿಯನ್ನು ಪ್ರಚೋದನೆಗೊಳಿಸುವುದರಿಂದ ಚರ್ಮವು ಶೀಘ್ರ ಸಾಧಾರಣ ಸ್ಥಿತಿಗೆ ಬಂದು ಬಿಡುತ್ತದೆ.

**ಅತಿ ಉಷ್ಣಕ್ಕೆ:** ದಿನವೂ ಒಂದೆರಡು ಬಾರಿ, ಬಾರಿಯೊಂದಕ್ಕೆ ಒಂದು ಟೀ ಸ್ಪೂನ್ ಕತ್ತಾಳೆಯ ರಸವನ್ನು 5 ಬಾರಿ ನೀರಿನಲ್ಲಿ ಮುಳುಗಿಸಿ ತೆಗೆದು ತಕ್ಕಷ್ಟು ಕಲ್ಲು ಸಕ್ಕರೆಯಲ್ಲಿ ಅದ್ದಿ ನುಂಗಿದರೆ ಅಧಿಕ ಉಷ್ಣ ತಗ್ಗುತ್ತದೆ.

**ಕಣ್ಣಿನ ಸಮಸ್ಯೆಗಳಿಗೆ :** ಸಾಕಾಗುವಷ್ಟು ರಸವನ್ನು ನೀರಿನಲ್ಲಿ ಬೆರೆಸಿ ಬಟ್ಟೆಯಲ್ಲಿ ನಾನಿಸಿ ಕಣ್ಣು ಮೇಲೆ ಇಟ್ಟುಕೊಳ್ಳುತ್ತಿದ್ದರೆ ಕಣ್ಣುರಿ, ಕಣ್ಣಿಂದ ನೀರು ಸುರಿಯುವುದು, ಸಿಳ್ಳುಗಟ್ಟುವುದು. ಕಣ್ಣು ಕೆಂಪಾಗುವುದು, ಕಣ್ಣು ತಿವಿತ ಕಡಿಮೆಯಾಗುತ್ತವೆ.

**ಹೊಟ್ಟೆ, ಕರುಳುಗಳಲ್ಲಿ ಬರುವ ಅಲ್ಸರುಗಳಿಗೆ:** 50 ಗ್ರಾಂ ಸೋಂಪು ಬೀಜದ ನುಣ್ಣನೆಯ ಚೂರ್ಣವನ್ನು 200 ಮಿ.ಲಿ. ಕತ್ತಾಳೆ ರಸದಲ್ಲಿ ಕಲಿಸಿ ಚೆನ್ನಾಗಿ ಒಣಗಿಸಿ ಶೇಖರಿಸಿಟ್ಟುಕೊಂಡು ಎರಡೂ ಹೊತ್ತು, ಬಾರಿಯೊಂದಕ್ಕೆ 2-3 ಗ್ರಾಂ ಪ್ರಮಾಣದಲ್ಲಿ 50-100ಮಿ.ಲಿ. ನೀರಿನಲ್ಲಿ ಕಲಿಸಿ ಸೇವಿಸುತ್ತಿದ್ದರೆ ಹೊಟ್ಟೆಯಲ್ಲಿನ ಹುಣ್ಣು, ಗಾಯ, ಹೊಟ್ಟೆದುಬ್ಬರ, ಹೊಟ್ಟೆ ವಿರೇಚನಗಳು ತಗ್ಗುತ್ತವೆ.ಸಂಶೋಧನೆಯಲ್ಲೂ ಸಹಾ ಅಲೋವೆರಾಕ್ಕೆ ಅಲ್ಸರನ್ನು ಶಮನಗೊಳಿಸುವ ಗುಣವಿದೆಯೆಂದು ಕಂಡು ಹಿಡಿಯಲಾಗಿದೆ.

**ಅಂಗೈ - ಅಂಗಾಲುಗಳ ಉರಿತಕ್ಕೆ :** ಒಂದು ಭಾಗ ಜೀರಿಗೆಯ ಚೂರ್ಣವನ್ನು ನಾಲ್ಕು ಭಾಗ ಕತ್ತಾಳೆ ರಸದಲ್ಲಿ ಕಲಿಸಿ ಮೆತ್ತಗೆ ನಾದಿ ಅಂಗೈ

ಅಂಗಾಲುಗಳಿಗೆ ಮಸಾಜು ಮಾಡಿ ಅರ್ಧಗಂಟೆಯ ನಂತರ ತೊಳೆಯ ಬೇಕು.

**ಕೀಲು ನೋವಿಗೆ :** ಅರ್ಧ ಕಿಲೋ ಕತ್ತಾಳೆ, ಕಾಲು ಕಿಲೋ ಗೋಧಿಹಿಟ್ಟನ್ನು ಬಿಡಿ ಬಿಡಿಯಾಗಿ ತುಪ್ಪದೊಂದಿಗೆ ತರಿ ತರಿಯಾಗಿ ಪುಡಿ ಮಾಡಿಟ್ಟು ಕೊಳ್ಳಬೇಕು. ಕಾಲು ಕಿಲೋ ಸ್ಪಟಿಕ ಬೆಲ್ಲದ ಪುಡಿಯಲ್ಲಿ ಸ್ವಲ್ಪ ನೀರು ಕಲಿಸಿ ಉರಿಯ ಮೇಲಿಟ್ಟು ಜೇನಿನಷ್ಟು ಪಾಕ ಬರುವಂತೆ ಕುದಿಸಿ ನಂತರ ಅದರಲ್ಲಿ ಕತ್ತಾಳೆ ಗೊಜ್ಜು, ಗೋಧಿಹಿಟ್ಟು, ಕಾಲು ಕಿಲೋ ಆಕಳ ತುಪ್ಪವನ್ನು ಕಲಿಸಿ ಸಣ್ಣನುರಿಯಲ್ಲಿ ಸ್ವಲ್ಪ ಹೊತ್ತು ಬಿಸಿಮಾಡಿ, ಬಿಸಿಯಾರಿದ ನಂತರ ಶೇಖರಿಸಿಟ್ಟುಕೊಳ್ಳಬೇಕು. ಮುಂಜಾನೆ - ಸಂಜೆ ಬಾರಿಯೊಂದಕ್ಕೆ ಒಂದು ಟೀ ಸ್ಪೂನ್‌ನಂತೆ ಸೇವಿಸುತ್ತಿರಬೇಕು.

**ತಲೆಗೂದಲು ಬೆಳೆಯಲು ಹೇಯರ್ ಆಯಿಲ್:** ಲೋಳೆ ರಸ ವನ್ನು ಮಿಕ್ಸಿಯಲ್ಲಿ ರುಬ್ಬಿ ತೆಗೆದು ಕಾಲು ಕಿಲೋ ತೆಗೆದುಕೊಂಡು ಅರ್ಧ ಕಿಲೋ ಕೊಬ್ಬರಿ ಎಣ್ಣೆಯಲ್ಲಿ ಕಲಿಸಿ ಸಣ್ಣ ನುರಿಯಲ್ಲಿ ರಸವೆಲ್ಲಾ ಇಂಗಿ ಹೋಗಿ ಎಣ್ಣೆ ಮಾತ್ರವೇ ಉಳಿಯುವಂತೆ ಮರಳಿಸಿ ಕೆಳಗಿಳಿಸಿ ಬಿಸಿ ಯಾರಿದ ನಂತರ ಶೋಧಿಸಿ ಕೇಶ ತೈಲವಾಗಿ ಬಳಸುತ್ತಿದ್ದರೆ ತಲೆ ಗೂದಲು ಅಂದವಾಗಿ, ಆಕರ್ಷಣೀಯವಾಗಿ, ಮೃದುವಾಗಿ ಬೆಳೆವು ದಲ್ಲದೇ ತಲೆ ಯಲ್ಲಿ ನವೆ, ತುರಿಕೆ, ಹೊಟ್ಟು ನಿವಾರಣೆಯಾಗುತ್ತದೆ.

**ಗರ್ಭಾಶಯ ವ್ಯಾಧಿಗಳಿಗೆ :** ಜೀರಿಗೆಯನ್ನು ಪುಡಿ ಮಾಡಿದ ಚೂರ್ಣವನ್ನು 50 ಗ್ರಾಂ , ಅರಿಶಿನ ಪುಡಿ 50 ಗ್ರಾಂ ಸ್ಪಟಿಕ ಬೆಲ್ಲ 50 ಗ್ರಾಂ ಕಲಿಸಿಟ್ಟುಕೊಂಡು ದಿನವೂ ಎರಡು ಬಾರಿ, ಬಾರಿಯೊಂದಕ್ಕೆ ಒಂದು ಟೀಸ್ಪೂನ್ ಕತ್ತಾಳೆ ಗಿಡವನ್ನು ಏಳು ಬಾರಿ ನೀರಿನಲ್ಲಿ ಮುಳುಗಿಸಿ, ಮೇಲೆ ಹೇಳಿದಂತೆ ತಯಾರಿಸಿದ ಪುಡಿಯನ್ನು 2 ಗ್ರಾಂ ತೆಗೆದುಕೊಂಡು ಆ ರಸವನ್ನು ಆ ಪುಡಿಯಲ್ಲಿ ಅದ್ದಿ ನುಂಗುತ್ತಿರಬೇಕು.ಈ ವಿಧವಾಗಿ ಸೇವಿಸುವು ದರಿಂದ ಮುಟ್ಟು ಹೆಚ್ಚು-ಕಮ್ಮಿ ಬರುವುದು ರಕ್ತಸ್ರಾವ ಸರಿಯಾಗಿ ಆಗದಿರುವುದು, ರಕ್ತಸ್ರಾವ ಕಡಿಮೆ ಪ್ರಮಾಣದಲ್ಲಾಗುವುದು, ಫೈಬ್ರಾಡ್ಸ್ ನಂತಹ ಗರ್ಭಾಶಯ ಗೆಡ್ಡೆಗಳು ಮೊದಲಾದ ಬೇನೆಗಳಲ್ಲಿ ಉತ್ತಮವಾದ ಉಪಶಮನವುಂಟಾಗುತ್ತದೆ.

ಲೋಳೆಗಿಡವನ್ನು ಒಣಗಿಸಿ ಒಂದು ಪ್ರತ್ಯೇಕ ವಿಧಾನದ ಮೂಲಕ ತಯಾರು ಮಾಡಿದ ಔಷಧಿಯನ್ನು ಮುಸಾಂಬ್ರಂ ಎನ್ನುತ್ತಾರೆ. ಈ ಮುಸಾಂಬ್ರಂ ಆಯುರ್ವೇದ ವಿಕ್ರಯಾಲಯ ಗಳಲ್ಲಿ, ಔಷಧಾಲಯಗಳಲ್ಲಿ ಕಡಿಮೆ ದರ ದಲ್ಲಿ ಲಭ್ಯವಿದೆ. ಇದು ಕೂಡಾ ವಿವಿಧ ವ್ಯಾಧಿ ಗಳಲ್ಲಿ ಉತ್ತಮವಾಗಿ ಕೆಲಸ ಮಾಡು ತ್ತದೆ.

**ವಾಯುನೋವಿಗೆ:**
ಮುಸಾಂಬ್ರಂವನ್ನು ನೀರಿನಲ್ಲಿ ಕರಗಿಸಿ ಗಂಧದಂತೆ ಮಾಡಿ ಹಚ್ಚುತ್ತಿರಬೇಕು. ಹೀಗೆ ಬಳಸುವುದರಿಂದ ಕೀಲುನೋವುಗಳು, ಬೀಳು ವುದರಿಂದ ಉಂಟಾಗುವ ಪೆಟ್ಟುಗಳ ನೋವು ಕಡಿಮೆಯಾಗುತ್ತವೆ.

**ಹಸಿಗೂಸುಗಳಿಗೆ ಅಜೀರ್ಣವಾಗಿದ್ದರೆ :** ಮುಸಾಂಬ್ರಂದ ಪುಡಿ ಯನ್ನು ತೆಗೆದುಕೊಂಡು ತಕ್ಕಷ್ಟು ನೀರಿನಲ್ಲಿ ಕರಗಿಸಿ ಬಿಸಿಯಾರಿದ ನಂತರ ವೀಳ್ಯದೆಲೆ ಮೇಲೆ ಹಚ್ಚಿ ಹೊಟ್ಟೆಯ ಮೇಲೆ ಎಲೆಯನ್ನು ಇಡುವುದರಿಂದ ಹಸಿಗೂಸುಗಳಿಗೆ ಉಂಟಾಗುವ ಅಜೀರ್ಣ, ಹೊಟ್ಟೆ ದುಬ್ಬರಗಳು ಕಡಿಮೆ ಯಾಗುತ್ತವೆ.

**ಮೂಲವ್ಯಾಧಿಯ ಬಾವಿಗೆ:** (ತಾಳಪತ್ರ ಗ್ರಂಥದಲ್ಲಿರುವ ಲಿಖಿತ ರೂಪ) ಮುಸಾಂಬ್ರಂಪುಡಿ, ಕರ್ಪೂರ, ಪಚ್ಚ ಕರ್ಪೂರ- ಸಮ ಪ್ರಮಾಣ ದಲ್ಲಿ ಕಲಿಸಿ ಸಣ್ಣನುರಿಯಲ್ಲಿ ಕುದಿಸಿ, ಕೆಳಗಿಳಿಸಿ ಮೂಲವ್ಯಾಧಿ ಗಂಟುಗಳ ಮೇಲೆ ಲೇಪನ ಮಾಡುತ್ತಿರಬೇಕು.

**ಋತುಚಕ್ರದ ನೋವಿಗೆ :** ಒಂದೂವರೆ ಗ್ರಾಂ ಮುಸಾಂಬ್ರ, ಒಂದೂವರೆ ಗ್ರಾಂ ಹಳೆಬೆಲ್ಲ ಕಲಿಸಿ ನೀರಿನಲ್ಲಿ ನಾದಿ ಮೂರು ಮಾತ್ರೆ ಗಳನ್ನಾಗಿ ಮಾಡಿ, ಒಣಗಿಸಿಟ್ಟುಕೊಂಡು ಮುಟ್ಟಿನ ಸಮಯದಲ್ಲಿ ಹಸಿ ಹೊಟ್ಟೆಯಲ್ಲಿ ದಿನಕ್ಕೊಂದರಂತೆ ಮೂರು ದಿನಗಳು ಸೇವಿಸಬೇಕು. ಹೀಗೆ ಪ್ರತಿ ಮಾಸದ ಮುಟ್ಟಿನ ವೇಳೆಯಲ್ಲಿ ಮೂರು ದಿನಗಳು ಮೂರು ತಿಂಗಳು ಗಳವರೆಗೆ ಅನುಸರಿಸಬೇಕು.

**ಅಸ್ತಮಾಕ್ಕೆ :** ಮುಸಾಂಬ್ರಾಂವನ್ನು ನೀರಿನಲ್ಲಿ ಕಲಿಸಿ ಬಟಾಣಿ ಬೀಜದಷ್ಟು ಮಾತ್ರೆಗಳನ್ನಾಗಿ ಮಾಡಿ ಒಣಗಿಸಿಟ್ಟುಕೊಂಡು ಬೆಳಗ್ಗೆ, ಸಾಯಂಕಾಲ ಒಂದೊಂದು ಮಾತ್ರೆಯಂತೆ ನುಂಗಿ ಒಂದು ಲೋಟ ಉಗುರು ಬೆಚ್ಚಗಿನ ನೀರನ್ನು ಕುಡಿಯುತ್ತಿದ್ದರೆ ಅಸ್ತಮಾಕ್ಕೆ ಉತ್ತಮ ಉಪ ಶಮನ ದೊರಕುತ್ತದೆ.

ಕತ್ತಾಳೆ,ಮುಸಾಂಬ್ರಂವನ್ನು ಗರ್ಭವತಿಯರು ಬಳಸಿದರೆ ಗರ್ಭ ಸ್ರಾವವಾಗಬಹುದು. ಬಾಣಂತಿಯರು ಬಳಸಿದರೆ ಹಾಲು ಕುಡಿಯುವ ಮಕ್ಕಳಿಗೆ ಹೆಚ್ಚು ಬಾರಿ ಅಜೀರ್ಣವಾಗುವ ಸಾಧ್ಯತೆಯಿರುತ್ತದೆ.

ರಜಃ ಪ್ರವರ್ತಿನಿ, ಕುಮಾರ್ಯಾಸವದಂತಹ ಆಯುರ್ವೇದ ಔಷಧಿಗಳ ತಯಾರಿಕೆಯಲ್ಲಿ ಲೋಳೆಯನ್ನು ಬಳಸು ತ್ತಾರೆ.

# ಅಕ್ರೂರನ ಭಗವತ್ಪ್ರೇಮ

– ರಾ. ನ. ನ ಮೂರ್ತಿ



ದೇಹಂಭೃತಾಮಿಯಾನರ್ಥೋ ಹಿತ್ವಾದಂಭಂ ಭಿಯಂ ಶುಚಮ್ ।
ಸಂದೇಶಾದ್ ಯೋ ಹರೇರ್ಲಿಂಗದರ್ಶನ ಶ್ರವಣಾದಿಭಿಃ॥

ಭಕ್ತಿ ಶಾಸ್ತ್ರದಲ್ಲಿ ಭಕ್ತಿಯನ್ನು ಶ್ರವಣ, ಕೀರ್ತನ, ಸ್ಮರಣ ಪಾದಸೇವನ, ಅರ್ಚನ, ವಂದನ, ದಾಸ್ಯ, ಸಖ್ಯ ಮತ್ತು ಆತ್ಮ ನಿವೇದನವೆಂದು ಒಂಭತ್ತು ರೀತಿಯಲ್ಲಿ ತಿಳಿಸಿದ್ದಾರೆ. ಇದಕ್ಕೆ ಉದಾಹರಣೆಯಾಗಿ ಒಬ್ಬೊಬ್ಬ ಭಕ್ತರನ್ನು ಹೆಸರಿಸಬಹುದು. ಶ್ರವಣದಲ್ಲಿ ಪರೀಕ್ಷಿತ್, ಕೀರ್ತನೆಯಲ್ಲಿ ವೇದವ್ಯಾಸ, ವಂದನೆಯಲ್ಲಿ ಅಕ್ರೂರ ಎಂದು ಹೇಳಲ್ಪಟ್ಟಿದೆ. ಈತ ಭಗವಂತನ ವಂದನಾಪ್ರಧಾನ ಭಕ್ತ, ಇವನ್ನೂ ಸಹ ಯದುವಂಶದಲ್ಲಿಯೇ ಹುಟ್ಟಿದ್ದು. ವಸುದೇವನ ಕುಟುಂಬಕ್ಕೆ ಸಂಬಂಧದಲ್ಲಿ ಸಹೋದರ, ತಂದೆ, ಶ್ವಫಲ್ಕ, ಕಂಸನ ಆಸ್ಥಾನದಲ್ಲಿದ್ದ ಪ್ರಮುಖ. ಕಂಸನ ಅತ್ಯಾಚಾರಗಳಿಂದ ನೊಂದು ಬಹಳಷ್ಟು ಯದುವಂಶದವರು ಅತ್ತಿತ್ತ ಓಡಿದರು. ಆದರೆ ಈತ ಮಾತ್ರ ಅದ್ಹೇಗೇ ಕಂಸನ ಸಭೆಯಲ್ಲಿಯೇ ಉಳಿದಿದ್ದ.

ಬಹಳಷ್ಟು ಉಪಾಯಗಳನ್ನು ಹೂಡಿದರೂ ಕಂಸ ಭಗವಂತನನ್ನು ಕೊಲ್ಲಲ್ಲಾಗದಿದ್ದಾಗ ಆಗೊಂದು ಹುನ್ನಾರವನ್ನು ಮಾಡಿದ ಆಗೊಂದು ಧನುಷ ಯಜ್ಞವನ್ನು ಕೈಗೊಂಡ. ಅದರಲ್ಲಿ ಮಲ್ಲ ಪಟುಗಳ ಮೂಲಕ ಕೊಲ್ಲಿಸಲು ಗೋಕುಲ ದಿಂದ ಗೋಪ-ಗೊಲ್ಲರ ಸಹಿತ ಶ್ರೀ ಕೃಷ್ಣ ಬಲರಾಮರನ್ನು ಕರೆಸಿದ. ಅವರನ್ನು ಗೌರವ-ಮರ್ಯಾದೆಗಳಿಂದ ಕರೆತರಲು ಅಕ್ರೂರನನ್ನು ಕಳುಹಿಸಿದ. ಕಂಸನ ಆಜ್ಞೆ ಬರುತ್ತಲೇ ಆಕ್ರೂರನ ಆನಂದಕ್ಕೆ ಪಾರವೇ ಇರಲಿಲ್ಲ. ಭಗವಂತನ ದರ್ಶನಕ್ಕೆ ಆತ ಉತ್ಸುಕನಾದ. ಹೇಗಾದರೂ ಮಾಡಿ ಅವನ ದರ್ಶನಕ್ಕೆ ಹಾತೊರೆಯುತ್ತಿದ್ದ. ಭಗವಂತನೇ ಸ್ವತಃ ಕೃಪೆ ತೋರಿ ಇಂತಹ ಅವಕಾಶವನ್ನು ಕಲ್ಪಿಸಿದ್ದ. ಜೀವ ತನ್ನ ಪುರುಷಾರ್ಥದಿಂದ ಪ್ರಭುವನ್ನು ನೋಡಲು ಬಯಸಿದರೆ ಇದು ಅವನ ಅಪ್ರಯತ್ನ ಪೂರ್ವಕ ಕ್ರಿಯೆ, ಕೋಟಿ ಜನ್ಮಗಳಲ್ಲಿಯೂ ಸಹ ಅಷ್ಟು ಪಾವಿತ್ರತೆ, ಅಂತಹ ಅರ್ಹತೆಯನ್ನು ಜೀವಿ ಹೊಂದುಲಾರದು. ಇದರಿಂದ ಅದು ಪರಾತ್ಪರ ಪ್ರಭುವಿನ ಮುಂದೆ ಪುರುಷಾರ್ಥದ ಮೂಲಕ ತಲುಪುವಂತಾಗುತ್ತದೆ. ಅವನೇ ಕಾರಣವಿಲ್ಲದೆಯೇ ಕೃಪೆತೋರಿ, ದಯಾವಶದಿಂದ ಜೀವಿಯನ್ನು ತನ್ನ ಬಳಿ ಕರೆಸಿಕೊಳ್ಳುವುದಾದರೆ ಅದು ಅದೃಷ್ಟದ ಕರೆಯೇ ಭಗವಂತ ಕೃಪೆತೋರಿ ಮನೆಯಲ್ಲಿದ್ದು ಕೊಂಡೇ ಅಕ್ರೂರನನ್ನು ಕರೆಸಿಕೊಂಡಿದ್ದ.

ಪ್ರಾತಃಕಾಲ ಮಥುರೆಯಿಂದ ರಥ ತೆಗೆದುಕೊಂಡು ನಂದಗ್ರಾಮಕ್ಕೆ ಭಗವಂತನನ್ನು ಕರೆತರಲು ಹೊರಟ, ದಾರಿಯಲ್ಲಿ ನಾನಾ ರೀತಿಯ ಮನದಿಚ್ಛೆಗಳು ಬಾಧಿಸುತ್ತಿದ್ದವು. ಆ ಪೀತಾಂಬರಧಾರಿ ಬನವಾರಿಯನ್ನು ನಾನು ಈ ಚಕ್ಷುಗಳಿಂದ ಎಷ್ಟು ಹೊತ್ತಿಗೆ ನೋಡುತ್ತೇನೋ ಎಂಬ ಕಾತುರ. ಅವನ ಸುಂದರ ಮುಖಾರವಿಂದವನ್ನು, ಗುಂಗುರು ಕಪ್ಪುಕೂದಲುಳ್ಳ ಕಪೋಲವನ್ನು ಈಕ್ಷಿಸುವ ತವಕ, ಅವೆಲ್ಲವನ್ನೂ ನನ್ನ ಸುಕೋಮಲ ಕರಕಮಲಗಳಿಂದ ಸ್ಪರ್ಷಿಸುತ್ತೇನೆಂಬ ಬಯಕೆ. ಆಗ ತನ್ನ ಶರೀರದಲ್ಲೆಲ್ಲಾ ವಿದ್ಯುತ್ ಸಂಚಾರವಾಗುತ್ತದೆಂಬ ಅಪೇಕ್ಷೆ. ತನ್ನೊಂದಿಗೆ ಅವನು ನಗುನಗುತ್ತಲೇ ಮಾತಾಡುತ್ತಾನೆ. ತನ್ನನ್ನು ತನ್ನ ಬಳಿ ಕುಳ್ಳಿರಿಸಿಕೊಂಡು ಪ್ರೀತಿಯಿಂದ 'ಚಿಕ್ಕಪ್ಪ, ಚಿಕ್ಕಪ್ಪ"

ಎಂದು ಕರೆಯುತ್ತಾನೆಂಬ ಹಂಬಲ. ಅದು ನನಗದೆಷ್ಟು ತನ್ಮಯತೆಯ ಸುಖದ ಮಾತು. ಹೀಗೆ ಹೆಜ್ಜೆ ಹೆಜ್ಜೆಗೂ ಕಲ್ಪನೆ ಮಾಡಿಕೊಳ್ಳುತ್ತಾ ಬೃಂದಾವನದ ಬಳಿ ಬಂದು ಸೇರಿದ. ಅಲ್ಲಿ ವಜ್ರ,ಅಂಕುಶ, ಯವ, ಧ್ವಜ ಮುಂತಾದ ಚಿನ್ಹೆಗಳಿಂದ ಶೋಭಿಸುವ ಶ್ಯಾಮಸುಂದರರನ ಚರಣಚಿನ್ಹೆಗಳನ್ನು ಕಂಡ ಇದಕ್ಕಿಂತ ಇನ್ನೇನು ಸೌಭಾಗ್ಯಬೇಕು.ಆ ಘನಶ್ಯಾಮನ ಚರಣಗಳನ್ನು ಕಾಣುತ್ತಲೇ ರಥದಿಂದ ಕೆಳಗೆ ನೆಗೆದ ಅವನಿಗೆ ವಂದಿಸುತ್ತಾ, ಅದರ ಧೂಳಿನಲ್ಲಿ ಹೊರಳಾಡಿದ ಅದರಿಂದ ಅವನು ಅದೆಷ್ಟು ಸುಖ ಅನುಭವಿಸಿದನೋ ಅದನ್ನು ಹೇಳ ತೀರದು. ವ್ರಜವನ್ನು ತಲಪುತ್ತಿದ್ದಂತೆಯೇ ಮೊದಲಿಗೆ ಬಲ ದೇವನೊಂದಿಗೆ ಶ್ಯಾಮ ಸುಂದರನೇ ಅವನಿಗೆ ಸಿಕ್ಕಿದ. ಎದೆ ಗಪ್ಪಿಕೊಂಡ ಕೃಷ್ಣ ಮನೆಗೆ ಕರೆದುಕೊಂಡು ಹೋಗಿ ಕುಶಲ ವಿಚಾರಿಸಿ ಆತಿಥ್ಯ ನೀಡಿದ. ಎಲ್ಲ ವಿಷಯಗಳನ್ನು ಕೇಳುವ ಕಾತುರತೆ ಹೆಚ್ಚಿತ್ತು.

ಮರುದಿನ ರಥವೇರಿ ಅಕ್ರೂರನೊಂದಿಗೆ ಶ್ಯಾಮ ಸುಂದರ ಮತ್ತು ಬಲರಾಮ ಮಥುರೆಗೆ ಹೊರಟರು. ಗೋಪಿಯರು ಅವನ ರಥವನ್ನು ಮುತ್ತಿದರು. ಬಹಳ ಕಷ್ಟದಿಂದಲೇ ಮುಂದೆ ಹೋದ. ಸ್ವಲ್ಪ ದೂರ ಹೋಗಿ ಯಮುನೆಯ ದಡದಲ್ಲಿ ಅಕ್ರೂರ ತನ್ನ ನಿತ್ಯಕರ್ಮಗಳನ್ನು ಮಾಡಲು ಇಳಿದ. ಸ್ನಾನ ಮಾಡಲು ನೀರಿನಲ್ಲಿ ನೆಗೆಯುತ್ತಿದಂತೆಯೇ ಚತುರ್ಭುಜ ಧಾರಿಯಾದ ಶ್ರೀ ಶ್ಯಾಮ ಸುಂದರನೇ ಕಣ್ಣಿಗೆ ಬಿದ್ದ.ಗಾಬರಿಯಿಂದ ಮೇಲೆದ್ದು ಬಂದರೆ ಇಬ್ಬರು ಸಹೋದರರೂ ರಥದಲ್ಲಿಯೇ ಕುಳಿತ್ತಿದ್ದಾರೆ ಮತ್ತೆ ಸ್ನಾನಕ್ಕಿಳಿದರೆ ಪುನಃ ದಿವ್ಯಮೂರ್ತಿಯನ್ನು ಕಂಡು ದಿಗ್ಭ್ರಮೆ ಹೊಂದಿದ. ಜಲದಲ್ಲಾಗಲೀ, ನೆಲದಲ್ಲಾಗಲೀ, ಶೂನ್ಯದಲ್ಲಾಗಲೀ ಶ್ಯಾಮ ಸುಂದರ ಕಾಣಿಸದ ಸ್ಥಳವಿಲ್ಲವೆಂದು ಅಕ್ರೂರನಿಗೆ ತಿಳಿದು ಹೋಯಿತು. ಭಗವಂತ ಅವನನ್ನು ಕಂಡು ನಸು ನಕ್ಕು, ಅವನೂ ನಮಸ್ಕರಿಸಿ ತನ್ನ ಆಸನದಲ್ಲಿ ಕುಳಿತ (ರಥದಲ್ಲಿ).ಮಥುರೆಯನ್ನು ತಲುಪಿದ ಮೇಲೆ ಭಗವಾನ್ ರಥದಿಂದಿಳಿದು - ನಾನು ಒಬ್ಬನೇ ನಡೆದುಕೊಂಡು 'ಹೋಗುತ್ತೇನೆ' ಎಂದ. ಅದಕ್ಕೆ ಅಕ್ರೂರ, ಮೊದಲು ತಾವು ರಥದಲ್ಲಿ ನನ್ನ ಮನೆಗೆ ಬಂದು, ನಂತರ ಬೇರೆಡೆಗೆ ಹೋಗಿ ಎಂದು ಎಷ್ಟೋ ಪ್ರಾರ್ಥಿಸಿದ. ಅದಕ್ಕಾತ - ಕಂಸನ ಅಂತ್ಯವಾದ ಮೇಲೆ ನಿನ್ನ ಮನೆಗೆ ಬರುತ್ತೇನೆ ' ಎಂದು ಮಾತು ಕೊಟ್ಟ. ಅಕ್ರೂರ ದುಃಖದಿಂದಲೇ ಮನೆಯತ್ತ ಹೆಜ್ಜೆಹಾಕಿದ.

ಕಂಸನನ್ನು ಕೊಂದ ಭಗವಾನ್ ಅಕ್ರೂರನ ಮನೆಗೆ ಬಂದ. ಅಕ್ರೂರನ ಆನಂದಕ್ಕೆ ಪಾರವೇ ಇಲ್ಲದಂತಾಯಿತು. ಯಾರ ದರ್ಶನಕ್ಕಾಗಿ ಯೋಗಿಗಳು ನೂರಾರು ಸಾವಿರಾರು ವರ್ಷಗಳು ತಪಸ್ಸು ಮಾಡುತ್ತಾರೋ ಅಂತಹ ಮಹಾತ್ಮ, ಏನೂ ಪ್ರಯಾಸವಿಲ್ಲದೆ ತನ್ನ ಮನೆಯನ್ನು ಪ್ರವೇಶಿಸಿದ್ದ. ಅಕ್ರೂರ ಅವನಿಗೆ ವಿಧಿಪೂರ್ವಕ ಪೂಜೆ ಸಲ್ಲಿಸಿ, ಅವನ, ಆಜ್ಞೆಗಾಗಿ ಕೈಜೋಡಿಸಿದ. ಅದಕ್ಕೆ ಭಗವಂತ: ಹಸ್ತಿನಾಪುರಕ್ಕೆ ಹೋಗಿ, ನಮ್ಮ ಸೋದರತ್ತೆಯ ಮಕ್ಕಳಾದ ಪಾಂಡವರ ಕ್ಷೇಮ ಸಮಾಚಾರವನ್ನು ತಿಳಿದುಕೊಂಡು ಬಾ, ಧೃತರಾಷ್ಟ್ರ ಅವರನ್ನು ಪೀಡಿಸುತ್ತಿದ್ದಾನೆಂದು ಕಿವಿಗೆ ಬಿತ್ತು ಎಂದ. ಭಗವಂತನ ಆಜ್ಞೆಯನ್ನು ಪಡೆದು ಅಕ್ರೂರ ಹಸ್ತಿನಾಪುರಕ್ಕೆ ಹೋದ.ಧೃತರಾಷ್ಟ್ರನಿಗೆ ಎಲ್ಲ ರೀತಿಯಲ್ಲಿಯೂ ತಿಳುವಳಿಕೆ ಹೇಳಿ, ಪಾಂಡವರ ಸಮಾಚಾರವನ್ನು ತಿಳಿದುಕೊಂಡು ಹಿಂತಿರುಗಿದ. ಭಗವಂತ ಮಥುರಾಪುರವನ್ನು ಬಿಟ್ಟು ದ್ವಾರಕೆಗೆ ಬಂದಾಗ ಅಕ್ರೂರನೂ ಸಹ ಅವನ ಜತೆಗೇ ಇದ್ದ, ಈತ ಭಗವಂತನ ಪ್ರಿಯ ಸಖನಾಗಿ, ಒಳ್ಳೆಯ ಭಕ್ತನಾಗಿದ್ದ. ಕೊನೆಗೆ ಭಗವಂತನೊಂದಿಗೇ ಅವನೂ ಸಹ (ಪರಂಧಾಮ) ಧಾಮವನ್ನು ಪ್ರವೇಶಿಸಿದ.




## ಹೆಲ್ಮೆಟ್ ತಪ್ಪದೇ ಧರಿಸಬೇಕು



**ತಿರುಪತಿಯಿಂದ ತಿರುಮಲೆಗೆ, ತಿರುಮಲೆಯಿಂದ ತಿರುಪತಿಗೆ ದ್ವಿಚಕ್ರವಾಹನದಲ್ಲಿ ಹೋಗಬಯಸುವ ಪ್ರಯಾಣಿಕರು, ಭಕ್ತರು ತಪ್ಪದೇ ಹೆಲ್ಮೆಟ್‌ನ್ನು ಧರಿಸಬೇಕು. ಇದರಿಂದ ಅಪಘಾತಗಳನ್ನು ತಡೆಯಬಹುದು.**

**ಹೆಲ್ಮೆಟ್ ಧರಿಸಿ ವಾಹನ ನಡೆಸಿ**

# ರಾಷ್ಟ್ರ ನಿರ್ಮಾಣ ಹರಿದಾಸರು

– ಡಾ॥ ವಾಸುದೇವ ಅಗ್ನಿಹೋತ್ರಿ

**ರಾಷ್ಟ್ರ -**

ರಾಷ್ಟ್ರ ಎಂಬ ಶಬ್ದ ಯುಗಯುಗಗಳಷ್ಟು ಪ್ರಾಚೀನ ವಾದುದು,ನಾವು ಭರತಭೂಮಿ, ಪುಣ್ಯಭೂಮಿ, ವೇದ ಭೂಮಿ, ಕರ್ಮಭೂಮಿ, ಎಂದೆಲ್ಲಾ ಹೇಳುತ್ತಾ ಬಂದಿದ್ದೇವೆ. ಅಂದರೆ ಕೆಲವರು ಅದರಲ್ಲಿಯ ಭೂಮಿ ಎಂಬ ಶಬ್ದಕ್ಕೆ ರಾಷ್ಟ್ರ ಎಂದು ತಿಳಿದುಕೊಂಡರೆ ವಿದ್ವಾಂಸರು,ದೃಷ್ಟಾರರು, ಸಾಧಕರು, ಜ್ಞಾನಿಗಳು, ಇದರ ಹಿಂದಿರುವ ಶಬ್ದವಾದ ವೇದ, ದೇವ, ಕರ್ಮ, ಧರ್ಮ ಪುಣ್ಯ ಮೊದಲಾದವುಗಳನ್ನೇ ರಾಷ್ಟ್ರವೆಂದು ತಿಳಿದರು.ಇವೆರಡೂ ಶಬ್ದಗಳು ರಾಷ್ಟ್ರ ಎಂಬ ನಾಣ್ಯದ ಎರಡು ಮುಖಗಳು ಯಾವ ಭೂಮಿಯಲ್ಲಿ ಸ್ವರೂಪ, ಪ್ರವೃತ್ತಿ ಮತ್ತು ಯೋಗ್ಯತೆಗನುಸಾರವಾಗಿ ಸಾಧಕನು ಮೋಕ್ಷ ಮಾರ್ಗದಲ್ಲಿ ಹೋಗಲು ಸಾಧ್ಯವೋ ಅದೇ ಭಾರತ. ಉದಾಹರಣೆಗಾಗಿ ಸಾಮಾನ್ಯವಾಗಿ ಹುಟ್ಟಿದ ಒಂದು ಮಗು ಭರತ ಎಂಬ ಹೆಸರಿನಿಂದ ಜಗತ್ಪ್ರಭುವಾಗಿ ಮೆರೆದನು. ವಿಶ್ವದ ಆದಿ ಕಾವ್ಯ ರಾಮಾಯಣದಲ್ಲಿ ಶ್ರೀರಾಮಚಂದ್ರನು ಕಾಡಿಗೆ ಹೋಗಲು ಸಿದ್ಧನಾದಾಗ ಎಲ್ಲ ಪ್ರಜೆಗಳು ಅವನೊಂದಿಗೆ ಕಾಡಿಗೆ ಹೊರಡಲು ಹಿಂಬಾಲಿಸುತ್ತಾರೆ. ಏಕೆಂದರೆ "ರಾಜಾ ಪ್ರತ್ಯಕ್ಷ ದೇವತಃ""ರಾಜಾ ಕಾಲಸ್ಯ ಕಾರಣಂ", "ಯಥಾ ರಾಜಾ ತಥಾ ಪ್ರಜಾ" ಎಂಬ ಮಾತುಗಳು ಪ್ರಚಲಿತವಿದ್ದವು.

ನತದ್ ಭವಿತಾ ರಾಷ್ಟ್ರ, ಯತ್ರ ರಾಮೋನ ಭೂಪತಿಃ
ತದ್‌ವನಂ ಭವಿತಾ ರಾಷ್ಟ್ರಂ ಯತ್ರ ರಾಮೋ ನವಸಿಷ್ಯತಿ
(ವಾಲ್ಮೀಕಿ ರಾಮಾಯಣ)

ರಾಮನೇ ರಾಷ್ಟ್ರ, ರಾಷ್ಟ್ರವೇ ರಾಮನೆಂಬ ಕಲ್ಪನೆ ಅಂದರೆ, ರಾಮ ಈ ದೇಶದ ರಾಷ್ಟ್ರ ಪುರುಷ, ಅಥವಾ ಪುರುಷ ಸ್ವರೂಪದ ರಾಷ್ಟ್ರ. ಏಕೆಂದರೆ ಅವನು ಪ್ರಪಂಚಕ್ಕೆನುಡಿದು ನಡೆದು ತೋರಿಸಿದ ಮೌಲ್ಯಗಳು ಮೂರು. ಒಂದೇ ಪತ್ನಿ, ಒಂದೇ ಬಾಣ, ಒಂದೇ ಮಾತು, ಅಷ್ಟೇ ಅಲ್ಲ ಅವನನ್ನು ಈ ಕಾರಣಗಳಿಂದಲೇ ಮರ್ಯಾದಾ ಪುರುಷೋತ್ತಮ ಹಾಗೂ ತಮ್ಮ ಜೀವನಾದರ್ಶವೆಂದು ನಂಬಿದ ಮಹಾತ್ಮಾ ಗಾಂಧೀಜಿ ಅವರನ್ನು ರಾಷ್ಟ್ರಪಿತ ಎಂದು ಕರೆದರು. ಗಾಂಧೀಜಿ ಹೋಗುವಾಗ ಅಮ್ಮ, ಅಪ್ಪ, ರಕ್ಷಿಸಿ ಎನ್ನಲಿಲ್ಲ. ಆದರೆ ಹೇ ರಾಮ ಎಂದು ಕೊನೆಯ ಸಿರೆಳೆದರು. "ಇದನ್ನು ಸಂತತಂ ಚಿಂತಯೇನಂತ್ಯಾ ಅಂತ್ಯಕಾಲೇ ವಿಶೇಷತಃ" ಎಂಬ ಶ್ರೀಮದಾಚಾರ್ಯರ ವಾಣಿಯಂತೆ ಹೇ ರಾಮ ಎಂದರು. ಗಾಂಧೀಜಿಯವರನ್ನು "First mass accetable leader in the world "ಎಂದು ಕರೆದರು. ಅಷ್ಟೇ ಅಲ್ಲ ೧೯೪೭ ರ ಇಂಡಿಯನ್ ಎಕ್ಸ್ಪೇಷನ್ ಆಕ್ಟ್ ಅಡಿಯಲ್ಲಿ ಈ ದೇಶದ ಮಹಾನ್ ರಾಜವಂಶಗಳ ವಾರಸುದಾರರು ತಮ್ಮ ಎಲ್ಲ ಅರ ಸೊತ್ತಿಗೆಯನ್ನು ಇವರ ಪಾದಗಳಿಗೆ ಅರ್ಪಿಸಿದರು. ಇದಕ್ಕೆ ಕಾರಣ ಗಾಂಧೀಜಿಯವರ ಸಾತ್ವಿಕ ರೋಷ. ಅವರು ನಂಬಿದ ಸತ್ಯ, ಅಹಿಂಸೆ, ತ್ಯಾಗ. ಇದನ್ನು ರಾಜಾ ಹರಿಶ್ಚಂದ್ರನ ಪಾತ್ರ ಸೃಷ್ಟಿಸಿದ ಕನ್ನಡದ ಕವಿ ರಾಘವಾಂಕನಲ್ಲಿಯೂ ನೋಡಬಹುದು. ಹರಿಶ್ಚಂದ್ರನು ಕಾಡಿಗೆ ಹೋಗುವಾಗ ಪ್ರಜೆಗಳು ಅವನನ್ನು ಹಿಂಬಾಲಿಸುತ್ತಿದ್ದಾಗ ಕವಿ "ಪುರದ ಪುಣ್ಯವು ಪೋಗುತ್ತಿದೆ ಈ ಪುರುಷ ರೂಪಿಂದೆ ಪರಿ ಜನರ ಭಾಗ್ಯವು ಅಡವಿಗೈದುತಿದೆ".ಎಂದರೆ ಪುಣ್ಯ ಭೂಮಿಯ ಪುಣ್ಯಪಟ್ಟಣವಾದ ಕಾಶಿ ಅದನ್ನಾಳುವ ದೊರೆ ಹರಿಶ್ಚಂದ್ರನೇ ತತ್ಕಾಲಿನ ರಾಷ್ಟ್ರಪುರುಷ. ಅವನು ನಂಬಿದ ಸತ್ಯವೇ ರಾಷ್ಟ್ರ ಧರ್ಮ. ಹೀಗಾಗಿ ರಾಷ್ಟ್ರ ಎಂಬ ಶಬ್ದ ಪ್ರಜೆಗಳು, ರಾಜ, ರಾಜ್ಯ,ಎಂಬ ಅನ್ವರ್ಥಕ ನಾಮಗಳನ್ನು ಕೊಡುತ್ತ ಬಂದಿವೆ. ಹರಿಶ್ಚಂದ್ರನ ನಾಟಕವನ್ನು ಚಿಕ್ಕಂದಿನಲ್ಲಿ





ನೋಡಿಯೇ ಮಹಾತ್ಮಾಗಾಂಧೀಯವರಿಗೆ ರಾಷ್ಟ್ರಪಿತನಾಗುವ ಪಯಣದಲ್ಲಿ ದೊರೆತ ಮೊದಲ ಪ್ರೇರಣೆ.

ರಾಷ್ಟ್ರ ಎಂಬ ಶಬ್ದ ತುಂಬಾ ವಿಶಾಲ ವ್ಯಾಪ್ತಿಯುಳ್ಳದ್ದು. ಕೃಷಿ, ವ್ಯಾಪಾರ, ವ್ಯವಹಾರ, ಉದ್ಯೋಗ, ವಹಿವಾಟು, ಸೇವೆ ಇತ್ಯಾದಿಗಳಲ್ಲಿ ನಿರತರಾಗಿರುವ ಜನ ಇಂದಿಗೂ ಪೂಜಿಸುವುದು ಶ್ರೀ ಲಕ್ಷ್ಮೀ ದೇವಿಯನ್ನು.ಇನ್ನು ರಾಷ್ಟ್ರ ಶಬ್ದ ವೈದಿಕ ಸಂಪ್ರದಾಯ ದಲ್ಲಿ ಹೆಚ್ಚಾಗಿ ಪ್ರಚಲಿತದಲ್ಲಿರುವುದು ಶ್ರೀ ಸೂಕ್ತದಲ್ಲಿ. ಸಂಪತ್ತು ಮತ್ತು ಸುಖವನ್ನು ಕೊಡುವ ದೇವತೆ ಲಕ್ಷ್ಮೀಯನ್ನು ಪ್ರಾರ್ಥಿಸುವ ಶ್ರೀ ಸೂಕ್ತದಲ್ಲಿಯ ಒಂದು ಮಂತ್ರ ಹೀಗಿದೆ. "ಪ್ರಾದುಭೂತೋಸ್ಮಿ ರಾಷ್ಟ್ರೇ ಸ್ಮಿನ್ ಕೀರ್ತಿ ವೃದ್ಧಿಂ ದದಾತುಮೆ" ಎಂದರೆ ಒಬ್ಬ ಭಕ್ತ ರಾಷ್ಟ್ರ ಪ್ರಜೆ ಪ್ರಾರ್ಥಿಸುವುದು ಹೀಗೆ. ಈ ರಾಷ್ಟ್ರದಲ್ಲಿ ಹುಟ್ಟಿದ ಅಧಿಕೃತ ಪ್ರಜೆಯಾದ ನಾನು ನನ್ನ ಕೀರ್ತಿ ಮತ್ತು ವೃದ್ಧಿಗಾಗಿ ನಿನ್ನನ್ನು ಬೇಡುತ್ತೇನೆ. ಅಷ್ಟೇ ಅಲ್ಲ ಮುಂದಿನ ಮಂತ್ರದಲ್ಲಿ ನಾನು ಬಿತ್ತಿದ ಎಲ್ಲ ಬೀಜಗಳು ಮೊಳಕೆಯೊಡೆದು ಫಲ ಕೊಡುವುದರ ಮುಖಾಂತರ ನನಗೆ ಕೃಷಿಯಿಂದ ಸಂಪತ್ತು ಬರಬೇಕು. ಅದರ ಮುಖಾಂತರ ಅಶ್ವ, ಗೋವು, ಗಜ, ಮತ್ತು ಇತರೆ ಎಲ್ಲ ಸುಖ ಕೊಡುವ ಸಾಧನಗಳು ಬರಲಿ. ಇದೆಲ್ಲಕ್ಕಿಂತ ಮುಖ್ಯವಾಗಿ ನನ್ನನ್ನು ಇಚ್ಛಿಸುವ, ಅನುಸರಿಸುವ ಮತ್ತು ನನ್ನ ಜೊತೆಗಿರಲು ಬಯಸುವ ಪ್ರಜಾ ಸಂಪತ್ತನ್ನು ದಯಪಾಲಿಸು ಎಂದು ಶ್ರೀ ಸೂಕ್ತದಲ್ಲಿ ಕೇಳುತ್ತಾನೆ.ಲಕ್ಷ್ಮೀಯನ್ನು ಕೇಳುವ ಅಧಿಕಾರ ನನಗಿದೆ ನನಗೇನು ಬೇಕೆಂದರೆ ಕೀರ್ತಿ ಮತ್ತು ವೃದ್ಧಿ- "ಕೀರ್ತಿ ಯಿಂದ ವೃದ್ಧಿ ವೃದ್ಧಿಯಿಂದ ಕೀರ್ತಿ" ಹೀಗೆ ಇಂದಿನ ದಿನಗಳಲ್ಲಿ ಇದನ್ನು Divine Marketing ಎಂದು ಕರೆಯಬಹುದು. ರಾಷ್ಟ್ರದ ಮಾತೆ ಅನ್ನದಾತೆ ಅವಳೇ ಶಕ್ತಿ. ಹೀಗಾಗಿ ಹರಿದಾಸರು ರಾಷ್ಟ್ರವನ್ನು ಲಕ್ಷ್ಮೀಗೆ ಹೋಲಿಸಿ ತಾಯಿಯ ಸ್ಥಾನದಲ್ಲಿಟ್ಟು ಪೂಜಿಸಿ ಪ್ರಾರ್ಥಿಸಿದ್ದಾರೆ.ಹಾಗೆ ನೋಡಿದರೆ ಲಕ್ಷ್ಮೀಯ ಸಾಮೂಹಿಕ ಮೆರವಣಿಗೆ, ಪೂಜೆ, ಆರಾಧನೆ ಪ್ರಾರಂಭವಾದದ್ದು. ಹರಿದಾಸ ರಿಂದಲೇ, ಎಂದು ಹೇಳಬಹುದು. (ಕರವೀರ ಪುರವಾಸಿನಿ ಕಲ್ಲೂರವಾಸಿನಿ, ಮೊಳಕಾಲ್ಮೂರು ವಾಸಿನಿ, ಮೊದಲಾದ ಕ್ಷೇತ್ರ ಗಳಲ್ಲಿಯ ಲಕ್ಷ್ಮೀದೇವಿ ಕುರಿತು ರಚಿಸಿದ ಕೀರ್ತನೆಗಳನ್ನು ಗಮನಿಸಬಹುದು.)

ಇಲ್ಲಿ ರಾಷ್ಟ್ರ ಎಂಬ ಶಬ್ದದಲ್ಲಿ ಪ್ರಜೆಗಳು, ರಾಜ, ಕೃಷಿ, ಸಾರಿಗೆ,ಸಂಪರ್ಕ,ಬಂಗಾರ,ಬೆಳ್ಳಿ, ಇತ್ಯಾದಿ ಒಳಗೊಂಡಿ ರುತ್ತದೆ.ರಾಷ್ಟ್ರ ಚಿಂತಕರಾದ ಶ್ರೀಕೆ.ಎನ್.ಗೋವಿಂದಾ ಚಾರ್ಯರ ವಾಣಿಯಲ್ಲಿ ಹೇಳುವುದಾದರೆ ಜಲ್, ಜಂಗಲ್, ಜಮೀನ್, ಜಾನವರ, ಜುಬಾನ, ಇವು ರಾಷ್ಟ್ರದ ಘಟಕಗಳು ಅಂದರೆ ಪಂಚಭೂತಗಳು ಮತ್ತು ಅದನ್ನು ಉಪಯೋಗಿಸುವ ಹಾಗೂ ಅದರಿಂದ ತಮ್ಮ ಶ್ರೇಯಸ್ಸನ್ನು ಕಾಣುವ ಮನುಷ್ಯರ ನ್ನೊಳಗೊಂಡು ಎಲ್ಲಾ ಚರಾಚರ ಜೀವರಾಶಿಗಳು ಈ ರಾಷ್ಟ್ರ ಎಂಬ ಶಬ್ದದ ವ್ಯಾಪ್ತಿಗೆ ಒಳಪಡಿಸುತ್ತಾರೆ.ಇದನ್ನೇ ಜೀವ ವೈವಿಧ್ಯತೆ ಹಾಗೂ ವಿವಿಧತೆಯಲ್ಲಿ ಏಕತೆ ಎಂದು ಹೇಳುತ್ತೇವೆ.

ಪ್ರಪಂಚದ ಪ್ರಾಚೀನ ನಾಗರೀಕತೆಯ ತೊಟ್ಟಿಲು ಎಂದು ಕರೆಯಿಸಿಕೊಳ್ಳುವ ಗ್ರೀಕ್‌ನ ತತ್ವಜ್ಞಾನಿಗಳಾದ ಪ್ಲೇಟೋ , ಅರಿಸ್ಟಾಟಲ್ ಮೊದಲಾದವರು ಕ್ರಿ.ಪೂ. ೪ನೇ ಶತಮಾನದಲ್ಲಿ ನಿರ್ದಿಷ್ಟ ಭೂ ಪ್ರದೇಶ, ಪ್ರಜೆಗಳು, ಸರಕಾರ ಹಾಗೂ ಪರಮಾ ಧಿಕಾರವನ್ನು ಹೊಂದಿದ ಘಟಕಕ್ಕೆ ರಾಷ್ಟ್ರವೆಂದು ಕರೆದರು. ಇದೇ ರೀತಿ ವಿಶ್ವದ ಬೇರೆ ನಾಗರಿಕತೆಗಳು ತಮ್ಮ ತಮ್ಮ ಅರ್ಥ, ವ್ಯವಹಾರ ಮತ್ತು ಅಭಿವೃದ್ಧಿಯ ದೃಷ್ಟಿಕೋನದಿಂದ ಭೂ ಪ್ರದೇಶವನ್ನು ರಾಷ್ಟ್ರವೆಂದು ಕರೆದರು. ಇದನ್ನು State ಎಂಬ ಸಂವಾದಿ ಪದದಲ್ಲಿ ಬಳಸುತ್ತ ಬಂದು ಅದರಲ್ಲಿ ವಾಸಿಸುವ ಮನುಷ್ಯನಿಗೆ Citizen ಎಂದು ಕರೆದು ತೃಪ್ತರಾದರು.

### ರಾಷ್ಟ್ರನಿರ್ಮಾಣ

ರಾಷ್ಟ್ರನಿರ್ಮಾಣ ಎಂದರೆ , ಸಮೃದ್ಧಿ ಮತ್ತು ಸಂಸ್ಕೃತಿ ಎರಡೂ ಒಟ್ಟಿಗೆ ಬೆಳೆಯುವುದು "ಕೃಷಿ ತೋ ನಾಸ್ತಿ ದುರ್ಭಿಕ್ಷಂ" ಎಂಬ ಮಾತಿನಂತೆ ಕೃಷಿ ಇಲ್ಲದೇ ಸಮೃದ್ಧಿ ಇಲ್ಲ. ಋಷಿ ಇಲ್ಲದೇ ಸಂಸ್ಕೃತಿ ಇಲ್ಲ, ಕೃಷಿ ಪ್ರಧಾನವಾದ ನಮ್ಮ ದೇಶ ಅದರ ಮೂಲ ಘಟಕವಾದ ಮಣ್ಣು ಅರ್ಥಾತ್ ನೆಲ ಅದನ್ನಾಧರಿಸಿ ಮಣ್ಣೆತ್ತಿನ ಅಮಾವಾಸ್ಯೆ ಗೋಕುಲಾಷ್ಟಮಿ,ಗಣೇಶಚತುರ್ಥಿ,ನಾಗರ ಪಂಚಮಿ, ಮೊದಲಾದ ಹಬ್ಬಗಳಂದು ಮಣ್ಣನ್ನು ಉಪಯೋಗಿಸಿ ಕೃಷಿ,ಕಲೆ, ಆರೋಗ್ಯ, ಐಶ್ವರ್ಯ ಹಾಗೂ ಮನೋರಂಜನೆ ಯನ್ನು ಸಮಾಜದಲ್ಲಿ ಬಿತ್ತಲಾಯಿತು. ಹೀಗೆ ಪ್ರಂಪಚದ ಪ್ರಥಮ ಸಾಂಸ್ಕೃತಿಕ ರಾಷ್ಟ್ರವೆಂದು ಗುರುತಿಸಿಕೊಂಡು ವಿಶ್ವಗುರು ಎಂದು ಮೆರೆದ ರಾಷ್ಟ್ರ ನಮ್ಮದು, ಅದಲ್ಲದೇ ಪ್ರಪಂಚದ ನೂರಾರು ಜನ ವಿದ್ವಾಂಸರು ಇಲ್ಲಿ ಬಂದು ಹಲವಾರು ಪ್ರಾಚೀನ ವಿಶ್ವ ವಿದ್ಯಾ ಲಯಗಳಲ್ಲಿ ಅಧ್ಯಯನ ಮಾಡಿ ಹೋಗಿ ತಮ್ಮ ರಾಷ್ಟ್ರಗಳನ್ನು ನಿರ್ಮಿಸಿಕೊಂಡನು. ಅಷ್ಟೇ ಏಕೆ ಹರಿದಾಸರು ಬದುಕಿ ಬಾಳಿದ ಪ್ರಪಂಚದ ಕೊನೆಯ ಹಿಂದೂ ಸಾಮ್ರಾಜ್ಯ ವಿಜಯನಗರ ಸಾಮ್ರಾಜ್ಯವನ್ನು ಬಂದು ನೋಡಿದ ವಿದೇಶೀ ವಿದ್ವಾಂಸರ ಸಂಖ್ಯೆಯೇನೂ ಕಡಿಮೆ ಇಲ್ಲ.

ಹೀಗಾಗಿ ರಾಷ್ಟ್ರದ ಪರಿಕಲ್ಪನೆಯಲ್ಲಿಯೇ ರಾಷ್ಟ್ರ ನಿರ್ಮಾಣದ ತಂತ್ರವೂ ಅಡಗಿದೆ. ಮುಂದೆ ಶಿಲಾಯುಗ ಲೋಹ ಯುಗ ಅಥವಾ ತ್ರೇತಾಯುಗ, ದ್ವಾಪರಯುಗ, ಕಲಿಯುಗ ಇವೆಲ್ಲವುಗಳನ್ನು ದಾಟಿ ಭಾರತದ ಮೌರ್ಯ ಸಾಮ್ರಾಜ್ಯದ ವರೆಗಿನ ಇತಿಹಾಸವನ್ನು ಅವಲೋಕಿಸಿದರೆ ನಮ್ಮ ರಾಷ್ಟ್ರದ ವೇದ ಪ್ರಾಚೀನತೆ ತಿಳಿಯುತ್ತದೆ. ನಂತರ ಬಂದ ಚಾಣಕ್ಯ, ಪಾಣಿನಿ, ಕಾಳಿದಾಸ, ಕಣಾದ, ಆರ್ಯಭಟ , ವರಹಾಮಿಹಿರ, ಭಾಸ್ಕರಾಯಚಾರ್ಯ, ಚರಕ, ಸುಶೃತ ನಾಗಾರ್ಜುನ ಮೊದ ಲಾದವರು ಯುಗಪ್ರವರ್ತಕರು ಹಾಗೂ ರಾಷ್ಟ್ರನಿರ್ಮಾಪಕರು,

ನಮ್ಮ ಆಸೇತುಹಿಮಾಚಲ, ಗಂಗಾಸಾಗರ ಮತ್ತು ಹಿಂದೂ ಸಾಗರದ ಮಧ್ಯದ ಈ ಜಂಬೂದ್ವೀಪವೇ ನಮ್ಮ ರಾಷ್ಟ್ರಭೂಮಿ. ಇದರಲ್ಲಿ ವಾಸಿಸುತ್ತಿರುವ ಶತಕೋಟಿಗೂ ಮೀರಿದ ನಾವೆಲ್ಲರೂ ಈ ದೇಶದ ಪ್ರಜೆಗಳು. ಈ ರಾಷ್ಟ್ರದ ಸಾರ್ವಭೌಮತ್ವಕ್ಕೆ ವಿಪತ್ತು ಬಂದಾಗಲೆಲ್ಲಾ ಅದನ್ನು ಎದುರಿಸಿ ಕಾಪಾಡಿದ ಎಲ್ಲ ಪ್ರಯತ್ನಗಳೇ ರಾಷ್ಟ್ರ ನಿರ್ಮಾಣ. ಇಲ್ಲಿ ಭಾಷೆ, ಊಟೋಪಚಾರ ಉಡುಗೆ ತೊಡುಗೆ ಇವುಗಳಲ್ಲಿ ಎಷ್ಟೇ ವ್ಯತಾಸ್ಯವಿದ್ದರೂ ಎಲ್ಲರೂ ರಾಷ್ಟ್ರ ಮಾತೇಯನ್ನು, ರಾಷ್ಟ್ರ ಪುರುಷನನ್ನು, ಈ ರಾಷ್ಟ್ರದ ಮಾನ ಬಿಂದುಗಳನ್ನು, ಮಾನವೀಯ ಮೌಲ್ಯಗಳನ್ನು, ಕೌಟುಂಬಿಕ ಪವಿತ್ರ ಸಂಬಂಧಗಳನ್ನು ಗೌರವಿಸುತ್ತಾರೆ. ಇಂದಿಗೂ ನಮ್ಮ ಕುಟುಂಬ ಪದ್ಧತಿ ಅಕ್ಷುಣ್ಣವಾಗಿ ಉಳಿಯಲು ರಾಮಾಯಣವೇ ಕಾರಣ ಎಂಬುದು ಪರಮ ಸತ್ಯ. ಸಾದಾ ಜೀವನ ಉಚ್ಚ ವಿಚಾರ, ದುಡಿಮೆಯೇ ದುಡ್ಡಿನ ತಾಯಿ Honesty is Best policy ಸತ್ಯಮೇವ ಜಯತೆ, ಬೆಳೆಯುವ ಸಿರಿ ಮೊಳಕೆಯಲ್ಲಿ, ನಹಿ ಜ್ಞಾನೇನ ಸದೃಶ್ಯಂ ಈ ಎಲ್ಲ ವಿಚಾರಗಳು ಯುಗ ಯುಗಗಳಿಂದ ನಡೆದು ಬಂದ ನಮ್ಮ ಪರಂಪರೆಯ ಫಲಶೃತಿಗಳು. ಇವು ಕೇಳಲು ಚಿಕ್ಕ ಚಿಕ್ಕ ವಾಕ್ಯಗಳೇ ಆದರೂ ಇದರ ಹಿಂದೆ ಒಂದು ದೇಶೀ ಸಂಸ್ಕೃತಿ ಅಡಗಿದೆ. ಆದರೆ ಇಂದು "ಆಸಕ್ತಿಯಿಂದ ದೇಶಿ ಅಗತ್ಯವಿದ್ದಲ್ಲಿ ಸ್ವದೇಶಿ, ಅನಿವಾರ್ಯವಾದಲ್ಲಿ ವಿದೇಶಿ" ಎಂಬ ವ್ಯವಹಾರಿಕ ಒಪ್ಪಂದಕ್ಕೆ ಬಂದು ತಲುಪಿದ್ದೇವೆ.

ಹಿಂದೆ ಛಪ್ಪನ್ ಎಂದರೆ, ೫೬ ರಾಜ್ಯಗಳು ಅಂಗ, ವಂಗ, ಕಳಿಂಗ, ಗುರ್ಜರ, ಲಾಟ, ಮಗಧೆ, ಪಾಂಚಾಲ, ದ್ರಾವಿಡ ಎಂಬ ಭೂ ಪ್ರದೇಶಗಳು ಇದ್ದವೆಂದು ಕೇಳಿದ್ದೇವೆ. ಇಂದು ನಮ್ಮ ದೇಶದಲ್ಲಿ ಶ್ರೀ ಕೆ.ಎಸ್. ಗೋವಿಂದಾಚಾರ್ಯರ ಅಧ್ಯಯನ ಹಾಗೂ ಅನುಭವದ ಪ್ರಕಾರ ೧೨೭ ವಿಭಿನ್ನ, ವೈವಿಧ್ಯಮಯ ಭೂ ಪ್ರದೇಶಗಳಿವೆ ಎಂದು ತಿಳಿದು ಬಂದಿದೆ. ಹೀಗಾಗಿ ರಹದಾರಿ ಕೂಗಳತೆಗಳಿಗೂ ಪಾನಿ ವಾಣಿ (ನೀರು ಮತ್ತು ಭಾಷೆ) ಬದಲಾಗುತ್ತವೆ. ಆದಾಗ್ಯೂ ನಾವೆಲ್ಲರೂ ಒಂದೇ ಎಂಬ ಸೂತ್ರವೇ ರಾಷ್ಟ್ರ ನಿರ್ಮಾಣದ ಘೋಷ ವಾಕ್ಯ.

ನಮ್ಮ ದೇಶದ ಕೆಲವು ಪ್ರಮುಖ ಅರಸು ಮನೆತನಗಳ ಪ್ರಸಿದ್ಧ ಚಕ್ರವರ್ತಿಗಳೆಂದರೆ ಚಂದ್ರಗುಪ್ತ ಮೌರ್ಯ, ಹರ್ಷವರ್ಧನ, ಕೃಷ್ಣದೇವರಾಯ, ಛತ್ರಪತಿ ಶಿವಾಜಿ ಮೊದಲಾದವರು ಈ ದೇಶದ ಮೂಲ ಶ್ರೋತವನ್ನು ಅಚ್ಚಳಿಯದಂತೆ ಕಾಪಾಡಿದರು. ಆಗಾಗ ಅಲ್ಲಲ್ಲಿ ಬೇರೆ ಮತ ಧರ್ಮಗಳು, ರೀತಿ ರಿವಾಜುಗಳು ಹುಟ್ಟಿ ರಾಜಾಶ್ರಯ ಪಡೆದರೂ ಅವೆಲ್ಲವೂ ಕಾಲ ಕ್ರಮೇಣ ರಾಷ್ಟ್ರಪ್ರವಾಹದಲ್ಲಿ ಒಂದಾದವು.

- ಸಶೇಷ



ತಿರುಮಲ ತಿರುಪತಿ ದೇವಸ್ಥಾನಗಳು, ತಿರುಪತಿ

# ಸಪ್ತಗಿರಿ

## ಚಂದಾದಾರರಿಗೆ ವಿಜ್ಞಾಪನೆ

ಸಪ್ತಗಿರಿ ಮಾಸಪತ್ರಿಕೆ ಪಾಠಕರಿಗೆ ಪ್ರತಿ ತಿಂಗಳು ಸಕಾಲದಲ್ಲಿ ಸೇರಲು ಅನೇಕ ಕ್ರಮಗಳನ್ನು ಕೈಗೊಂಡಿದೆ. ಭಕ್ತರು ತಮ್ಮ ವಿಳಾಸದಲ್ಲಿ ಏನಾದರೂ ಬದಲಾವಣೆ ಇದ್ದಲ್ಲಿ ನಮಗೆ ತಿಳಿಸಬೇಕಾಗಿ ಕೋರಲಾಗಿದೆ. ಪಾಠಕರು ಈ ವಿಷಯವನ್ನು ಈ ಕೆಳಗೆ ತಿಳಿಸಿದಂತೆ ಪ್ರಧಾನ ಸಂಪಾದಕರ ಕಾರ್ಯಾಲಯಕ್ಕೆ ತಿಳಿಸಬೇಕಾಗಿ ವಿನಂತಿ.

1) "ಸಪ್ತಗಿರಿ" ಮಾಸಪತ್ರಿಕೆಗೆ ಸಂಬಂಧಿಸಿದ ಸಲಹೆ/ಸೂಚನೆ/ದೂರುಗಳನ್ನು sapthagiri_helpdesk@tirumala.org ಮುಖಾಂತರ ತಿಳಿಯ ಪಡಿಸಿ.

2) ಸಪ್ತಗಿರಿ ಚಂದಾದಾರರ ವಿಳಾಸದಲ್ಲಿ ಬದಲಾವಣೆ ಇದ್ದಲ್ಲಿ 0877 - 2264543 ದೂರ ವಾಣಿ ಸಂಖ್ಯೆಗೆ ಕರೆ ಮಾಡಿ ತಮ್ಮ ಪೂರ್ತಿ ವಿಳಾಸವನ್ನು ಪಿನ್‌ಕೋಡ್, ಸೆಲ್ ನಂಬರ್ ಸಮೇತ ಕಾರ್ಯಾಲಯದ ಕೆಲಸದ ವೇಳೆಯಲ್ಲಿ (ಬೆ.10.30 ರಿಂದ ಸಂಜೆ 5.00 ಗಂಟೆಯೊಳಗೆ) ತಿಳಿಸಬೇಕು.

3. ಕಾರ್ಯಾಲಯದ ದೂರವಾಣಿ ನಂಬರ್ ಮುಖಾಂತರವಾಗಲಿ, sapthagiri_helpdesk@tirumala.org ಮುಖಾಂತರ ತಿಳಿಯಪಡಿಸಿ.

4. ಆನ್‌ಲೈನ್ ಚಂದಾದಾರರು ತಮ್ಮ ಪೂರ್ತಿ ವಿಳಾಸವನ್ನು ಕ್ರಮಬದ್ಧೀಕರಿಸಲು ತಿ.ತಿ.ದೇ. ವೆಬ್‌ಸೈಟ್ ಮುಖಾಂತರ ಮತ್ತೊಮ್ಮೆ ತಿಳಿಸಬೇಕಾಗಿ ಕೋರಲಾಗಿದೆ.

-ಪ್ರಧಾನ ಸಂಪಾದಕರು

## ಪಾಠ -5

# ಸಂಸ್ಕೃತ ಕಲಿಯೋಣ...!!

- ನಿರ್ವಹಣೆ - ಡಾ॥ ಸಮುದ್ರಾಲ ಲಕ್ಷ್ಮಣಯ್ಯ & ಕಿರಣ್‌ಭಟ್

| | | | |
|---|---|---|---|
| घ् + घ = घ्घ | ಘ + ಘ = ಘ್ಘ | ज् + ज = ज्ज | ಜ + ಜ = ಜ್ಜ |
| घ् + द = घ्द | ಘ + ದ = ಘ್ದ | ज् + झ = ज्झ | ಜ + ಝ = ಜ್ಝ |
| घ् + ध = घ्ध | ಘ + ಧ = ಘ್ಧ | ज् + ञ = ज्ञ | ಜ + ಞ = ಜ್ಞ |
| घ् + न = घ्न | ಘ + ನ = ಘ್ನ | ज् + ब = ज्ब | ಜ + ಬ = ಜ್ಬ |
| घ् + म = घ्म | ಘ + ಮ = ಘ್ಮ | ज् + भ = ज्भ | ಜ + ಭ = ಜ್ಭ |
| घ् + य = घ्य | ಘ + ಯ = ಘ್ಯ | ज् + म = ज्म | ಜ + ಮ = ಜ್ಮ |
| घ् + र = घ्र | ಘ + ರ = ಘ್ರ | ज् + य = ज्य | ಝ + ಯ = ಝ್ಯ |
| घ् + व = घ्व | ಘ + ವ = ಘ್ವ | ज् + र = ज्र | ಝ + ರ = ಝ್ರ |
| ङ् + क = ङ्क | ಙ + ಕ = ಙ್ಕ | ज् + व = ज्व | ಝ + ವ = ಝ್ವ |
| ङ् + ख = ङ्ख | ಙ + ಖ = ಙ್ಖ | झ् + य = झ्य | ಞ + ಚ = ಞ್ಚ |
| ङ् + ग = ङ्ग | ಙ + ಗ = ಙ್ಗ | झ् + र = झ्र | ಞ + ಛ = ಞ್ಛ |
| ङ् + घ = ङ्घ | ಙ + ಘ = ಙ್ಘ | झ् + व = झ्व | ಞ + ಜ = ಞ್ಜ |
| च् + क = च्क | ಚ + ಕ = ಚ್ಕ | ञ् + च = ञ्च | ಞ + ಝ = ಞ್ಝ |
| च् + च = च्च | ಚ + ಚ = ಚ್ಚ | ञ् + छ = ञ्छ | ಟ + ಕ = ಟ್ಕ |
| च् + छ = च्छ | ಚ + ಛ = ಚ್ಛ | ञ् + ज = ञ्ज | ಟ + ಯ = ಟ್ಯ |
| च् + ञ = च्ञ | ಚ + ಞ = ಚ್ಞ | ञ् + झ = ञ्झ | ಟ + ರ = ಟ್ರ |
| च् + य = च्य | ಚ + ಯ = ಚ್ಯ | ट् + क = ट्क | ಟ + ವ = ಟ್ವ |
| च् + र = च्र | ಚ + ರ = ಚ್ರ | ट् + ट = ट्ट | ಟ + ಷ = ಟ್ಷ |
| च् + व = च्व | ಚ + ವ = ಚ್ವ | ट् + य = ट्य | ಠ + ಯ = ಠ್ಯ |
| छ् + य = छ्य | ಛ + ಯ = ಛ್ಯ | ट् + र = ट्र | ಠ + ರ = ಠ್ರ |
| छ् + र = छ्र | ಛ + ರ = ಛ್ರ | ट् + व = ट्व | ಠ + ವ = ಠ್ವ |
| छ् + व = छ्व | ಛ + ವ = ಛ್ವ | ट् + ष = ट्ष | ಠ + ಷ = ಠ್ಷ |

# ಅಸುರಿ ಗುಣಗಳು ಬಂಧಗಳನ್ನು ತರುತ್ತದೆ

**ಡಾ॥ ವೈಷ್ಣವಾಂಘ್ರಿಸೇವಕ್‌ದಾಸ್**
**ಅನುವಾದ : ಡಿ.ಎಸ್.ಭೂಮಿಕ**

ಬಂಧ, ಮೋಕ್ಷಗಳೆಂಬ ಎರಡು ಅಕ್ಷರಗಳನ್ನು ಆಧ್ಯಾತ್ಮಿಕ ರಂಗದಲ್ಲಿ ಮೇಲಿಂದ ಮೇಲೆ ಕೇಳಿ ಬರುತ್ತಿರುತ್ತವೆ. ಆದರೆ ಈ ಪರಿಸ್ಥಿತಿಗಳನ್ನು ಭೌತಿಕ ಜಗತ್ತಿನಲ್ಲಿ ಅಂದರೆ ಸಾಮಾನ್ಯ ಜಗತ್ತಿನಲ್ಲಿ ಕಾಣಸಿಗುತ್ತಿದ್ದರೂ ಯಾರೂ ಇದನ್ನು ಹೆಚ್ಚಾಗಿ ಹೇಳಿಕೊಳ್ಳುವುದಿಲ್ಲ. ಅಷ್ಟಕ್ಕೂ ಈ ಬಂಧ - ಮೋಕ್ಷಗಳೆಂದರೇನು? ಕಳ್ಳತನ, ಅಪರಾಧ, ಹತ್ಯೆಯಂತಹ ಕೃತ್ಯಗಳಿಗೆ ಪೋಲೀಸರು ಅವರಿವರನ್ನು ಬಂಧಿಸುತ್ತಿರುತ್ತಾರೆ ಅವರ ಕೈಗೆ ಕೋಳವನ್ನು ತೊಡಿಸಿ, ಕೋರ್ಟಿಗೆ ಹಾಜರು ಪಡಿಸಿ, ಜೈಲಿನಲ್ಲಿ ಹಾಕುತ್ತಿರುತ್ತಾರೆ. ಈ ಉದಾಹರಣೆಗಳಲ್ಲಿ 'ಬಂಧ' ಎಂಬುದಕ್ಕೆ ಸೂಕ್ತವಾದ ನಿದರ್ಶನಗಳು. ಅಂದರೆ ಬಂಧನದಲ್ಲಿರುವ ವ್ಯಕ್ತಿ ಸಾಮಾನ್ಯ ಪೌರನಾಗಲಾರ ಸ್ವತಂತ್ರ್ಯವನ್ನೆಂದೂ ಅನುಭವಿಸಲಾರ, ತನ್ನವರೊಡನೆ ಕೂಡಿ ಸುಖದಿಂದ ಬಾಳಲಾರ. ಸುಖದಿಂದ ನಿದ್ರಿಸಲಾರ. ಇದೇ ಬಂಧನದಿಂದ ಉಂಟಾಗುವ ದುಷ್ಪರಿಣಾಮಗಳು. ಇನ್ನೂ ಮೋಕ್ಷದ ಕುರಿತು ಆಲೋಚಿಸೋಣ ಪ್ರಸ್ತುತ ವಿಶ್ವದಾದ್ಯಂತ್ಯ ಹರಡಿರುವ ಕರೋನಾ ಮಹಾಮ್ಮಾರಿ ವೈರಸ್ ತಗುಲಿದ ವ್ಯಕ್ತಿಯನ್ನು ಪ್ರತ್ಯೇಕವಾಗಿಟ್ಟು ಶುಶ್ರೂಷೆ ಮಾಡುತ್ತಿದ್ದಾರೆ; ಮಾಡಿದ್ದಾರೆ ಭಗವದನುಗ್ರಹದಿಂದ ಭಾರತದಲ್ಲಿ ಈ ವೈರಸ್‌ನಿಂದ ಹೊರಬಂದವರೇ ಬಹಳ ಜನರಿದ್ದಾರೆ. ಇತರ ದೇಶಗಳಿಗೆ ಹೋಲಿಸಿದರೆ ಭಾರತದಲ್ಲಿ ರೋಗದಿಂದ ಗುಣ ಹೊಂದಿರುವ ಶತಾಂಶ ಸ್ವಲ್ಪ ಹೆಚ್ಚೇ ಇದೆ. ಅಂದರೆ ಯಾವನು ವೈದ್ಯರ ಮಾತಿನಂತೆ ಶುಶ್ರೂಷೆಯನ್ನು ಪಡೆಯುತ್ತಾನೋ, ಪಥ್ಯದಲ್ಲಿರುತ್ತಾನೋ ಅವನು ರೋಗ ವಿಮುಕ್ತನಾಗುತ್ತಾನೆ. ಅಂದರೆ ರೋಗದಿಂದ ಮೋಕ್ಷವನ್ನು ಪಡೆಯುತ್ತಾನೆ.


ಈ ರೀತಿಯಲ್ಲಿ ಬಂಧ - ಮೋಕ್ಷಗಳ ಕುರಿತು ವಿವರಣೆಗಳನ್ನು ತಿಳಿದ ನಂತರ ನಿಜವಾದ ಬಂಧ-ಮೋಕ್ಷಗಳ ಕುರಿತು ಆಲೋಚಿಸುವುದು ಪ್ರಾಜ್ಞರ ಲಕ್ಷಣ ಈ ವಿಷಯದ ಕುರಿತು ಭಗವದ್ಗೀತೆ ಹದಿನಾರನೇಯ ಅಧ್ಯಾಯದಲ್ಲಿ ಸ್ಪಷ್ಟವಾಗಿ ವಿವರಣೆ ನೀಡಿದೆ,ಅಸುರಿ ಲಕ್ಷಣಗಳು ಬಂಧಗಳನ್ನು ತಂದೊಡ್ಡುತ್ತವೆಂದು ಗೀತಾಕಾರರು ತಿಳಿಸಿಕೊಡುತ್ತಾರೆ. ಅಂದರೆ ರಾಕ್ಷಸ ಪ್ರವೃತ್ತಿಯು ನಮ್ಮಲ್ಲಿದ್ದರೆ ಬಂಧನವು ತಪ್ಪದೆಂದೂ , ಬಂಧನವುಂಟಾದರೆ ದುಃಖಗಳು ತಪ್ಪದೆಂದೂ ನಾವು ಅರ್ಥಮಾಡಿಕೊಳ್ಳಬೇಕಾಗುತ್ತದೆ. ಅಷ್ಟಕ್ಕೂ ಈ ಅಸುರೀ ಪ್ರವತ್ತಿಯವರ ಗುಣಗಳು ಹೇಗಿರುತ್ತವೆಂದು ಪ್ರಶ್ನೆ ಏಳುತ್ತದೆ. ಅದಕ್ಕೆ ಉತ್ತರವಾಗಿ ಭಗವದ್ಗೀತೆಯಲ್ಲಿ (16-4) ಹೀಗೆ ಹೇಳಲಾಗಿದೆ.

"ಓ ಪಾರ್ಥ ! ಗರ್ವ, ಅಹಂಕಾರ, ಅಹಂಭಾವ, ಮದ ಕೋಪ,ಪುರುಷತ್ವ,ಅಜ್ಞಾನವೆಂಬ ಗುಣಗಳು ಅಸುರ ಸ್ವಭಾವದವರಿಗೆ ಸೇರಿದವು"

"ದೈವೀ ಗುಣಗಳು ಮುಕ್ತಿಗೆ ಕಾರಣವಾದರೆ ಅಸುರಿ ಲಕ್ಷಣಗಳು ಬಂಧಗಳನ್ನು ಉಂಟುಮಾಡುತ್ತವೆ. ಓ ಪಾಂಡು ತನಯನೇ! ನೀನು ದೈವೀ ಗುಣಗಳಿಂದಲೇ ಜನಿಸಿರುವುದರಿಂದ ವಿಚಾರಿಸಬೇಡ"

ಅಸುರಿಗುಣಗಳು ಮನುಷ್ಯನನ್ನು ನೇರವಾಗಿ ನರಕಕ್ಕೆ ಕೊಂಡೊಯ್ಯುತ್ತವೆ. ಆ ನರಕವು ಅವರಿಗೆ ಈ ಭೂಮಿಯಲ್ಲೇ ಕಂಡು ಬಿಡುತ್ತದೆ. ಅಷ್ಟೇ ಅಲ್ಲದೇ, ಈ ಜನ್ಮದ ನಂತರ ಅವರು ತೆರಳುವುದೂ ಸಹಾ ನರಕಕ್ಕೇ, ಯಾರು ತಮ್ಮಲ್ಲಿರುವ ವಿದ್ಯೆ ಹಣ,ಸಿರಿ, ಅಧಿಕಾರ, ಪದವಿ, ಜನಬಲಗಳಿಂದ ಇತರರನ್ನು ಹಿಡಿದಿಟ್ಟುಕೊಳ್ಳುವ ಪ್ರಯತ್ನವನ್ನು ಪ್ರದರ್ಶಿಸುತ್ತಾರೋ ಅದೇ ಗರ್ವವೆನಿಸುತ್ತದೆ. ಇವೆಲ್ಲವೂ ಮನುಷ್ಯನಲ್ಲಿ ಗರ್ವವನ್ನುಂಟು ಮಾಡುತ್ತವೆ. ಅವೆಲ್ಲಾ ಇದ್ದರೂ ಕೂಡ ವಿನಮ್ರತೆಯಿಂದಿರುವವನು ಭಗವಂತನ ವಿಶೇಷ ಕರುಣೆಯನ್ನು ಹೊಂದಿರುವನೇ ಆಗಿರುತ್ತಾನೆ.ಈ ಗರ್ವದಿಂದಲೇ ಆತನು ಮದದಿಂದ ವರ್ತಿಸುತ್ತಾನೆ.ಬಾಯಿಗೆ ಬಂದದ್ದನ್ನು ನುಡಿಯುವುದು. ಹಿರಿಯರು-ಕಿರಿಯರೆನ್ನತೆ ವ್ಯವಹರಿಸುವುದು, ಅಹಂಕಾರದ ದುರ್ವರ್ತನೆ. ತನ್ನ ವರ್ತನೆಗೆ ಎದುರೇ ಬಾರದಂತೇ ವರ್ತಿಸುವುದೇ ಮದದ ವರ್ತನೆ. ಅಂತಹವರಿಗೆ ಯಾರಾದರೂ ಎದುರು ನಿಂತರೆ ಅಥವಾ ಅವರ ಗೌರವಕ್ಕೆ ಧಕ್ಕೆ ತಂದರೆ ಅವರಲ್ಲಿಯ ಅಹಂಭಾವವು ಎರಡರಷ್ಟಾಗುತ್ತದೆ. ಅಸುರಿ ಸ್ವಭಾವಗಳನ್ನು ಪ್ರದರ್ಶಿಸುವ ಮತ್ತೊಂದು ದುರ್ಗುಣವೇ ಅಹಂಭಾವ. ಆದ್ದರಿಂದಲೇ ತಮ್ಮ ಅಹಂಭಾವಕ್ಕೆ ಏಟು ಬೀಳುತ್ತಲೇ ಅವರಿಗೆ ಸಿಟ್ಟು ಬರುತ್ತದೆ.ಇದರಿಂದಾಗಿ ಅವರು ಗತ್ತಿನಿಂದ ಮಾತಾಡುತ್ತಾರೆ-ಗತ್ತಿನಿಂದ ನಡೆದುಕೊಳ್ಳುತ್ತಾರೆ. ಆ ವೇಳೆಯಲ್ಲಿ ಅವರಿಗೆ ಚಿಕ್ಕವರು - ದೊಡ್ಡವರು ಅನ್ನುವ ಪರಿವೆಯೇ ಇಲ್ಲದೇ ಅವರು ಅಜ್ಞಾನದಿಂದ ವ್ಯವಹರಿಸುತ್ತಾರೆ.ಈ ಲಕ್ಷಣಗಳು ಯಾರಿಗಾದರೂ ಯಾವಾಗಲಾದರೂ,ಯಾವುದೇ ಪರಿಸ್ಥಿತಿಯಲ್ಲೂ ಕಷ್ಟವನ್ನೇ ತರುತ್ತವೆ. ಬಂಧನವನ್ನು ತರುತ್ತವೆ. ಅಷ್ಟೇ ಅಲ್ಲದೇ ಅವರು ನರಕಕ್ಕೇ ಭಾಗಿದಾರರಾಗುತ್ತಾರೆ.

ಆದ್ದರಿಂದಲೇ ಯುವ ಜನಾಂಗವು ಈ ಅಸುರಿ ಲಕ್ಷಣಗಳಿಂದ ಹೊರಬರಬೇಕು. ಜೀವನದಲ್ಲಿ ವಿಜಯವನ್ನು ಸಾಧಿಸಿ



ದ್ದರೆ, ವಿಜಯಕ್ಕೆ ಕಾರಣರಾದ ಪ್ರೋತ್ಸಾಹವನ್ನು, ಸಹಾಯವನ್ನು ನೆನೆದು ವಿನಯದಿಂದಿರಲು ಕಲಿತುಕೊಳ್ಳಬೇಕು. ಅಂತಹ ಸ್ವಭಾವವು ಮತ್ತಷ್ಟು ವಿಜಯಗಳಿಗೆ ಕಾರಣೀಭೂತವಾಗುತ್ತದೆ. ವಿನಮ್ರತೆಯಿಂದಿರುವವರು ಯಾವತ್ತೂ ಯಾರೊಂದಿಗೂ ಮದದಿಂದ ವ್ಯವಹರಿಸುವುದಿಲ್ಲ. ವಿದ್ಯೆಯೊಂದಿಗೆ ವಿನಯವನ್ನು ಹೊಂದದವರನ್ನು ಜಗತ್ತು ಹೆಚ್ಚಾಗಿ ಮೆಚ್ಚುತ್ತದೆ. ಕೋಪದಿಂದ ಬರುವುದಾದರೂ ಏನೂ ಇಲ್ಲ. ಮೇಲಾಗಿ ಅದು ಪರಿಸ್ಥಿತಿಗಳನ್ನು ಹಾಳು ಮಾಡುತ್ತದೆ. ಸಂಬಂಧಗಳನ್ನು ಕೆಡಿಸುತ್ತದೆ. ಬಾಯಿ ಒಳ್ಳೆಯದಾದರೆ ಜಗತ್ತೇ ಒಳ್ಳೆಯದು ಎಂಬ ಗಾದೆಮಾತು ಎಲ್ಲರಿಗೂ ತಿಳಿದದ್ದೇ. ಮದದಿಂದಲ್ಲದೇ ವಿನಮ್ರವಾಗಿ ಮಾತನಾಡುವವರನ್ನು ಲೋಕವೇ ಗೌರವಿಸುತ್ತದೆ. ಈ ಶ್ಲೋಕದಲ್ಲಿ ಹೇಳಿದ ಅಸುರ ಗುಣಗಳೆಲ್ಲವನ್ನು ಒಂದೊಂದಾಗಿ ತೊಲಗಿಸಿಕೊಳ್ಳುವ ಯುವಕರು ನಿಶ್ಚಯವಾಗಿ ವಿಜಯ ಸೀಮೆಯಲ್ಲಿ ವಿಹರಿಸುತ್ತಾರೆ. ಅವರಿಗೆ ಸರ್ವತ್ರ ಅಭಿನಂದನೆಗಳು, ಆಹ್ವಾನಗಳು, ಆತಿಥ್ಯಗಳು ಎಲ್ಲವೂ ಲಭಿಸುತ್ತವೆ. ಅದಲ್ಲದೇ ಅವರು ಅಸುರಿ ಗುಣಗಳಲ್ಲಿಯೇ ಮುಳುಗಿದ್ದರೆ ಬಂಧನವು ತಪ್ಪಿದ್ದಲ್ಲ, ದುಃಖ ತಪ್ಪಿದ್ದಲ್ಲ,ನರಕ ಪ್ರವೇಶವು ತಪ್ಪದು- ಅರ್ಥಾತ್ ಜಾಗರೂಕರಾಗಿರಿ!

## ಗಜಾರಣ್ಯ ಕ್ಷೇತ್ರನಾಥ ಶ್ರೀ ವೈದ್ಯನಾಥೇಶ್ವರ ಪಂಚರತ್ನ ಸ್ತೋತ್ರಂ

ದುರ್ವ್ವಾರ ಸಂಸಾರರು ಜಾನಿರಾಸಾ।
ದನ್ವರ್ಥನಾಮನ್ ಶ್ರಿತಪೋಷದೀಕ್ಷ।
ಹೃದ್ಯಾಖಿಲಾರ್ಥ ವ್ರಜದರ್ಾನ ದಕ್ಷ।
ಶ್ರೀ ವೈದ್ಯನಾಥೇಶ್ವರ ರಕ್ಷ ರಕ್ಷ॥೧॥

ಅಜ್ಞಾನರೋಗ ವೈದ್ಯಾಯ
ವೇದವೇದ್ಯಾಯ ಭಾಸ್ವತೇ॥
ಶ್ರೀ ಗಜಾರಣ್ಯ ನಾಥಾಯ।
ವೈದ್ಯೇಶಾಯ ನಮೋಸ್ತುತೇ॥೨॥

ಕಾವೇರಿತಟಿಸೀಮ್ನಿ ಕುಂಜರವನೇ ಕಶ್ಚಿದ್ರುಮಶ್ಯಾಲ್ಮಲೀ।
ತನ್ಮೂಲೇ ಫಲ ಮೇಕಮದ್ಭು ತರಸಂ।
ಸೇವ್ಯಂ ಶುಕಾದ್ಯೇರ್ದ್ವಿಜೈಃ॥
ಅರ್ಧಂಶ್ಯಾಮಮಥಾಪಿ ಚಾರ್ಧ
ಮರಣಂ ನಿರ್ವ್ವಾಣಭೀಜಾಂಕುರಂ।
ತತ್ಸೇವೇ ಜುಷತಾಂ ಜನಿಶ್ರಮಹರಂ
ಶ್ರೀ ವೈದ್ಯನಾಥಾಹ್ವಯಂ॥೩॥

ಶ್ರೀ ಮದ್ಗಜೇಂದ್ರಾನನ ಬಾಹುಲೇಯ।
ಸಂಸೇ ಮಿತೋತ್ಸಂಗ ತಟಾಭಿರಾಮ॥
ಶ್ರೀ ಮದ್ಗಜಾರಣ್ಯ ವಿಹಾರಲೋಲ
ಶ್ರೀ ವೈದ್ಯನಾಥೇಶ್ವರ ತೇ ನಮೋಸ್ತು॥೪॥

ನಮಸ್ತೇ ದೇವದೇವೇಶ, ನಮಸ್ತೇ ಜಗತಾಂಪತೇ।
ನಮಸ್ತೇ ಚಂದ್ರಕೋಟೀರ ವೈದ್ಯೇಶ್ವರ ನಮೋಸ್ತುತೇ॥೫॥

# ವಟ ಸಾವಿತ್ರಿ ವ್ರತ



- ವೆಂಕಟ ರಾಘವನ್ .ಎಸ್.
9845793917

ಪಾಹಿ ಮಾತಾ ಜಗದಂಬ ಪಾಹಿ ಕರುಣಾಮೂರ್ತೇ
ಪಾಹಿ ಜಗದ್ರಕ್ಷಿಣಿ ದೇವಿ ಮೂಲ ಶಕ್ತಿ ಸ್ವರೂಪಿಣಿ॥
ಸತ್ಯಲೋಕ ನಿವಾಸಿನಿ ಧವಳ ಕಾಂತಿಯುತ
ವೀಣಾ ಪುಸ್ತಕಧಾರಿಣಿ ಸರಸ್ವತಿ ನಮೋಸ್ತುತೇ॥
ಹಂಸವಾಹಿನಿ ಸ್ವಪ್ತಸ್ವರ ಆಧೀಷ್ಠಾತ್ರಿ ದೇವಿ
ಶ್ವೇತ ಪದ್ಮಾಸನಸ್ಥಿತೇ ದೇವಿ ನಮೋಸ್ತುತೇ॥
ಮೂಲಮಂತ್ರಯುತ ಮೂಲಾಧಾರ ಶಕ್ತಿ ದೇವಿ
ಪಂಚಮುಖಿ ಗಾಯತ್ರಿ ದೇವಿ ನಮೋಸ್ತುತೇ॥
ಪ್ರಣವ ಸ್ವರೂಪ ಓಂಕಾರ ಬೀಜಾಕ್ಷರಿ ದೇವಿ
ವೇದಮಾತ ಜ್ಞಾನ ಪ್ರದಾಯಿನಿ ದೇವಿ ನಮೋಸ್ತುತೇ
ತ್ರಿಪದಾ ಸತ್ಯ ಸ್ವರೂಪಿಣಿ ಪರದೇವತಾ ದೇವಿ
ಶಕ್ತಿ ಪುಂಜ ಬ್ರಾಹ್ಮಿಣಿ ಸಾವಿತ್ರಿ ದೇವಿ ನಮೋಸ್ತುತೇ॥

ಅನಾದಿಯಿಂದ ಆದಿ ಪರಾಶಕ್ತಿ ಸಕಲ ಚರಾಚರ ಸೃಷ್ಟಿಗೆ ಮೂಲ.ಅನಾದಿ ಅಂದರೆ ಎಲ್ಲರಿಗಿಂತ ಮೊದಲು.

ಸೃಷ್ಟಿ ನಡೆಯಲು ಶಕ್ತಿ ಅತ್ಯಗತ್ಯ. ಆದಿ ಶಕ್ತಿ ಜಗತ್ತಿನ ಸೃಷ್ಟಿಕರ್ತೆ, ಸ್ಥಿತಿ ನಿಯಂತ್ರಣಕಾರಿಣಿ ಮತ್ತು ವಿನಾಶಕಾರಿಣಿ.

ತಸ್ಯಕಾಚಿತ್ ಸ್ವತಃ ಸಿದ್ದಾ ಶಕ್ತಿರ್ಮಾಯೇತಿ ವಿಶ್ರುತಾ। ಸ್ವತಃ ಸಿದ್ಧವಾಗಿ ಮಾಯಾಶಕ್ತಿಯಿಂದ ಜಗತ್ತು ದೇವಿಯಿಂದ ಸೃಷ್ಟಿಸಲಾಗಿದೆ.

"ಯಾ ದೇವಿ ಸರ್ವಭೂತೇಷು ಶಕ್ತಿ ರೂಪೇಣ ಸಂಸ್ಥಿತಾ ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈನಮೋ ನಮಃ" ಸಕಲ ಪ್ರಾಣಿಗಳಲ್ಲಿ ಸಕಲ ಪದಾರ್ಥಗಳಲ್ಲಿ ತೃಷ್ಣಾ ಶಕ್ತಿ ಸ್ವರೂಪ ದಲ್ಲಿರುವ ದೇವಿಗೆ ನಮಸ್ಕಾರ, ಮತ್ತೆ ಮತ್ತೆ ವಂದನೆಗಳು. "ಯಾ ದೇವಿ ಸರ್ವಭೂತೇಷು ಮಾತೃ ರೂಪೇಣ ಸಂಸ್ಥಿತಾ ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ" ಜಗತ್ತಿನ ಸೃಷ್ಟಿಯಲ್ಲಿ

ಮಾತೃಮೂರ್ತಿ ರೂಪದಲ್ಲಿರುವ ದೇವಿಗೆ ನಮಸ್ಕಾರ, ಮತ್ತೆ ಮತ್ತೆ ವಂದನೆಗಳು.

ಬ್ರಹ್ಮ ವಿಷ್ಣು ಮಹೇಶ್ವರರು ತ್ರಿಮೂರ್ತಿಗಳು. ಬ್ರಹ್ಮ ದೇವರ ಪತ್ನಿ ಸರಸ್ವತಿ. ವಿಷ್ಣು ಪತ್ನಿ ಶ್ರೀಲಕ್ಷ್ಮಿ, ಮಹೇಶ್ವರ ಪತ್ನಿ ಪಾರ್ವತಿ. ಸರಸ್ವತಿ ದೇವಿ ವಿದ್ಯಾಧಿಪತಿ,ವೇದಾಧಿಪತಿ.ಸರಸ್ವತಿ ದೇವಿಗೆ ವಾಗ್ದೇವಿ, ಸಾವಿತ್ರಿ ಗಾಯತ್ರಿ ಎನ್ನುವ ಹೆಸರು ಇವೆ. ಸ್ಥೂಲವಾದ ಜಗತ್ತಲ್ಲಿ ವಿಭಿನ್ನವಾದ ಸ್ಪಂದನೆಗಳನ್ನು ಉತ್ಪನ್ನ ಮಾಡುವ ಸೂರ್ಯ ಶಕ್ತಿಯನ್ನು ಸಾವಿತ್ರಿ ಎಂದು ಹೇಳುವರು. ಪ್ರಕೃತಿ ಚೇತನ ಸಾವಿತ್ರಿ ದೇವಿ.ಇಂದ್ರಿಯಗಳಿಗೆ ನಾಯಕತ್ವ ವಹಿಸುವ ದೇವತೆ ಗಾಯತ್ರಿ. ಸತ್ಯವನ್ನು ಪೋಷಿಸುವ ದೇವತೆ ಸಾವಿತ್ರಿ, ವಾಗ್ದೇವತಾ ಸ್ವರೂಪಿಣಿ ಸರಸ್ವತಿ.

ಯಶ್ಚೈವಂ ವಿದ್ವಾನೇವ ವೇದಾನಾಮ್ ಮಾತೋ।
ಸಾವಿತ್ರಿ ಸಂಪದ ಭುಷನಿಷದಂ ಮುಪಾಸ್ಥೆ ಇತಿ ॥
ವಿದ್ವಾಂಸರು ವೇದ ಮಾತೆಯನ್ನು ಸಾವಿತ್ರಿ ಎಂದು ಕರೆಯುವರು.
ಓಂಕಾರ ಪೂರ್ವಿಕಾಸ್ತ್ರೀಸೌ ಮಹಾವ್ಯಾಹೃತಯೋ ವ್ಯಯಾ ।
ತ್ರಿಪದಾ ಚೈವ ಸಾವಿತ್ರಿ ವಿಜೇಯ ಬ್ರಾಹ್ಮಣೋಮುಖಮ್ ॥

ಓಂಕಾರವು ಸೇರಿ ಮೂರು ವ್ಯಾಹೃತಿಗಳಿಂದ ಮತ್ತು ತ್ರಿಪದಾ ಸಾವಿತ್ರಿ ಮಂತ್ರ ವೇದ ಮುಖ ಎಂದು ವರ್ಣಿಸಲಾಗಿದೆ.

ಸಮಸ್ತ ದೇವತಾ ಚಕ್ರ ಮುನಿ ಪಿತೃಗಣಾಸ್ತೇ
ಆರಾತ್ರಿಕಂ ಗೃಹಾಣೇದಂ ಸಾವಿತ್ರಿ ಮಮ ಸಿದ್ಧಯೇ॥

ಸಮಸ್ತ ದೇವತಾ ಸಮೂಹಗಳು, ಮುನಿಗಣ ಮತ್ತು ಪಿತೃಗಣಗಳಿಂದ ಆವರಿಸಿದ ದೇವಿ! ಹೇ ಸಾವಿತ್ರಿ ಮಾತೆ! ಸಿದ್ಧಿಯ ಪಡೆಯಲು ಹಾರತಿ ಸ್ವೀಕರಿಸು ತಾಯೇ!

ಸಾವಿತ್ರೀ ಜಪ್ಯನಿರತಃ ಸ್ವರ್ಗ ಮೊಪ್ನೋತಿ ಮಾನವಃ।
ಸಾವಿತ್ರೀ ಜಪ್ಯನಿರತೋ ಮೋಕೋಪಾಯಂ ಚ ವನ್ವತಿ ॥

ಸಾವಿತ್ರಿ ದೇವಿಯ ಜಪಿಸುವವರಿಗೆ ಸ್ವರ್ಗ ಗಾಯತ್ರಿ ದೇವಿಯ ಜಪ ಸಾಧನೆ ಫಲ ಮೋಕ್ಷೋ ಎಂದು ವರ್ಣಿಸಲಾಗಿದೆ. ಗಾಯತ್ರಿ ದೇವಿ ನಾಲ್ಕು ವೇದಗಳಿಗೆ ಮಾತೆ! ಹೀಗಾಗಿ ಗಾಯತ್ರಿ ದೇವಿಯನ್ನು ವೇದಮಾತೆ ಎಂದು ಪೂಜಿಸಲಾಗುವುದು ಋಗ್ವೇದದಲ್ಲಿ ಸಾವಿತ್ರಿ ದೇವತೆ ಉಪಾಸನೆಗಾಗಿ ಸಂಬಂಧಿಸಿದ ಗಾಯತ್ರಿ ಮಂತ್ರವಿದೆ. ವೇದಗಳಲ್ಲಿ ಎಷ್ಟೋ ಮಂತ್ರಗಳಿವೆ. ಆದರೂ ಗಾಯತ್ರಿ ಮಂತ್ರಕೆ ಸರ್ವೋತ್ತರ ಸ್ಥಾನ. ಯಾವ ಮಂತ್ರವಾಗಲಿ ರೂಪ ತಾಳಿದಾಗ ಅದನ್ನು ನಿರ್ದಿಷ್ಟವಾದ, ಸರಿಯಾದ ಸ್ಥಾಯಿನಲ್ಲಿ ಸ್ವರದಿಂದ ನುಡಿಯುವ ವಿಧಾನವನ್ನು ಶಿಕ್ಷಾ ಶಾಸ್ತ್ರದಲ್ಲಿ ವರ್ಣಿಸಲಾಗಿದೆ. ಆರು ವೇದಾಂಗಗಳಲ್ಲಿ ಛಂದಸ್ಸು ಒಂದು. ಛಂದಸ್ಸು ವೇದ ಪುರುಷರ ಪಾದಗಳಾಗಿ ಭಾವಿಸಲಾಗುವುದು. ಛಂದಸ್ಸು ಎಂದರೆ ಇನ್ನೊಂದು ಅರ್ಥವೂ ಇದೆ. ಛಂದಸ್ಸು ಎಂದರೆ ಪದ್ಯ ರೂಪ. ಋಗ್ವೇದ, ಸಾಮವೇದ ಪದ್ಯಗಳ ರೂಪ. ಯಜುರ್ವೇದದಲ್ಲಿ ಮಂತ್ರಗಳು ವಚನ ರೂಪದಲ್ಲಿ ಇದ್ದರೂ ಪದ್ಯಗಳನ್ನು ಹೊಂದಿರುವವು. ಪದ್ಯರೂಪಕೆ ನಿರ್ಣಿತ ಸೂತ್ರ ಮತ್ತು ನಿಬಂಧನೆ, ಅಕ್ಷರಗಳ ಸಂಖ್ಯೆ ಕೊಡುವ ಶಾಸ್ತ್ರ ಛಂದಸ್ಸು ಶಾಸ್ತ್ರ. ಛಂದಸ್ಸಿಗೆ ಮುಖ್ಯ ಗ್ರಂಥ ಪಿಂಗಳ ರಚಿತ ಛಂದಸೂತ್ರಗಳು. ಶ್ಲೋಕದಲ್ಲಿ ನಾಲ್ಕು ಪಾದಗಳಿದ್ದು ಒಂದೊಂದು ಪಾದಕೆ ಎಂಟು ಅಕ್ಷರಗಳಿದ್ದರೆ ಇದನ್ನು ಅನುಷ್ಟುಪ್ ಛಂದಸ್ಸು ಎಂದು ಕರೆಯುವರು. ವೇದಗಳ ಎಲ್ಲ ಮಂತ್ರಗಳಲ್ಲಿ ಛಂದಸ್ಸು, ಋಷಿ ಮತ್ತು ಉಪಾಸನೆ ಮಾಡುವ ದೇವತೆ ಇರುವರು.ಮಂತ್ರ ವಿನಿಯೋಗ ಮಾಡುವಾಗ ಸ್ಮರಿಸಬೇಕು.ಋಗ್ವೇದದ ಮೊದಲನೆಯ ಶ್ಲೋಕವೇ ಗಾಯತ್ರಿ ಛಂದಸ್ಸಿನಿಂದ ಕೂಡಿದ ಮಂತ್ರ. ಗಾಯತ್ರಿ ಮಂತ್ರಕೆ ಛಂದಸ್ಸು- ಗಾಯತ್ರಿ, ಋಷಿ-ವಿಶ್ವಾಮಿತ್ರ ಮತ್ತು ದೇವತೆ-ಸವಿತ, ಸವಿತ ಅಧಿ ಷ್ಠಾತ್ರಿ ದೇವತೆ! ಆಗಿರುವುದರಿಂದ ಗಾಯತ್ರಿ ದೇವಿಗೆ ಸವಿತ ಎನ್ನುವ ನಾಮವೂ ಇದೆ. ಸವಿತ ದೇವಿಯನ್ನು ಪರಬ್ರಹ್ಮ ಪರಮಾತ್ಮ ರೂಪವೆಂದು ಹೇಳುವರು. ಪ್ರೇರಣೆ ಕೊಟ್ಟು ಸಮಸ್ತ ವಿಶ್ವವನ್ನು ನಡೆಸುವ ಚೇತನಾ ಶಕ್ತಿಯನ್ನು ಗಾಯತ್ರಿ ಎನ್ನುತ್ತಾರೆ. ಗಾಯತ್ರಿ ಮಂತ್ರ ಮೊದಲಿಗೆ ಋಗ್ವೇದದಲ್ಲಿ ವರ್ಣಿಸಲಾಗಿದೆ. "ಗಯಾನ್ ತ್ರಾಯತೇ ಇತಿ ಗಾಯತ್ರಿ" ಎನ್ನುವ ಶಂಕರಾ ಚಾರ್ಯರ ಭಾಷ್ಯ! ಪ್ರಾಣವನ್ನು ರಕ್ಷಿಸುವ ಮಂತ್ರ ಗಾಯತ್ರಿ ಮಂತ್ರ. ಬ್ರಹ್ಮಯೇ ಗಾಯತ್ರಿ ಎಂದು ಶತಪಥ ಬ್ರಾಹ್ಮಣಂ ವರ್ಣಿಸುತ್ತದೆ.

### ಅಶ್ವಪತಿ ರಾಜರ ಆಳ್ವಿಕೆ

ಪ್ರಾಚೀನ ಕಾಲದಲ್ಲಿ ಮದ್ರ ದೇಶವನ್ನು ಅಶ್ವಪತಿ ರಾಜರು ಆಳುತ್ತಿದ್ದರು. ರಾಜರ ಪತ್ನಿ ಮಾಲವಿ. ರಾಜ ದಂಪತಿಗಳು ರಾಜ್ಯದ ಉನ್ನತಿ, ಸಂಪದೆ, ಸುಖ, ಶಾಂತಿ ಧರ್ಮ ಪಾಲನೆಯಲ್ಲಿ ಸಮಯ ಮೀಸಲಿಟ್ಟು ಸದಾ ತಮ್ಮ ಕರ್ತವ್ಯವಾಗಿ ಭಾವಿಸಿ ರಾಜ್ಯ ಆಳುತ್ತಿದ್ದರು. ರಾಜ್ಯ ಸುಭೀಕ್ಷವಾಗಿ ಶಾಂತಿ ಇಂದ ನಡೆಯುತ್ತಿತ್ತು. ಪ್ರಜೆಗಳು ತುಂಬಾ ಸಂತುಷ್ಟರಾಗಿ ಬಾಳುತ್ತಿದ್ದರು. ರಾಜರ ಮನದಲ್ಲಿ ಸಂತಾನವಿಲ್ಲದಶೋಕ ತುಂಬಿತ್ತು. ರಾಜ್ಯಭಾರ ಹೋರಲು ಸಂತಾನವಿರಲೇಬೇಕು ಎನ್ನುವ ಚಿಂತೆ ಸದಾ ಕಾಡುತ್ತಿತ್ತು. ಅಶ್ವಪತಿ ರಾಜರು ಪುಷ್ಕರ ತೀರ್ಥ ಕ್ಷೇತ್ರಕ್ಕೆ ತೆರಳಿ ದೇವಿಯ ಪೂಜೆ ಆರಂಭಿಸಿದರು. ಪರಾಶರ ಮುನಿ ಆ ಸ್ಥಳಕ್ಕೆ ಬಂದರು. ಅಶ್ವಪತಿಗೆ ಸಾವಿತ್ರಿ ದೇವಿಯ ಮಹಿಮೆ ತಿಳಿಸಿ ದೇವಿಯ ಉಪಾಸನೆ ಮಾಡಲು ಸೂಚನೆ ನೀಡಿದರು.ಅಶ್ವಪತಿ ರಾಜರು ಪತ್ನಿಯೊಡನೆ ಸಂತಾನಕ್ಕಾಗಿ ಸಾವಿತ್ರಿದೇವಿಯ ಉಪಾಸನೆ ಆರಂಭಿಸಿದರು. ಹದಿನೆಂಟು ವರ್ಷಗಳ ಕಾಲ ದೇವಿಯ ಉಪಾಸನೆ, ವ್ರತ, ಭಕ್ತಿ ಇಂದ ಆಚರಿಸಿದರು.ಜಗನ್ಮಾತೆ ಕರುಣೆ ಅಪಾರ! ದುರ್ಗಾ ಸಪ್ತಶತಿಯ ಶ್ಲೋಕಗಳಲ್ಲಿ ಸಾವಿತ್ರಿ ದೇವಿಯ ವರ್ಣನೆ.

ಅರ್ಧಮಾತ್ರಾ ಸ್ಥಿತಾ ನಿತ್ಯಾ ಯಾನುಚ್ಚಾರ್ಯಾ ವಿಶೇಷತಃ
ತ್ವಮೇವ ಸಂಧ್ಯಾ ಸಾವಿತ್ರೀ ತ್ವಂ ದೇವಿ ಜನನೀ ಪರಾ

ಓಂಕಾರದಲ್ಲಿ ಮಾತ್ರತ್ರಯಾ ನಂತರ ಉಚ್ಚರಿಸಲು ಸಾಧ್ಯವಾಗದ ಅರ್ಧಮಾತ್ರ ಸ್ವರೂಪಿಣಿ! ದೇವೀ ಜನನಿ, ನೀವೇ ಸಂಧ್ಯ, ನೀವೇ ಸಾವಿತ್ರಿ. ಅಪರಿಣಾಮಶೀಲವಾದ, ತುರೀಯ ಸ್ವರೂಪಿಣಿ,ಲೋಕಗಳಿಗೆಲ್ಲ ಜನನಿ ನೀವೇ ಮಾತೆ! ದೇವಿ ಪ್ರಸನ್ನರಾಗಿವರವ ಬೇಡಲು ಸೂಚಿಸಿದರು. ಅಶ್ವಪತಿ ರಾಜರು ವಂಶೋದ್ಧಾರಕ, ರಾಜರ ನಂತರ ರಾಜ್ಯ ಆಳಲು ಪುತ್ರ ಭಿಕ್ಷೆ

ಬೇಡಿದರು. ದೇವಿ ಪುತ್ರಿ ಪ್ರಾಪ್ತಿ ಆಗುವುದು ಎಂದು ವರವ ಕೊಟ್ಟರು. ದೇವಿಯ ವರಪುತ್ರಿ ಪರಮ ಸುಶೀಲವಂತೆ, ಗುಣ ಗಳಲ್ಲಿ ಶ್ರೇಷ್ಠ ಮತ್ತು ಮಗಳ ಚರಿತ್ರೆ ಪಾವನವಾಗುವುದು! ಎಂದು ದೇವಿ ಆಶ್ವಾಸನೆ ನೀಡಿದರು. ನಂತರ ಪುತ್ರ ಪ್ರಾಪ್ತಿ ಆಗುವುದು ಎಂದು ಅಭಯವ ಕೊಟ್ಟು ದೇವಿ ಅಂತರ್ಧಾನವಾದರು. ಸಮಯ ಕಳೆಯಿತು. ಅಶ್ವಪತಿ ರಾಜರಿಗೆ ಪುತ್ರಿ ಪ್ರಾಪ್ತಿಆಯಿತು. ಸಾವಿತ್ರಿ ದೇವಿಯ ಕರುಣೆ ಇಂದ ಪಡೆದ ಮಗಳಿಗೆ ಸಾವಿತ್ರಿ ಎಂದು ನಾಮಕರಣ ಮಾಡಿದರು.

### ಸತ್ಯವಾನ್ ಜೊತೆ ಸಾವಿತ್ರಿಯ ವಿವಾಹ :

ಸಾವಿತ್ರಿ ದಿನೇ ದಿನೇ ಬೆಳೆಯುತ್ತ ತಂದೆ ತಾಯಿಯ ಸೇವೆ, ಹಿರಿಯರಿಗೆ ಗೌರವ, ದೈವ ಭಕ್ತಿ ಪೂಜೆ, ವ್ರತ ಮಾಡುತ ದೊಡ್ಡವರಾದರು. ವಿವಾಹ ಪ್ರಾಯ ಬಂದಾಗ ತಂದೆ ವರ ಅನ್ವೇಷಣೆಯಲ್ಲಿ ಇದ್ದರು. ನಾರದ ಮಹಾಮುನಿ ರಾಜ್ಯಕೆ ಆಗ ಮಿಸಿ ಸಾವಿತ್ರಿ ವಿವಾಹ ಬಗ್ಗೆ ಪ್ರಸ್ತಾಪನೆ ಮಾಡಿದರು. ಸಾವಿತ್ರಿ ಉದ್ಯಾನವನದಿಂದ ಗೆಳತಿಯರೊಡನೆ ಸಭಾ ಪ್ರವೇಶ ಮಾಡಿ ದರು. ಮದುವೆಯ ಪ್ರಸ್ತಾಪನೆ ನಡೆಯುವುದನ್ನು ಕೇಳಿ, ಸಾಳ್ವ ರಾಜ್ಯದ ಒಡೆಯನಾದ ದ್ಯುಮತ್ಸೇನರ ಪುತ್ರ ಸತ್ಯವಾನ್‌ನ ಇಷ್ಟಪಟ್ಟಿದ್ದೇನೆ! ಮದುವೆ ಸತ್ಯವಾನ್ ಜೊತೆ ಮಾಡಲು ಹಂಸ ಗಮನದಿಂದ ನುಡಿದರು. ನಾರದ ಮಹರ್ಷಿ ಎಲ್ಲವೂ ತಿಳಿ ದವರು. ದ್ಯುಮತ್ಸೇನ ಮಹಾರಾಜರು ರಾಜ್ಯವ ಕಳೆದುಕೊಂಡು ಅಂಧರಾಗಿ ಸತೀಸುತರೊಡನೆ ಕಾಡಿನಲ್ಲಿ ವಾಸ ಮಾಡು ತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಸತ್ಯವಾನ್ ಜೊತೆ ವಿವಾಹಹಿತ ಕರವಲ್ಲ ಎಂದು ನುಡಿದರು. ಸತ್ಯವಾನ್‌ಸದಾ ಸತ್ಯ ನುಡಿಯು ವರು, ಸುಂದರ ಸುಶೀಲ ಮತ್ತು ಗುಣವಂತ. ಆದರೂ ವಿಧಿವಶ! ಒಂದು ವರುಷ ಆಯುಷ್ ಇರುವುದು. ಇದರಿಂದ ಸಾವಿತ್ರಿಗೆ ವೈಧವ್ಯ ಖಚಿತ, ನಿರ್ಣಯ ತೆಗೆದುಕೊಳ್ಳುವ ಮುನ್ನ ವಿಚಾರಿಸ ಬೇಕು ಎಂದು ಎಚ್ಚರಿಕೆ ನೀಡಿದರು. ಸಾವಿತ್ರಿ ತಂದೆ ಮತ್ತು ನಾರದ ಮಹರ್ಷಿಗಳಿಗೆ ನಮಸ್ಕರಿಸಿ, ತನು, ಮನ ಸತ್ಯವಾನ್ಗೆ ಅರ್ಪಿಸಿದ್ದೇನೆ.! ಮದುವೆ ಅದರೆ ಸತ್ಯವಾನ್ ಜೊತೆನೇ! ಇದು ತನ್ನ ಅಂತಿಮ ನಿರ್ಧಾರ, ದಯವಿಟ್ಟು ನಡೆಸಿಕೊಡಬೇಕು ಎಂದು ಬೇಡಿಕೊಂಡರು. ಅಶ್ವಪತಿ ಮಹಾರಾಜರು ಮಂತ್ರಿ ಗಳೊಡನೆ ಕಾಡಿಗೆ ತೆರಳಿ ದ್ಯುಮತ್ಸೇನ ರಾಜರನ್ನು ಬೇಟಿ ಮಾಡಿ ತನ್ನ ಮಗಳನ್ನು ಸತ್ಯವಾನ್ ಜೊತೆ ಮದುವೆ ಮಾಡಿ ಕೊಡಲು ಪ್ರಸ್ತಾಪನೆ ಮಾಡಿದರು. ದ್ಯುಮತ್ಸೇನ ರಾಜರು ತಾವು ಅರಣ್ಯ ವಾಸ ಮತ್ತು ರಾಜ್ಯವಿಲ್ಲದೆ ನೊಂದಿದ್ದೇವೆ. ಇಂತಹ ಪರಿಸ್ಥಿತಿ ಯಲ್ಲಿ ಸಾವಿತ್ರಿ ಮದುವೆ ಆದಮೇಲೆ ರಾಜ ಭೋಗಗಳಿಲ್ಲದೆ ಬಾಳಬೇಕಾಗುತ್ತದೆ. ಬೇರೆ ವರನನ್ನು ಶೋಧಿಸಲು ಹೇಳಿದರು. ಅಶ್ವಪತಿ ಮಹಾರಾಜರು ಗುಣ, ಧರ್ಮಪಾಲನೆ ಮತ್ತು ಸತ್ಯ ಶೀಲತೆಯುಳ್ಳ ಸತ್ಯವಾನ್ ಶ್ರೀಮಂತ, ಬಡವನಲ್ಲ! ಮದುವೆ ನಡೆಸಿಕೊಡಲು ಕೇಳಿ ಕೊಂಡರು. ಸಾವಿತ್ರಿ ಮತ್ತು ಸತ್ಯವಾನ್ ಪರಿಣಯವಾಯಿತು. ಆಶ್ರಮದ ವಾಸಿಗಳು ಮತ್ತು ರಾಜ್ಯದ ಬಂಧು ಬಾಂಧವರೆಲ್ಲರೂ ವಧೂವರರಿಗೆ ಆಶೀರ್ವಚನ ನೀಡಿ ದರು. ಮದುವೆಯನಂತರ ರಾಜಕುಮಾರಿ ಪೀತಾಂಬರ ವಸ್ತ್ರ ಒಡವೆ ರಾಜ ಭೋಗಗಳು ಬಿಟ್ಟು ಆಶ್ರಮ ವಾಸಿಯಾಗಿ ಅರಣ್ಯದಲ್ಲಿ ಪತಿ ಮತ್ತು ಅತ್ತೆ ಮಾವರ ಸೇವೆ ಮಾಡುತ್ತಾ ಕಾಲ ಕಳೆದರು.

### ಯಮಧರ್ಮರಾಜರ ದುರುಶನ

ಕಾಲಚಕ್ರದಲ್ಲಿ ಒಂದು ವರುಷ ನಡೆದು ಹೋಯಿತು. ನಾರದ ಮಹರ್ಷಿಗಳ ಸೂಚನೆಯಂತೆ ಸತ್ಯವಾನ್ ಆಯುಷ್ ಕರಗಿ ಇನ್ನು ನಾಲ್ಕು ದಿನಗಳಲ್ಲಿ ಮರಣ ಸಮಯ ಸಮೀ ಪಿಸಿತು. ಜನನ ಮರಣ ಎಂಬುವುದು ಚಕ್ರ. ಭಗದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮ ನುಡಿದಂತೆ "ಜಾತಸ್ಯ ಮರಣಂ ಧ್ರುವಂ" ಜನನ ನಂತರ ಮರಣ ಖಚಿತ ! ಪ್ರಕೃತಿ ಸಿದ್ಧವಾದ ಮರಣವೇ ಬಂಧು ಬಾಂಧವರಿಗೆ, ಮಕ್ಕಳಿಗೆ ನೋವು ತಂದರೇ, ಅಕಾಲ ಮರಣವಾದಾಗ ಕುಟುಂಬ ವರ್ಗ, ಬಂಧು ಬಾಂಧವರಿಗೆ ಇನ್ನೂ ದುಃಖ ಉಂಟಾಗುವುದು. ಸಾವಿತ್ರಿ ದೈವ ಆರಾಧನೆ ಮತ್ತು ವ್ರತ ಆರಂಭ ಮಾಡಿದರು. ಕಠಿಣ ಉಪವಾಸ ದೀಕ್ಷೆ ಇಂದ ವ್ರತ ಆರಂಭಿಸಿದರು. ಕೊನೆಗೆ ವರುಷ ಕಳೆದು ಸತ್ಯವಾನ್‌ನ ಮೃತ್ಯು ಕಬಳಿಸುವ ದಿನ ಬಂತು. ಸಾವಿತ್ರಿ ಪತಿಯೊಡನೆ ಕಾಡಿಗೆ ಹೋ ದರು. ಹೂವು ಹಣ್ಣು ತೆಗೆದುಕೊಂಡು ಮುಂದೆ ಹೋಗಿ ಕಟ್ಟಿಗೆ ಯನ್ನು ಹೊಡೆಯುತ್ತಿದ್ದರು ಸತ್ಯವಾನ್, ಇಷ್ಟರಲ್ಲಿ ಆಯಾಸವಾಗಿ ಕೆಳಗೆ ಬಿದ್ದಿರು. ಸಾವಿತ್ರಿ ಪತಿಯ ತಲೆಯನ್ನು ತೊಡೆಮೇಲೆ ಇಟ್ಟು ಕೊಂಡು ಉಪಚಾರ ಮಾಡುತ್ತಿದ್ದರು. ಸತ್ಯವಾನ್ ಪಂಚ ಪ್ರಾಣ ಹೋಗುವುದಕ್ಕೆ ಸಿದ್ಧವಾಗುತ್ತಿತ್ತು, ಇಷ್ಟರಲ್ಲಿ ಯಮಧರ್ಮ ರಾಜರನ್ನು ಸಾವಿತ್ರಿ ನೋಡಿ ನಮಸ್ಕರಿಸಿದರು. ಯಮಧರ್ಮ ರಾಜರು ಸತ್ಯವಾನ್ ಆಯುಷ್ ಮುಗಿಯಿತು. ಪ್ರಾಣ ಹರಣ ಮಾಡಲು ಬಂದಿದ್ದೇನೆ, ಆದರೆ ನನ್ನನ್ನು ನೋಡಲು ಮನುಷ್ಯರಿಗೆ ಸಾಧ್ಯವಿಲ್ಲ ಸಾವಿತ್ರಿ ನನ್ನನ್ನು ಕಂಡಿದ್ದಾರೆ! ಈಕೆ ಮಹಾಗುಣ ವಂತೆ ಪತಿವ್ರತಾಶಿರೋಮಣಿ ಎಂದು ಕೊಂಡರು.

### ಯಮಲೋಕದ ಕಡೆ ಪಯಣ

ಸತ್ಯವಾನ್ ಪ್ರಾಣಹರಣ ಮಾಡಿ ಯಮಧರ್ಮರಾಜ ದಕ್ಷಿಣ ದಿಕ್ಕಿಗೆ ಪಯಣ ಆರಂಭಿಸಿದರು. ಸಾವಿತ್ರಿ ಯಮಧರ್ಮ ರಾಜರನ್ನು ಹಿಂಬಾಲಿಸಿದರು. ಯಮಧರ್ಮರಾಜ ಸಾವಿತ್ರಿ ಯನ್ನು ಕಂಡು ನನ್ನ ಹಿಂದೆ ಏಕೆ ಬರುವೆ? ಕಾಲಯಮ ಪ್ರಾಣ ಹರಣ ಮಾಡುವುದು ಧರ್ಮ. ಹಿಂತಿರುಗಿ ಮನೆಗೆ ಹೋಗಲು ಆಜ್ಞಾಪಿಸಿದರು. ಸತಿಗೆ ಪತಿಯೇ ಧರ್ಮ. ಸತ್ಯವಂತನು ಧರ್ಮ ವಾನ್ ಮತ್ತು ಸತ್ಯವಂತ! ಎಷ್ಟೇ ದೂರವಾದರೂ ಸತ್ಯವಾನ್ ಇಲ್ಲದೆ ಹಿಂದೆ ಹೋಗುವ ಪ್ರಶ್ನೆಯೇ ಇಲ್ಲ ಎಂದು ಸಾವಿತ್ರಿ ನುಡಿದರು. ಯಮ ಪ್ರಸನ್ನರಾಗಿ ವರವ ಕೇಳಲು ಮಾವ ದ್ಯುಮ ತ್ಸೇನರ ಅಂಧತ್ವ ಕಳೆದು ದೃಷ್ಟಿ ಕೊಡುವ ವರ ಬೇಡಿದರು. ದ್ಯುಮತ್ಸೇನರಿಗೆ ಕಣ್ಣು ಬಂತು. ಸಾವಿತ್ರಿ ಯಮಧರ್ಮ ರಾಜರಿಗೆ ನಮಸ್ಕರಿಸಿ, ಧರ್ಮರಾಜ! ನೀವು ಧರ್ಮದ ಆಚರಣೆ ಮಾಡುವ ದೇವರು, ದಿಕ್ಪಾಲಕರು! ನೀವು! ನಮಗೆ ಇನ್ನೊಂದು ಗತಿ ಇಲ್ಲ! ನನ್ನನ್ನು ಕರುಣಿಸಿ ಎಂದು ನಮಸ್ಕರಿಸಿದರು! ಸಾವಿತ್ರಿಯ ಭಕ್ತಿ, ಧರ್ಮ ಆಚರಣೆ ನೋಡಿ ಪತಿಯ ಪ್ರಾಣ ಬಿಟ್ಟು ಬೇರೆ ವರವ

ಕೇಳಲು ಹೇಳಿದರು. ಯಮರಾಜಾ! ದ್ಯುಮತ್ಸೇನ ಮಹಾರಾಜರ ರಾಜ್ಯ ಶತ್ರುಗಳ ಪಾಲಾಗಿ ಜನರು ಕಷ್ಟದಲ್ಲಿ ಇದ್ದಾರೆ! ಅವರಿಗೆ ರಾಜ್ಯ ಹಿಂಪಡೆಯುವ ವರ ಕೇಳಿದರು. ಯಮ ತಥಾಸ್ತು! ಎಂದು ವರ ಕೊಟ್ಟರು. ಕಳೆದು ಹೋದ ಮಾವರ ರಾಜ್ಯ ಹಿಂದೆ ಬಂತು. ಸಾವಿತ್ರಿ ಯಮರನ್ನು ಹಿಂಬಾಲಿಸಲು ಬಿಡಲಿಲ್ಲ. ಧರ್ಮಾತ್ಮಾ, ನೀವು ಧರ್ಮವ ತಿಳಿದವರು."ಧರ್ಮೋ ರಕ್ಷಿತಿ ರಕ್ಷಿತಃ" ಪತಿಯನ್ನು ಅನುಸರಿಸುವುದು ಸತಿಯ ಧರ್ಮ. ನಾನು ನನ್ನ ಧರ್ಮವ ಬಿಡಲಾರೆ! ಎಷ್ಟೇ ದೂರವಾದರೂ ಕಷ್ಟವಾದರೂ ನಾನು ಸಹಿಸುವೆ ಎಂದು ನುಡಿದರು. ಯಮಧರ್ಮ ರಾಜರು ಪತಿಯ ಪ್ರಾಣ ಬಿಟ್ಟು ಬೇರೆ ವರವ ಕೇಳಲು ಹೇಳಿದರು. ಸಾವಿತ್ರಿ ಕೈ ಮುಗಿದು ಹೇ ಪ್ರಭೋ! ನಿಮ್ಮ ಕೃಪೆಗೆ ಮಿತಿ ಇಲ್ಲ! ನನ್ನ ತಂದೆ ಅಶ್ವಪತಿಗೆ ಪುತ್ರ ಸಂತಾನ ಕೊಡಲು ಬೇಡಿ ಕೊಂಡರು.ಯಮ ವರವ ಕೊಟ್ಟರು. ಯಮ ಸಾವಿತ್ರಿಯನ್ನು ಕರುಣೆಯಿಂದ ನೋಡುತ್ತಾ ಮುಂಬರುವ ಪ್ರಯಾಣ ಕಠಿಣ, ಮನೆಗೆ ತಿರುಗಿ ಹೋಗಲು ಕೇಳಿ ಕೊಂಡರು.ಸಾವಿತ್ರಿ ನಮಸ್ಕರಿಸಿ ಸತಿಗೆ ಪತಿಗಿಂತ ಬೇರೆ ಯಾವ ದೇವರೂ ಇಲ್ಲ. ವೈವಾಹಿತ ಸ್ತ್ರೀಯರಿಗೆ ಮಾಂಗಲ್ಯವೇ ಮಹಾಭಾಗ್ಯ, ಸಕಲ ಸಂಪತ್ತು, ಪತಿ ಇಲ್ಲದೆ ಸತಿಗೆ ಜೀವನ ಬಿಲ್ಲ. ಪತಿ ಸೇವೆಯಲ್ಲಿ ಎಂಥ ಕಠಿಣ,ಕಷ್ಟವಾದರೂ ಸಹಿಸುವೆ ಎಂದರು.ನನ್ನ ಪೂರ್ವ ಜನ್ಮದ ಫಲ ನಿಮ್ಮ ದರುಶನ! ಹೇ ಧರ್ಮಮೂರ್ತಿನನ್ನ ಪತಿಯ ಪ್ರಾಣ ವರವಾಗಿ ಕೊಡಿ ಎಂದು ಬೇಡಿ ಕೊಂಡರು. ಸಂತುಷ್ಟರಾದ ಯಮಧರ್ಮರಾಜರು ಸತ್ಯ ವಾನ್ ಪ್ರಾಣದಾನ ಮಾಡಿದರು.

### ದ್ಯುಮತ್ಸೇನರ ರಾಜ್ಯ ಪಟ್ಟಾಭಿಷೇಕ

ಪತಿಯೇ ಸರ್ವಸ್ವ ಎಂದು ಛಲದಿಂದ ಯಮನನ್ನು ಮೆಚ್ಚಿಸಿ ಸತ್ಯವಾನ್ ಜೊತೆ ಕಾಡಿನಿಂದ ಹಿಂದಿರುಗಿದರು. ವರ ಪ್ರಭಾವದಿಂದ ದ್ಯುಮತ್ಸೇನರಿಗೆ ಕಣ್ಣು, ರಾಜ್ಯ, ಅಶ್ವಪತಿ ರಾಜರಿಗೆ ಪುತ್ರ ಪ್ರಾಪ್ತಿ ಮತ್ತು ಪತಿಯ ಪ್ರಾಣ ಪಡೆದು ಸುಮಂಗಳಿಯಾಗಿ ಸಾವಿತ್ರಿ ತನ್ನ ಕುಟುಂಬಕ್ಕೆ ಬೇಕಾದ ಎಲ್ಲ ಕಷ್ಟಗಳನ್ನು ಪಾರು ಮಾಡಿದರು. ಮಹಾಪತಿವ್ರತಾ ಶಿರೋಮಣಿ ಸಾವಿತ್ರಿ ದೇವಿಗೆ ವಂದನೆ!ಅಂದಿನಿಂದ ಸಾವಿತ್ರಿ "ಸತೀಸಾವಿತ್ರಿ" ಎಂದು ಚರಿತ್ರೆಯಲ್ಲಿ ಶಾಶ್ವತವಾಗಿ ಉಳಿದು ಹೋದರು. ಈ ವಿಧವಾಗಿ ಸಾವಿತ್ರಿ ಪತಿವ್ರತಾ ಧರ್ಮದಿಂದ ತನ್ನ ಪತಿ, ಅತ್ತೆ - ಮಾವ, ತಂದೆ-ತಾಯಿಯ ಉದ್ಧಾರ ಮಾಡಿ ಸಂಸಾರದಲ್ಲಿ ಪೂಜನೀಯರಾಗಿ ಪ್ರಸಿದ್ಧರಾದರು.

### ವಟ ಸಾವಿತ್ರಿ ವ್ರತ

ಈ ವ್ರತದ ದೇವತೆ ಸಾವಿತ್ರಿ ಸಹಿತ ಬ್ರಹ್ಮದೇವರು. ಸತ್ಯವಾನ್, ಸಾವಿತ್ರಿ, ನಾರದ ಮಹರ್ಷಿ ಮತ್ತು ಯಮಧರ್ಮ ರಾಜರು ಉಪದೇವತೆಗಳು, ಸಿರಿ ಸಂಪದೆ, ಪತಿಯ ಪ್ರಾಣ, ಕುಟುಂಬದ ಆಯುರ್ ಆರೋಗ್ಯ, ವಂಶಾಭಿವೃದ್ಧಿ ಸಾಧಿಸಿದ ಸತೀ ಸಾವಿತ್ರಿ ದೇವಿಯನ್ನು ಉದ್ದೇಶಿಸಿ ಸುಮಂಗಳಿ ಸ್ತ್ರೀಯರು ಆಚರಿಸುವ ವ್ರತವೇ ವಟ ಸಾವಿತ್ರಿ ವ್ರತ. ಸಾವಿತ್ರಿ ದೇವಿ ಸತ್ಯವಾನ್ ಜೊತೆ ಯಮಧರ್ಮರಾಜರನ್ನು ನೋಡಿದ್ದು ವಟ ವೃಕ್ಷದ ಬಳಿ. ಪರಸ್ಪರ ಚರ್ಚೆ ನಡೆದಿದ್ದು ವಟ ವೃಕ್ಷದ ಬಳಿ (ಆಲದ ಮರ). ಹೀಗಾಗಿ ಇಂದಿನ ದಿನ ವಟ ವೃಕ್ಷಕ್ಕೆ ಪೂಜೆ ಸಲ್ಲಿಸಲಾಗುವುದು. ಈ ದಿನ ಸಾವಿತ್ರಿಯು ತನ್ನ ಪತಿಯ ಜೀವವನ್ನು ಯಮಧರ್ಮನೊಂದಿಗೆ ಹೋರಾಡಿ ಮತ್ತೆ ಪಡೆದ ದಿನವೆಂದು ಪರಿಗಣಿಸಲಾಗಿದೆ.ಬ್ರಹ್ಮವೈವರ್ತ ಪುರಾಣದಲ್ಲಿ ವರ್ಣಿಸಿದಂತೆ!

ಜ್ಯೇಷ್ಠ ಕೃಷ್ಣ ತ್ರಯೋದಶ್ಯಾಂ ಶುದ್ಧೀ ಕಾಲೇ ಸಮ್ಯತಃ।
ವ್ರತ ಮೇವ ಚತುರ್ದಶ್ಯಾಂ ಪ್ರತೀ ಭಕ್ತ್ಯಾ ಸಮಾಚ ರೇತ್॥

ವ್ರತದ ನಿಯಮಾನುಸಾರ ಜ್ಯೇಷ್ಠಶುದ್ಧ ದ್ವಾದಶಿ ದಿನ ಲಘು ಭೋಜನ ಮಾಡಿ ತ್ರಯೋದಶಿಯಿಂದ ಹುಣ್ಣಿಮೆಯ ತನಕ ಉಪವಾಸವಿರಬೇಕು. ಹುಣ್ಣಿಮೆಯ ದಿನ ಚಂದ್ರಾರ್ಘ್ಯ, ಸುವಾಸಿನಿ ಪೂಜೆ, ದಂಪತಿ ಪೂಜೆ ಮಾಡಬೇಕು. ಪ್ರತಿವರ್ಷ ಜ್ಯೇಷ್ಠ ಮಾಸದ ಶುದ್ಧ ಹುಣ್ಣಿಮೆಯಂದು ವಟ ಸಾವಿತ್ರಿ ವ್ರತ ಆಚರಿಸಲಾಗುತ್ತದೆ. ವಟವೃಕ್ಷಕ್ಕೆ ಷೋಡಶೋಪಚಾರ ಪೂಜೆಯನ್ನು ಮಾಡಬೇಕು. ಹಿಂದೂ ಧರ್ಮದಲ್ಲಿ ಪೂಜನೀಯವಾದ ವೃಕ್ಷಗಳಲ್ಲಿ ಆಲದಮರವೂ ಒಂದು ಪೂಜೆಯಲ್ಲಿ ಅಭಿಷೇಕವಾದ ನಂತರ ವಟಕ್ಕೆ ಹತ್ತಿಯ ದಾರದಿಂದ ಮೂರು ಸುತ್ತು ಸುತ್ತಬೇಕು.

ಅನೇನ ಸ್ತವ ರಾಜೇವ ಸಂಸ್ತೂಯಾಶ್ವಪತಿರ್ನೃಪಃ।
ದದರ್ಶತಾಂಚ ಸಾವಿತ್ರೀಂ ವರಂ ಪ್ರಾಪ ಮನೋಗತಂ॥

ಮಂತ್ರವನ್ನು ಜಪಿಸಿ ಸಾವಿತ್ರಿ ವರ ಪಡೆಯುವುದನ್ನು ನೆನೆಯಬೇಕು! ಪೂಜೆಯ ಕೊನೆಯಲ್ಲಿ ಅಖಂಡಸೌಭಾಗ್ಯ ಲಭಿಸಲಿ, ಹಾಗೆಯೇ ಧನಧಾನ್ಯ ಮತ್ತು ವಂಶವೃದ್ಧಿಯಾಗಲಿ, ಎಂದು ಸಾವಿತ್ರೀ ಸಹಿತ ಬ್ರಹ್ಮ ದೇವರನ್ನು ಪ್ರಾರ್ಥನೆ ಮಾಡಬೇಕು.

ನಮೋ ನಮಸ್ತೆ ಗಾಯತ್ರಿ ಸಾವಿತ್ರಿ ತ್ವಾಂ ನಮಾಮ್ಯಹಮ್ ।
ಸರಸ್ವತಿ ನಮಸ್ತುಭ್ಯಂ ತುರೀಯೇ ಬ್ರಹ್ಮರೂಪಿಣಿ ॥

ಮಾತೆಗಾಯತ್ರಿ, ಮಾತೆಸಾವಿತ್ರಿ, ಹೇ ಮಾತೆ ಸರಸ್ವತಿ ದೇವಿ। ನಿಮಗೆ ವಂದನೆಗಳು! ನಮಸ್ಕಾರವನ್ನು ಅರ್ಪಿಸುವೆ! ಬ್ರಹ್ಮ ಸ್ವರೂಪಿಯಾದ ನಿಮಗೆ ವಂದನೆಗಳು. ವಟ ಸಾವಿತ್ರಿ ವ್ರತ ಕರ್ನಾಟಕ, ಮಹಾರಾಷ್ಟ್ರ, ಗುಜರಾತ್ ಮತ್ತು ಇನ್ನು ಕೆಲವು ಉತ್ತರ ಭಾರತದ ರಾಜ್ಯಗಳಲ್ಲಿ ಆಚರಿಸುವರು.

ಸಾವಿತ್ರಿದೇವಿ ಎಲ್ಲರಿಗೂ ಆಯುರ್ ಆರೋಗ್ಯ ಸೌಭಾಗ್ಯವನ್ನು ಕರುಣಿಸಲಿ.

ಸರ್ವೇ ಜನಾಃ ಸುಖಿನೋ ಭವಂತು! ....



# ಸಂಗೀತವೇ ಸಂಜೀವಿನಿ

- ಶ್ರೀಮತಿ. ಕೆ.ವಿ. ಪದ್ಮಾವತಿ
9743722327

ಸಂಗೀತ ಹೃನ್ಮನಗಳನ್ನು ತಣಿಸಿ ಒತ್ತಡಗಳನ್ನು ನಿವಾರಿಸುವ ದಿವ್ಯ ಸಂಜೀವಿನಿ. ವ್ಯಕ್ತಿತ್ವ ವಿಕಸನದ, ಸಾಧನಾ ಪರ್ವದ ಅಂಗಳದಲ್ಲಿ ಅರಳುವ ಕುಸುಮ. ಸಂಗೀತ ಹೃದಯದ ಭಾಷೆ. ಸ್ವರ ಮಿಳಿತಗಳು ಹೃದಯದ ಬಡಿತಕ್ಕೆ ಸ್ಪಂದಿಸುತ್ತವೆ. ಹೃದಯ ಆಧ್ಯಾತ್ಮ ಸಾಧಕನ ತಪೋ ಭೂಮಿಯಾಗಿದೆ. ಹೃದಯದ ಬಡಿತದಿಂದ ಮೊದಲ್ಗೊಂಡು ಬೀಸುವ ತಂಗಾಳಿಯವರೆಗೆ ಪ್ರಕೃತಿಯಲ್ಲಿ ಕಾಣಸಿಗುವ ಸಕಲ ಚರಾಚರ ವಸ್ತುಗಳ ಮಿಡಿತದಲ್ಲೂ ಸ್ವರಗಳ ಝೇಂಕಾರವಿದೆ. ತೂಗುವ ತೆನೆಯಲ್ಲಿ ಹಾರುವ ಹಕ್ಕಿಗಳ ರೆಕ್ಕೆ ಬಡಿತದಲ್ಲಿ ಬೆಳದಿಂಗಳ ಬೆಳಕಿಗೆ ತುಯ್ದಾಡುತ್ತಾ ನಾಚಿ ನೀರಾಗುವ ತಾವರೆಯ ಕುಸುಮಗಳಲ್ಲಿ, ಪರಾಗ ಸ್ಪರ್ಶಕ್ಕೆ ಹಾತೊರೆಯುತ್ತಾ ಜೀಂವ್ ಗುಟ್ಟುವ ದುಂಬಿಯ ನಾದದಲ್ಲೂ ಸ್ವರಗಳ ಆಲಾಪನೆಯಿದೆ. ಹೌದು,ಎಲ್ಲವೂ ಸಂಗೀತ ಸ್ವರಗಳಿಂದಲೇ ಆವರಿಸಿಕೊಂಡಿದೆ.

ಸಂಗೀತವೆಂದರೆ ನಾದ, ಸ್ವರ ಮಾಧುರ್ಯದ ಸಂಗಮ. ಪ್ರಪಂಚಾದ್ಯಂತ ಸಭಾಂಗಣದಿಂದ ಹಿಡಿದು ಬೀದಿ ಬೀದಿಗಳಲ್ಲಿ ಅಲ್ಲಲ್ಲಿ ಪ್ರಚಲಿತವಿರುವ ಸಂಗೀತದ ಪ್ರಸ್ತುತಿ ಆಗಿ ಜನರಿಗೆ ಮುದ ನೀಡುವ ಈ ಪ್ರಯತ್ನ ಯಶಸ್ವಿಯಾಗಿದೆ.

ಮನುಷ್ಯನ ಜೀವನದಲ್ಲಿ ಸಂಗೀತವು ಅವಿಭಾಜ್ಯ ಅಂಗವಾಗಿರುವುದು ಸರ್ವವಿದಿತ. ಹುಟ್ಟಿನಿಂದ ಸಾವಿನವರೆಗೆ ಧಾರ್ಮಿಕ ಸಾಮಾಜಿಕವಾಗಿ ಸಂಗೀತ ಬಳಸಲ್ಪಡುತ್ತದೆ. ನವ ರಸಗಳ ಪ್ರತಿ ಸಾಧನೆಗೆ ಗಾಯನದಿಂದಲೇ - ವಾದ್ಯ ಮುಖೇನನವೇ 'ಸಂಗೀತ' ಎಂಬುದು ಒಂದು ಮಾರ್ಗವಾಗಿರುವುದು-ವಾಹಕವಾಗಿರುವುದು.ದೈಹಿಕ-ಮಾನಸಿಕ ಆರೋಗ್ಯಕ್ಕೆ ಸಂಗೀತವೂ ಒಂದು ಚಿಕಿತ್ಸಕ ವಾಹಕವಾಗಿದೆಯೆಂದು ಇತ್ತೀಚಿನ ಸಂಶೋಧನೆಯಿಂದ ತಿಳಿದು ಬರುತ್ತದೆ.

ಸಂಗೀತ ದೇವತೆಗೆ ಸಾಷ್ಟಾಂಗ ವಂದನೆ. ಸ್ವರ, ರಾಗ ಸಂಯೋಗ ಎನ್ನುವ ಹಾಡು ಸಂಗೀತಾಭ್ಯಾಸಿಗಳ ಗಮನಕ್ಕೆ ಬಂದಿರಬಹುದು. ಸಂಗೀತ ಶ್ರವಣಾನಂದವಷ್ಟೇ ಅಲ್ಲ. ವ್ಯಕ್ತಿಯೋರ್ವನನ್ನು ಆಧ್ಯಾತ್ಮ ದಾರಿಯತ್ತ, ವಿಕಸನದ ಹಾದಿಯತ್ತ ಕೊಂಡೊಯ್ಯುವ ಸಾಧನವೆಂದರೂ ಅತಿಶಯೋಕ್ತಿಯಲ್ಲ,ನಾದವೆಂದರೆ ಅನಂತ. ನಾದವಿಲ್ಲದ ಸ್ಥಳವಿಲ್ಲ. ಹಾಗಾಗಿ ನಾದವೇ ಬ್ರಹ್ಮ. ನಾದದ ಝೇಂಕಾರ ಪ್ರಕೃತಿಯ ಸಕಲ ಚರಾಚರ ವಸ್ತುಗಳಲ್ಲಿ, ಗೀತೆ, ಗಾಯನ, ಸಂಗೀತೋಪಕರಣ, ನೃತ್ಯಗಳಲ್ಲಿ ಕಾಣಸಿಗುತ್ತದೆ. ವೇದಗಳಲ್ಲಿ ಒಂದಾದ ಸಾಮವೇದವು ಸಂಗೀತದ ನಿನಾದವನ್ನೇ ಅನುಸರಿಸಿದೆ.

ಶಾಸ್ತ್ರೀಯ ಸಂಗೀತವು ಆಧ್ಯಾತ್ಮಿಕ ಶಕ್ತಿಯ ವೃದ್ಧಿಗೆ, ಶಿಸ್ತುಬದ್ಧ ಜೀವನಕ್ಕೆ, ಭ್ರಾತೃತ್ವ, ಭಾವೈಕ್ಯ ಭಾವನೆಯ ಬೆಳವಣಿಗೆಗೆ ಪೂರಕವಾಗಿದೆ. ಹೀಗೆ ಶಾಸ್ತ್ರೀಯವಾದ ಸಂಗೀತ ಮುಂದಿನ ದಿನಗಳಲ್ಲಿ ಜಾನಪದ ಸಂಗೀತ ಮತ್ತು ನೃತ್ಯದ ಭಾಗವಾಯಿತು. ಗ್ರಾಮೀಣ ಭಾಗಗಳಲ್ಲಿ ಮನೆ, ಮನೆಗಳಲ್ಲಿ, ಬೀಡು ಬಿಡಾರಗಳಲ್ಲಿ ನಲಿದಾಡತೊಡಗಿತು. ಆ ಪರಂಪರೆ ಇಂದಿಗೂ ಮುಂದುವರೆದಿದೆ. ಜಾನಪದ ಹಾಡುಗಳಲ್ಲಿ ಸ್ಥಳೀಯ ಸೊಗಸಿದೆ.ನಾದ ಕಂಪನದ ಕಾರಣ ಮನದ ಪ್ರಜ್ಞೆ ಜಾಗೃತವಾಗುತ್ತದೆ.ಆತ್ಮ,ಪರಮಾತ್ಮನಲ್ಲಿ ಮನಸ್ಸು ಲೀನವಾಗುತ್ತದೆ. ಒಮ್ಮೆ ಮನಸ್ಸು ಆಧ್ಯಾತ್ಮ ಭಾವದಲ್ಲಿ ಜಾಗೃತವಾಯಿತೆಂದರೆ ಅಲ್ಲಿ ಪ್ರೀತಿ, ವಾತ್ಸಲ್ಯ, ಕರುಣೆ ಹರಿಯುತ್ತದೆ. ಆ ಭಾವನೆಯೇ ಔಷಧಿಯಾಗುತ್ತದೆ.

ನಮ್ಮ ಸುತ್ತಣ ಪರಿಸರವೂ ನಾದಮಯವಾಗಿದೆ. ನಮ್ಮ ದೇಹಕ್ಕೆ ನೀರೇ ಜೀವಾಧಾರ. ಮಂತ್ರೋಚ್ಚಾರಣೆಯ ಮೂಲಕ ಅದನ್ನು ಹೆಚ್ಚು ಚೈತನ್ಯಶೀಲರನ್ನಾಗಿಸಬಹುದು. ಸಂಗೀತದ ಸಕಾರಾತ್ಮಕ ಅನುಭವ ನಮ್ಮ ಮೇಲಾಗುತ್ತದೆ. ಸಂಗೀತದಿಂದ ಮನಸ್ಸು,ಪ್ರಜ್ಞೆ ಮತ್ತು ಸಂಸ್ಕಾರಗಳು ಶುದ್ಧವಾಗುತ್ತವೆ. ಅವೆಲ್ಲವೂ ಆತ್ಮನಿಗೆ ಸಂಬಂಧಿಸಿದುದಾಗಿದೆ. ದೈವದೊಂದಿಗೆ ಸಂಪರ್ಕವನ್ನು ಕಲ್ಪಿಸುತ್ತದೆ. ಪರಿಮಳಯುಕ್ತ ದ್ರವ್ಯದ ಸುಗಂಧ ಪ್ರಭಾವವಲಯದ ಮೇಲೆ ವಿಶೇಷ ಪರಿಣಾಮವನ್ನು ಉಂಟು ಮಾಡುತ್ತದೆ. ಮನಸ್ಸು, ಬುದ್ಧಿ ಮತ್ತು ವಿವೇಕವನ್ನು ಜಾಗೃತಗೊಳಿಸುತ್ತದೆ.ಹೀಗೆ ವಿವಿಧ ಸಂಗೀತೋಪಕರಣಗಳಿಂದ ಉಂಟಾಗುವ ಪ್ರಭಾವವು ಶರೀರದೊಳಗಿರುವ ಷಟ್ ಚಕ್ರಗಳ ಮೇಲೆ ಪ್ರಭಾವ ಬೀರುತ್ತದೆ. ಈ ಕಾರಣ ದೇಹವು ಶುದ್ಧವಾಗುತ್ತದೆ. ಖಿನ್ನತೆಯಿಂದ ಬಳಲುವವರಿಗೆ ಸಂಗೀತವೇ ಸಂಜೀವಿನಿಯಾಗುತ್ತದೆ.

### ನಾದ ಬ್ರಹ್ಮ ಸ್ವರೂಪ

ಸಂಗೀತಕ್ಕೆ ನಾದ-ಲಯಗಳು ಅಡಿಪಾಯ. ನಾ (ಪ್ರಾಣವಾಯು),ದ (ಪ್ರಾಣಾಗ್ನಿ.) ಇವೆರಡರ ಸಂಯೋಗದಿಂದ

ನಾದೋತ್ಪತ್ತಿ.ಕ್ರಮವಾಗಿ ಇದು ನಾಭಿ-ಹೃದಯ-ಕಂಠ- ನಾಲಗೆ-ಶಿರಸ್ಸಿನ ಮೂಲಕ ಪ್ರಕಟವಾಗುವುದೆಂಬುದನ್ನು ಸಂಗೀತ ಸಾಮ್ರಾಟ್ ಸಂತ ತ್ಯಾಗರಾಜರು ತಮ್ಮ ಜಗನ್ಮೋಹಿನಿ ರಾಗದ 'ಶೋಭಿಲ್ಲು ಸಪ್ತಸ್ವರ' ರಚನೆಯಲ್ಲಿ ತಿಳಿಸಿದ್ದಾರೆ.

'ತಾ' (ಶಂಕರ), 'ಳ' (ಪಾರ್ವತಿ) ಎಂಬುದು ಈ ಶಿವಶಿವೆಯರ ಹಸ್ತ ಘರ್ಷಣೆಯಿಂದ ಉಂಟಾಯಿತೆಂದು ಶಾಸ್ತ್ರ ಹೇಳುತ್ತದೆ. ಪ್ರಪಂಚದ ಉಗಮವೇ ಓಂಕಾರದಿಂದ ಉಂಟಾಗಿ ಪ್ರಣವ ಎನ್ನುವ ಇದು ಭಗವತ್ ಸ್ವರೂಪವೆನ್ನುವುದು ಬಲ್ಲವರ ಮಾತು. ಹಾಗಾಗಿ ಈ ನಾದವನ್ನು 'ಬ್ರಹ್ಮ' ಸ್ವರೂಪಿ ಎನ್ನುತ್ತಾರೆ. ನಾದ ಬ್ರಹ್ಮವೆನ್ನುತ್ತಾರೆ. ನಾದದಲ್ಲಿ ಅಹತ - ಅನಾಹತ ಎಂಬ ಎರಡು ಬಗೆಗಳು. ತಪಸ್ವಿಗಳಿಗೆ ಏಕ ಚಿತ್ತತೆಯಿಂದ ಗೋಚರಿಸುವುದೇ ಅನಾಹತ ನಾದ. ಇದು ಸಾಮಾನ್ಯರಿಗೆ ಶ್ರವಣ ಯೋಗ್ಯವಾದ 'ಅಹತ' ನಾದವೆನಿಸುತ್ತದೆ. ಇನ್ನು ತ್ಯಾಗರಾಜರು ತಮ್ಮ ಕಲ್ಯಾಣಿ ಸಂತರಾಗದ 'ನಾದ ಲೋಲುಪ್ತೈ" ರಚನೆಯಲ್ಲಿ ನಾದಾನು ಸಂಧಾನದಿಂದ ಮೋಕ್ಷ ಸಾಧ್ಯ-ಬ್ರಹ್ಮಾನಂದದ ಅನುಭವ ಸಾಧ್ಯವೆನ್ನುತ್ತಾರೆ. ಹಿಂದೋಳ ರಾಗದ 'ಸಾಮಜವರಗಮನ' ರಚನೆಯಲ್ಲಿ ಸಂಗೀತವು ಸಾಮವೇದ ಜೀತವಾದದ್ದು ಎನ್ನುತ್ತಾರೆ.'ನಾದ'ದ ಅಂಗಾಂಗಗಳಾದ ಸಪ್ತಸ್ವರಗಳು ಷಡ್ಜ, ಋಷಭ-ಗಾಂಧಾರ-ಮಧ್ಯಮ-ಸಂಚಯ-ದೈವತ-ನಿಷಾದಗಳು ಪರಮೇಶ್ವರನ ಸದ್ಯೋಜಾತಾದಿ ಪಂಚಮುಖಗಳಿಂದ ಹೊರಬಂದವು ಎಂದು ಚಿತ್ತರಂಜನಿ ರಾಗದ 'ನಾದತನು ಮನಿ ಶಂ' ರಚನೆಯಲ್ಲಿ ಸ್ಪಷ್ಟನೆ ನೀಡಿದ್ದಾರೆ. ವಿಶ್ವವ್ಯಾಪಿಯಾದ ಈ ಸಂಗೀತ ಕಲೆಯ ಕಲಿಕೆ-ಸಾಧನೆ-ಅನುಭವದಿಂದಾದ ಪ್ರಸ್ತುತಿಯು ವ್ಯಕ್ತಿಗತವಾದ ಕಲೆ. ಸಂಗೀತಗಾರನ ಬೆಳವಣಿಗೆ/ಸೊರಗುವಿಕೆಯು ಅವನ ಅಭಿವ್ಯಕ್ತಿಯಲ್ಲಿ ಗೋಚರಿಸುತ್ತದೆ. ಇದನ್ನು ಗುರುತಿಸಿದ ಶಕ್ತಿ ಕೇಳುಗನಿಗೂ ಇದ್ದಾಗ ಆಸ್ವಾದನೆಗೆ ಅರ್ಥ ಬರುತ್ತದೆ.ಹಾಗಾಗಿ ಸಂಗೀತಗಾರರು ಸ್ವಸ್ಥ ಮನಸ್ಸು-ದೇಹಾರೋಗ್ಯದಿಂದ ಪರಮಾತ್ಮನಲ್ಲಿ ನಂಬುಗೆಯಿಂದ ನಾದಾನುಸಂಧಾನ ಮಾಡಿ ಸಂಗೀತ ಪ್ರಸ್ತುತಿ ಆದಾಗ ಮಾತ್ರ ಉತ್ತಮ ಮಟ್ಟದ ಸಂಗೀತ ಹೊರ ಹೊಮ್ಮಲು ಸಾಧ್ಯವಾಯಿತು. ಹಾಗೆಯೇ ಶ್ರೋತೃವು ತನ್ನ ದೈಹಿಕ-ಮಾನಸಿಕ-ಸಂಗೀತ ಜ್ಞಾನಾರ್ಜನೆಯಿಂದ ಉತ್ತಮ ಸಂಗೀತದ ಆಸ್ವಾದನೆ ಸಾಧ್ಯ.

## ನಾದ ಯೋಗ

'ಬ್ರಹ್ಮ' ವಸ್ತುವನ್ನು ಅರಿಯಲು ಭಗವದ್ಗೀತೆಯಲ್ಲಿ ಹೇಳಿರುವ ಅನೇಕ ಮಾರ್ಗಗಳಲ್ಲಿ 'ನಾದ' ಯೋಗವೂ ಒಂದು.ಇದಕ್ಕೆ ಸದ್ಗುರುವಿನ ಅವಶ್ಯಕತೆ ಬಹು ಮುಖ್ಯ. ಸದ್ಗುರುವನ್ನು ಪಡೆಯಲು ಹೇಗೆ ಜನ್ಮಾಂತರಗಳಲ್ಲಿ ನಾವು ಅರ್ಜಿಸಿದ ಪುಣ್ಯ ಅವಶ್ಯಕ. ಹಾಗೆಯೇ ಗುರು ಉಪದೇಶ

**ಎಡದಿಂದ ಬಲಕ್ಕೆ**
1. ಮೀನು
2. ಗುಬ್ಬಚ್ಚಿ
3. ಬೆಕ್ಕು
4. ವರಾಹ
5. ಕಾಡು ಕೋಣ
6. ಜೇಡ
7. ಉರಗ
8. ಪಾರಿವಾಳ

**ಬಲದಿಂದ ಎಡಕ್ಕೆ**
9. ಸಿಂಹ
10. ಹೆಗ್ಗಣ
11. ಮೊಸಳೆ
12. ಚಿಟ್ಟೆ
13. ಇಲಿ

**ಮೇಲಿಂದ ಕೆಳಕ್ಕೆ**
14. ಆನೆ
15. ಕೋಗಿಲೆ
16. ಚಿರತೆ
17. ಜಿಂಕೆ
18. ಝುರಿ
19. ಹುಲಿ
20. ಕತ್ತೆ

**ಕೆಳಗಿನಿಂದ ಮೇಲಕ್ಕೆ**
21. ಹಲ್ಲಿ
22. ಗೂಬೆ
23. ಗರುಡ
24. ಕುದುರೆ
25. ಜಿರಳೆ
26. ಕಪ್ಪೆ
27. ಒಂಟೆ
28. ನರಿ
29. ತೋಳ

| ಕ್ರ.ಸಂ | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| 1 | 1 ಮೀ | ನು | ಲ್ಲಿ | 2 ಗು | ಬ್ಬ | ಚ್ಚಿ | 3 ಬೆ | ಕ್ಕು |
| 2 | 4 ವ | ರಾ | 21 ಹ | 9 ಸಿಂ | ಳ |  | 22 ಗೂ |  |
| 3 | 14 ಆ |  | 5 ಕಾ | ಡು | 15 ಕೋ | ಣ | ಗ್ಗ | 10 ಹೆ |
| 4 | ನೆ | 6 ಜೇ | ಡ | ರೆ | ಗಿ | ಳೆ | ಸ | ಮೊ |
| 5 | ಟ್ಟೆ | 12 ಚಿ 16 | ರು | ದು | ಲೆ | ರ | 17 ಜಿಂ |  |
| 6 | 7 ಉ | ರ | 23 ಗ | 24 ಕು | 18 ಝು | 25 ಜಿ | ಕೆ | ಪ್ಪೆ |
| 7 | ಟೆ | ತೆ | 19 ಹು | 8 ಪಾ | ರಿ | ವಾ | ಳ | 20 26 ಕ |
| 8 | 27 ಒಂ |  | ಅ | 13 ಇ | 28 ನ |  | 29 ತೋ | ತ್ತೆ |

ವನ್ನು ಪಡೆಯುವುದು ಗ್ರಹಿಸುವುದು ಸಾಧ್ಯವಾಗುವಂತಹ ಶಿಕ್ಷಕ ಸಿಗುವುದು ಅಷ್ಟೇ ಕಷ್ಟ. ಹೀಗೆ ನಮ್ಮ ಭವ್ಯ ಪರಂಪರೆಯನ್ನು ಬೆಳೆಸುವ ಜವಾಬ್ದಾರಿ ಉತ್ತಮ ಗುರು-ಉತ್ತಮ ಶಿಷ್ಯರಿಗೆ ಸೇರಿದೆ. ಈ 'ವಿಶ್ವ ಸಂಗೀತ ದಿನ' ಆಚರಣೆ ಸಾಂಕೇತಿಕ ಮಾತ್ರ. ಆದರೆ ಸಂಗೀತ ಸಾಧನೆ-ಚಿಂತನೆ-ಪ್ರಸಾರ-ಪ್ರಸ್ತುತಿ ಮುಂತಾದವುಗಳು ದಿನ ನಿತ್ಯವಾಗಬೇಕಾದವು. ಪ್ರತಿಕ್ಷಣದಲ್ಲೂ ನಮ್ಮ ರಕ್ತದ ಪ್ರತಿಕಣಗಳಲ್ಲೂ ಅಂತರ್ಯಾಮಿಯಾಗಿ ಹರಿಯುತ್ತಾ ಇದ್ದಲ್ಲಿ ಭಗವಂತನು ಗೋಚರಿಸಿಯಾನು.



ಮಹಾನ್ ಸಂಗೀತರಾಗಿದ್ದ ಟೈಗರ್, 'ಐದು ಘಂಟೆಗಳ ಸಂಗೀತ ಪ್ರಸ್ತುತಿಯಲ್ಲಿ 'ಇದೇ ಐದು ನಿಮಿಷಗಳೇ' ಆಹಾ ಎನ್ನುವಂತೆ ಹಾಡುಗಾರಿಕೆಗೂ, ಕೇಳುಗರಿಗೂ ಉಂಟಾಗುವುದು. ಇದೇ ಸಮಯದಲ್ಲೇ ಬ್ರಹ್ಮಾನಂದ ಸ್ವರೂಪಿ ಗೋಚರಿಸಿ ಮರೆಯಾಗುವುದು'ಎನ್ನುತ್ತಿದ್ದರಂತೆ. ಹಾಗೆಯೇ ದಾಸವರೇಣ್ಯರಾದ ಪುರಂದರದಾಸರು ಹೇಳುತ್ತಾರೆ.

ಮಲಗಿ ಹಾಡಿದರೆ ಕುಳಿತು ಕೇಳುವರು
ಕುಳಿತು ಪಾಡಿದರೆ ನಿಂತು ಕೇಳುವರು
ನಿಂತು ಪಾಡಿದರೆ ನಲಿದು ಕೇಳುವರು
ನಲಿದು ಪಾಡಿದರೆ ಸ್ವರ್ಗ ಸೂರೆ ಬಿಟ್ಟೆನೆಂಬ ಪುರಂದರ ವಿಠಲ ॥

ಇಲ್ಲಿ ಹೇಳಿರುವ ರೀತಿಯಲ್ಲಿ ವಿಠಲನ ನಲಿಸು ತಮ್ಮ ಜನ್ಮ ಸಾರ್ಥಕ ಮಾಡಿಕೊಳ್ಳುವ ನಿಟ್ಟಿನಲ್ಲಿ ಎಲ್ಲಾ ಸಂಗೀತಗಾರರು ಸಂಕಲ್ಪಿಸಿರುವರು ಅವಶ್ಯಕವಲ್ಲವೇ? ಸಂಗೀತ ಪ್ರಚಾರದಲ್ಲಿ ಆಕಾಶವಾಣಿ-ದೂರದರ್ಶನ ವಾಹಿನಿ-ಅಂತರ್ಜಾಲ ಮುಂತಾದವುಗಳ ಮಹತ್ತರ ಪಾತ್ರವನ್ನು ಅಲ್ಲಗಳೆಯುವಂತಿಲ್ಲ. ಅವು ಕಲಿಕೆ-ಆಸ್ವಾದನೆಗೆ ಸುಲಭೋಪಾಯಗಳಾಗಿಯೂ ತಮ್ಮ ಉಪಯುಕ್ತತೆಯನ್ನು ಸಾರುತ್ತಿವೆ.

## ಸಮರ್ಪಣಾ ಭಾವದ ಫಲಶ್ರುತಿ

ಹಿಂದಿಯಲ್ಲೊಂದು ಆಡುಮಾತಿದೆ. ಸ್ವರ ಹಿ ಈಶ್ವರ್ ಹೈ. ಸ್ಥೂಲವಾಗಿ ಹೇಳುವುದಾದರೆ ಸಂಗೀತವು ನಿಮ್ಮನ್ನು ದೇವರತ್ತ ಕೊಂಡೊಯ್ಯುತ್ತದೆ. ಅದನ್ನೇ ಸೂಕ್ಷ್ಮವಾಗಿ ಸ್ವಯಂ ಭೂಮಿನತ್ತ, ಅನಂತಾತ್ಮನತ್ತ ಕೊಂಡೊಯ್ಯುತ್ತದೆ ಎನ್ನಬಹುದು. ಎಲ್ಲವೂ ನಾನೇ, ನಾನೇ ಎಲ್ಲವೂ ಎನ್ನುವ ಬೆಳಕನ್ನು ತೋರುತ್ತದೆ. ಒಂದು ಸ್ವರವನ್ನು ಆಸಕ್ತಿದಾಯಕ ಸಂಗತಿ. ಚಿಕ್ಕವರಿದ್ದಾಗ ವರ್ಣಾಕ್ಷರ ಮಾಲಿಕೆಯನ್ನು ಕಲಿಯುವಾಗ ಸ್ವರಾಕ್ಷರಗಳನ್ನು, ವ್ಯಂಜನಾಕ್ಷರಗಳ ಪರಿಚಯ ವನ್ನು ಮಾಡಿಕೊಂಡಿದ್ದೆವು. ಸಪ್ತ ಸ್ವರಗಳ ನಡುವಿನ ಸಂಬಂಧವನ್ನು ಗ್ರಾಂಥಿಕವಾಗಿ ಅರ್ಥೈಸಿಕೊಂಡಿದ್ದೆವು. ಪ್ರತಿಯೊಂದು ಸ್ವರಾಲಾಪನೆಯ ಹಿಂದಿನ ಅನುಭೂತಿಯನ್ನು ತಿಳಿದುಕೊಳ್ಳಲು ಸಾಧ್ಯವಾಯಿತು. ಎರಡು ಸ್ವರಗಳ ನಡುವಿನ ಅಂತರವೇ ಶಬ್ದವಾಗಿದೆ. ಆ ಶಬ್ದದೊಳಗಿನ ಮಾಧುರ್ಯವೇ ಧ್ವನಿಯಾಗಿದೆ. ಆ ಮಾಧುರ್ಯವೇ ಮಧುರವಾಗಿ ಗಾನವಾಗಿ ಹೊರಹೊಮ್ಮಿತು. ರಾಗವಾಗಿ ಜನ್ಯವಾಯಿತು.

ಸ್ವರಗಳ ನಡುವಿನ ಅಂತರೇನು ಅನ್ನುವ ಪ್ರಶ್ನೆ ಆರಂಭದಲ್ಲಿರುತ್ತದೆ. ಅಭ್ಯಾಸ ಪ್ರೌಢವಾಗುತ್ತಾ ಹೋದಂತೆ ಸ್ವರಗಳ ನಡುವಿನ ಅಂತರ ಕಡಿಮೆಯಾಗುತ್ತಾ ಹೋಗುತ್ತದೆ. ಅವುಗಳ ಶ್ರುತಿ ಅಥವಾ ಮೈಕ್ರೋಟೋನ್‌ಗಳ ನಡುವಿನ ಸಂಬಂಧ ಮೊದಲಿಗಿಂತಲೂ ಹೆಚ್ಚು ಅರ್ಥವಾಗುತ್ತಾ ಹೋಗುತ್ತದೆ. ರಾಗದ ಆಲಾಪನೆಯಲ್ಲಿ ಉಂಟಾಗುವ ಅನು ಭೂತಿಯೇ ಸಮಾಧಿ ಸ್ಥಿತಿ. ಒಬ್ಬ ಸಂಗೀತಗಾರನಿಗೆ ಅದುವೇ ಧ್ಯಾನ. ಅಂತಹದ್ದೊಂದು ಸ್ಥಿತಿಯಲ್ಲಿ ಎಲ್ಲಾ ಸ್ವರಗಳು ಒಂದ ಕ್ಕೊಂದು ಬೆರೆತುಕೊಳ್ಳುತ್ತಾ ಹೋಗುತ್ತದೆ. ಏಕೀಕೃತ ಭಾವದಲ್ಲಿ ಒಂದಾಗಿ ಹೊರ ಹೊಮ್ಮುತ್ತದೆ. ಅದುವೇ ಪ್ರೀತಿಯಾಗಿ, ಪ್ರೇಮವಾಗಿ, ಮೋಹಕ ರೂಪಕವಾಗಿ, ಮಾಧುರ್ಯವಾಗಿ, ಇನಿದನಿಯಾಗಿ, ಸ್ವರ ಮೇಳವಾಗಿ ಆನಂದಾನುಭೂತಿಯಾಗಿ ಆವಿರ್ಭವಿಸುತ್ತದೆ. ಅಂತಹದ್ದೊಂದು ಅನುಭೂತಿಯೊಳಗೆ ಈಶ್ವರನಿದ್ದಾನೆ.

## ಅನಂತಾತ್ಮನೇ ನಾದಬ್ರಹ್ಮ

ಎಷ್ಟೋ ಮಂದಿ ಕೆಲಸ ಮಾಡುತ್ತಲೇ ಹಾಡು ಗುನುಗುತ್ತಿರುತ್ತಾರೆ. ಮತ್ತೆ ಕೆಲವರಿಗೆ ದಾರಿಯಲ್ಲಿ ನಡೆಯುವಾಗ, ವಾಹನ ಚಾಲನೆ ಮಾಡುವಾಗಲೂ ಸಂಗೀತ ಸಾಧನ ಕಿವಿಗೆ ಅನಿಸಿಕೊಳ್ಳುವ ಹವ್ಯಾಸ. ಹಾಗಂತ ಅವರೆಲ್ಲರನ್ನೂ ಸಂಗೀತ ಪ್ರೇಮಿಗಳು, ಸಂಗೀತದ ಪ್ರಭಾವವಕ್ಕೆ ಒಳಗಾಗಿ ಒತ್ತಡದಿಂದ ದೂರಾದವರು ಅಂತ ಅಭಿಪ್ರಾಯಿಸಲು ಸಾಧ್ಯವಿಲ್ಲ. ಶ್ರಾವ್ಯಕ್ಕೂ ಮನನಕ್ಕೂ ಸಾಕಷ್ಟು ವ್ಯತ್ಯಾಸವಿದೆ. ಸಾಮಾನ್ಯ ಸಂಗೀತವನ್ನು ಆಲಿಸುತ್ತಾ ಸಂತೋಷಪಡುತ್ತಾನೆಯೇ ಹೊರತು, ಸ್ಥಿರವಲ್ಲ. ಆದರೆ ಒಬ್ಬ ಆಧ್ಯಾತ್ಮ ಸಾಧಕ ಬಾಹ್ಯ ಧ್ವನಿಗೆ ತಲೆದೂಗುವುದಿಲ್ಲ. ಬದಲಿಗೆ, ಆತ ತನ್ನ ಆಂತರಿಕ, ಧ್ವನಿಗೆ, ಮಿಡಿತಕ್ಕೆ ತಲೆದೂಗುತ್ತಾನೆ. ಆ ಧ್ವನಿಯೊಳಗೆ ತನ್ನ ಉಸಿರನ್ನು ಸ್ಥಿರಗೊಳಿಸಿ ಕೊಳ್ಳಲು ಯತ್ನಿಸುತ್ತಾನೆ. ಆದರೆ ಆಂತರಿಕ ಧ್ವನಿಗೆ ಓಗೊಡುವುದು ಅಷ್ಟೇನು ಸುಲಭವಲ್ಲ. ಹಾಗೆ ಕೇಳುವವನ ಮನಸ್ಥಿತಿ ಅಷ್ಟರ ಮಟ್ಟಿಗೆ ತಹಬದಿಯಲ್ಲಿರಬೇಕು. ಅದಕ್ಕೆ ಅವಶ್ಯವಾದ ಶಿಸ್ತನ್ನು ಮೈಗೂಡಿಸಿಕೊಳ್ಳಬೇಕು.'ಯಾರು ಬಾಹ್ಯ ಪ್ರಪಂಚವನ್ನು ನೋಡುತ್ತಾರೋ ಅವನದು ಭ್ರಮಾಸ್ಥಿತಿ. ಆದರೆ ಯಾವಾತ ತನ್ನ ಆಂತರ್ಯವನ್ನು

ನೋಡಿಕೊಳ್ಳುತ್ತಾನೋ ಅವನದು ಜಾಗೃತಿ ಸ್ಥಿತಿ' ಎನ್ನುತ್ತಾನೆ ಕಾರ್ಲ್‌ಜಂಗ್.

## ವೇದಗಳಲ್ಲೂ ಸಂಗೀತವಿದೆ

ವೇದ, ಉಪನಿಷತ್ತಿನಲ್ಲಿರುವ ಮಂತ್ರಗಳಲ್ಲೂ ಸ್ವರ ಪ್ರಸ್ತಾರಗಳಿವೆ. ಮಂತ್ರಗಳನ್ನು ಉಚ್ಚರಿಸುವಾಗಲೂ, ಆರೋಹಣ, ಅವರೋಹಣ, ಹ್ರಸ್ವ, ದೀರ್ಘ ಸ್ವರಗಳತ್ತ ಗಮನ ಹರಿಸುತ್ತಾರೆ.ಹಾಗೆ ಕ್ರಮ ಪಾಠ ಮಾಡಿದಾಗ ಮಾತ್ರ ಮಂತ್ರಗಳ ಪ್ರಭಾವ ನಮ್ಮ ಮೇಲಾಗುತ್ತದೆ. ಇಲ್ಲವೆಂದಾದರೆ, ಅದು ಬಾಯಿ ನೋಯಿಸಿಕೊಳ್ಳುವ,ವೃಥಾ ಒದರುವ ಪಾಠವಾಗುತ್ತದೆ ಅಷ್ಟೇ.

## ಲೋಕವೆಲ್ಲಾ ನಾದಮಯ

ಜನವಾಣಿ ಬೇರು, ಕವಿವಾಣಿ ಹೂವು ಎನ್ನುವಂತೆ ಸಂಗೀತ ಜನಮನಗಳಲ್ಲಿ ಬೇರೂರಿದ ನಂತರ ದೇವವಾಣಿಯಾಯಿತು. ನಾದವೇ ವಿಶ್ವದ ಮೂಲ. ಮಹಾ ನಾದವೇ ವಿಶ್ವ ವಿಕಾಸ.ಗಚ್ಛಾನವಿದ್ದಮೇವೇದಂ ಜಗತ್ಸವಂ ಚರಾಚರರ ಎಂಬ ಆಗಮೋಕ್ತಿಯೇ ಇದೆ.

'ಶಬ್ದ ದಿನವಾವಿಂದ್ರಿಯ ರಸಮಂ ಶ್ರೋತ್ರದೊಳು ದ್ಭಾವಿಪುದು' ಎನ್ನುತ್ತಾನೆ ವ್ಯಾಕರಣ ಪಂಡಿತ ಕೇಶಿರಾಜ. ಮಂಗಲಕರ ದೇವತೋಪಾಸನೆಯನ್ನು 'ನಾದಶಬ್ದಮಯಿಂ ಘಂಟಾಂ ಸರ್ವವಿಘ್ನೋಪ ಶಾಂತಯೇ' ಎಂದು ಆರಂಭಿಸುತ್ತಾರೆ. ನಮ್ಮ ಜೀವ ಜನ್ಮವೂ ನಾದದ ಮೂಲಕ ಮೊದಲಾಗುತ್ತದೆ. ಸಕಲ ವಿಧ ಸಂಗೀತಕ್ಕೂ ನಾದವೇ ಮೂಲ.ಈ ನಾದದ ಲಹರಿ ವಿವಿಧ ರೀತಿಗಳಲ್ಲಿ ಹರಿದು ಬಹು ಸಂಗೀತ ಪದ್ಧತಿಗಳಿಗೆ ದಾರಿ ಮಾಡಿಕೊಟ್ಟಿದೆ.

## ಉಜ್ವಲ ಪರಂಪರೆ

ಭಾರತೀಯ ಸಂಗೀತ ಶಾಸ್ತ್ರದಲ್ಲಿ ಕರ್ನಾಟಕ ಪದ್ಧತಿಯನ್ನು ಪ್ರಾರಂಭಿಸಿ ಪರಂಪರೆಯನ್ನಾಗಿಸಿದವರು ತ್ಯಾಗರಾಜರು ಮತ್ತು ಪುರಂದರದಾಸರು. ಶಾಸ್ತ್ರೀಯವಾದ ಕರ್ನಾಟಕ ಸಂಗೀತದೊಂದಿಗೆ ಸಾಮೂಹಿಕ ಸಂಗೀತವೂ ಬೆಳೆದು ಬಂದಿತು. ಭಾರತದ ಸಂಸ್ಕೃತಿಯ ಮೂಲ ಪ್ರದೇಶಗಳಾದ ಗ್ರಾಮಗಳಲ್ಲಿ ಜನಪದ ಸಂಗೀತ ಜೀವಂತವಾಯಿತು.

ಶಾಸ್ತ್ರೀಯ ಸಂಗೀತವು ರಾಗ, ತಾಳ, ಲಯಗಳು ಪ್ರಧಾನವಾಗಿ ನಿರ್ದಿಷ್ಟ ಸ್ವರೂಪದ ಕೃತಿಗಳು ಹೊರಬಂದವು. ವೇದವನ್ನು ಘೋಷಣೆಗಾಗಿ ಅಳವಡಿಸಿಕೊಂಡಾಗಲೇ ರಾಗ, ತಾಳ,ಕಾಲ,ಗತಿಗಳ ಸೃಷ್ಟಿಯು ಅಗೋಚರವಾಗಿಯೇ ನಡೆಯಿತು. ಬರು ಬರುತ್ತಾ ಕಾಲಕ್ರಮದಲ್ಲಿ ಕೆಲವೊಂದು ಪಂಗಡದವರು ಹಾಡುಗಾರಿಕೆಯನ್ನೇ ತಮ್ಮ ವೃತ್ತಿಯಾಗಿ ಮಾಡಿಕೊಂಡು ಅದುವರೆಗೂ ನಿರಾಕಾರವಾಗಿದ್ದ ಮಾಧುರ್ಯ ರಾಶಿಗೆ ಒಂದು ನಿರ್ದಿಷ್ಟ ಸ್ವರೂಪವನ್ನು ಕೊಟ್ಟರು. ಇದನ್ನು ನಿರ್ದಿಷ್ಟರಾಗ, ತಾಳಗಳು ಅನುಸರಿಸಿದವು.

ಆದರೆ ಬಹುಸಂಖ್ಯಾತರಾದ ಗ್ರಾಮಸ್ಥರು ಯಾವಾಗಲೋ ತಮ್ಮ ದುಡಿಮೆಯ ಧನ್ಯತೆಗಾಗಿ ಭಕ್ತಿಶಕ್ತಿಯ ಆರಾಧನೆಗೆ ತಮಗೆ ತೋಚಿದ ರೀತಿಯಲ್ಲಿ ರಾಗಾಲಾಪನೆ ಮಾಡುತ್ತಾ ಬಂದರು. ಇದರೊಂದಿಗೆ ಭಿನ್ನವಾದ ಸಾಹಿತ್ಯ ಸೃಷ್ಟಿಯೂ ಆಯಿತು.ಅದುವೇ ಜನಪದ ಸಂಗೀತ ಮತ್ತು ಸಾಹಿತ್ಯವಾಯಿತು. ಏನಿದ್ದರೂ ಸಂಗೀತ ಶಾಸ್ತ್ರಕ್ಕೂ ಪ್ರಕೃತಿಗೂ ನಿಕಟವಾದ ಬಂಧುತ್ವವಿದೆ. ಪ್ರಕೃತಿಯ ನಿಯಮಗಳಾದ ಋತುಮಾನಗಳನ್ನು ಸೂಚಿಸುವ ರಾಗಗಳನ್ನು ನಾವು ಶಾಸ್ತ್ರೀಯ ಸಂಗೀತ ಮತ್ತು ಜನಪದ ಹಾಡುಗಳಲ್ಲಿ ಕಾಣಬಹುದಾಗಿದೆ.

## ಋತುವಿನೊಂದಿಗೆ ರಾಗ

ಉಷಃಕಾಲದಲ್ಲಿ ಪ್ರಭಾತ್ ರಾಗವನ್ನು ಹಾಡುವರು. ಹಿಮಕಾಲದಲ್ಲಿ ಶ್ರೀರಾಗವನ್ನು ಹಾಡುವುದು, ವಸಂತ ಋತುವಿನಲ್ಲಿ ಬಸಂತ್ ರಾಗವನ್ನು ಹಾಡುವುದು, ಮಳೆಗಾಲದಲ್ಲಿ ಮಲ್ಹಾರ್ ರಾಗಾಲಾಪನೆ ಇತ್ಯಾದಿಗಳನ್ನು ನಾವು ಶಾಸ್ತ್ರೀಯ ಸಂಗೀತದಲ್ಲಿ ಕಾಣುತ್ತೇವೆ. ಇದೇ ರೀತಿಯಲ್ಲಿ ಹಳ್ಳಿಗರು ಸಹ ವಿವಿಧ ಸಂದರ್ಭಗಳಲ್ಲಿ ವಿವಿಧ ರಾಗಗಳನ್ನು ವಿವಿಧ ರೀತಿಯನ್ನು ಹಾಡುತ್ತಾರೆ. ಸಂಗೀತಗಾರರು ವಾತಾಪಿ ಗಣಪತಿಂ ಭಜೆ ಎಂದರೆ, ಜನಪದದಲ್ಲಿ ಶರಣು ಶರಣುವಯ್ಯ ಗಣನಾಯ್ಕ ಎನ್ನುತ್ತಾರೆ.ದಾಸವರ್ಯರು ಕರುಣಾಕರ ನೀನೆಂಬುವ ದೇತಕೋ ಭರವಸೆ ಇಲ್ಲೆನೆಗೆ ಎಂದರೆ ಹಳ್ಳಿಗರು ಕರುಣಬಂದರೆ ಕಾಯ್ಯೋ ಮರಣ ಬಂದರೆ ಬಯ್ಯೋ ಕರುಣ ಕಲ್ಯಾಣ ಬಸವಣ್ಣ ಎಂದು ಹಾಡುತ್ತಾರೆ. ಸಾಯಂಕಾಲೇವನಾಂತೆ ಎಂಬ ಶ್ಲೋಕವನ್ನು ಶಾಸ್ತ್ರೀಯವಾಗಿ ಹಾಡಿದಾಗ ಉಂಟಾಗುವ ಪರಮಾನಂದವೇ ನಮಗೆ -

ಮಳೆ ಬಂದು ಬೆಳೆ ಬೆಳೆದು ಧರೆ ತಣಿಯ
ಲೆಂದು । ತಿಳಿಗೊಳಗಳುಕ್ಕಿ ತುರುಗಳು
ಕರಯಲೆಂದು । ನಳಿನಮುಖಿಯರು ಸುಪುತ್ರರ
ಪಡೆಯಲೆಂದು । ಇಳೆಯೊಳಗೆ ಹರಸಿದೆವು

ಬಾಲಕರು ಬಂದು ಎಂದು ಹಳ್ಳಿಯವರು ಅನ್ನುವುದನ್ನು ಕೇಳಿದಾಗಲೂ ಪರಮಾನಂದ ನಮ್ಮಲ್ಲಿ ಆವಿರ್ಭವಿಸುತ್ತದೆ.

ಜನಪದ ಸಂಗೀತದಲ್ಲಿ ಹಾಡುಗಾರಿಕೆಯ ಗೀತೆಯ ವಾಕ್ಯಗಳ ಅಥವಾ ಪದಗಳ ತರದ ಕಾಲಗತಿಯನ್ನು ಅನುಸರಿಸಲಾಗುತ್ತದೆಯೇ ಹೊರತು ಲಂಬಿಸಿದ ರಾಗಾಲಾಪನೆಗೆ ಅವಕಾಶ ಕೊಡುವುದಿಲ್ಲ. ಇಲ್ಲಿ ಚಿಮ್ಮಿ ಬರುವ ಮಾಧುರ್ಯವು ಯಾವುದಾದರೂ ಒಂದು ರಾಗ ಅಥವಾ ರಾಗ ಸಮುದಾಯದ ಸುತ್ತನ್ನು ಬಳಸಿಕೊಂಡಿರುತ್ತದೆ. ಜಾನಪದ ಗೀತೆಗಳನ್ನು ಹಾಡು

ವಾಗಲೂ ಸಹ ಯಾವುದಾದರೊಂದು ನಿರ್ದಿಷ್ಟ ರಾಗದಿಂದ ಆರಂಭಿಸಿ ಅನೇಕ ಗತಿ, ವಿಗತಿಗಳೊಂದಿಗೆ ಮತ್ತೆ ರಾಗದಲ್ಲಿ ಮುಕ್ತಾಯವಾಗುತ್ತದೆ.

ಮೊದಲು ಜನ್ಮವಾದದ್ದು ಜನವಾಣಿ. ಅದು ಬೆಳೆದು ಪರಿಷ್ಕೃತವಾಗಿ ವೃದ್ಧಿಯಾದುದು ಕವಿವಾಣಿ. ಜನವಾಣಿ ಬೇರು, ಕವಿವಾಣಿ ಹೂವು ಎಂಬುದು ದಾರ್ಶನಿಕರ ಅಭಿಮತ. ಶಾಸ್ತ್ರೀಯ ಸಂಗೀತದಲ್ಲಿ ಪ್ರೇಮ, ಭಕ್ತಿ, ವೈರಾಗ್ಯಾದಿ ಗುಣಗಳಿರುವಂತೆ ಜನಪದ ಗೀತೆಗಳಲ್ಲಿಯೂ ಸುಖ, ದುಃಖ, ಬಡತನ, ಬಯಕೆಗಳೆಲ್ಲವೂ ಇದೆ.ಶಾಸ್ತ್ರೀಯ ಸಂಗೀತ ಅಲಂಕೃತ ವಧು, ಜನಪದ ಸಂಗೀತ ನಿರಾಭರಣ ಸುಂದರಿ. ಎರಡೂ ಲಲಿತ ಕಲೆಗಳು,ಎರಡೂ ಕಲೆಗಳ ಮೂಲಕ ಜೀವನ ಸಾಕ್ಷಾತ್ಕಾರವಾಗುತ್ತದೆ. ಭಾರತೀಯರು ನಾದ ನಿನಾದಕ್ಕೆ ಮನ ಸೋತವರು. ದೇವವಾಣಿ ಜನವಾಣಿಯಾದಾಗ, ಜನವಾಣಿಯನ್ನು ದೇವವಾಣಿಯಾದಾಗ, ಜನವಾಣಿಯನ್ನು ದೇವವಾಣಿಯ ಪಟ್ಟಕ್ಕೇರಿಸಿದ ಮಾನವ ಮಾನವತೆಯ ವಾಣಿ ಹೃದಯ ಸಂಗೀತವಾಗಿ ಹೊಸಲೋಕವೇ ಆಗಿ ಮೆರೆಯಬಹುದು. ಸುಖ ವಿರಲಿ, ದುಃಖವಿರಲಿ,ಸಂತೋಷವಿರಲಿ, ಸಂಕಟವಿರಲಿ, ನಾದವೇ ಅದಕ್ಕೆ ನಿನಾದವಾಗುವುದು. ನಾದ ಬ್ರಹ್ಮನೇ ನಮ್ಮ ಎಲ್ಲಾ ನಡೆ,ನುಡಿಯ ನೇತಾರ. ನಾದೋಪಾಸನೆಯೇ ನಿರಂತರ ಶಕ್ತಿಯಾಗಿದೆ, ಇದೇ ಜೀವನ್ಮುಕ್ತಿಯೂ ಆಗಿದೆ.

## ದಿವ್ಯ ಧ್ಯಾನದ ಸಂಗೀತ

ಧ್ಯಾನ ಮಾಡುವುದೆಂದರೆ ಯೋಚನೆಗಳಿಂದ ಮುಕ್ತವಾಗುವ ಸ್ಥಿತಿಯನ್ನು ಹೊಂದುವುದು. ಸಂಗೀತವೂ ಇದಕ್ಕೆ ಸಾಧನವಾಗಬಲ್ಲದು. ಮನಸ್ಸನ್ನು ನಿರ್ಯೋಚನೆಯ ಸ್ಥಿತಿಗೆ ಕೊಂಡೊಯ್ಯುವುದೇ ಧ್ಯಾನ.ಈ ಧ್ಯಾನದಿಂದ, ಅಂದರೆ ಶೂನ್ಯ ಸ್ಥಿತಿಯಿಂದ ಏನಾದರೊಂದು ಹೊಳಹು ಹೊರ ಹೊಮ್ಮಿದರೆ ಅದುವೇ ಜ್ಞಾನೋದಯ ಝೆನ್, ಇಂತಹಾ ಧ್ಯಾನದ ಮೂಲಕ ಸಿದ್ಧಿ ಹೊಂದುವ ತಾತ್ತ್ವಿಕತೆ ಹಾಗೂ ಆಚರಣೆಗೆ ಸಂಬಂಧಪಟ್ಟ ಆಧ್ಯಾತ್ಮಿಕ ಪಂಥ. ಇದು ಬೌದ್ಧ ಮತದಿಂದ ಪ್ರೇರೇಪಣೆ ಪಡೆದು, ಚೀನಾ, ಜಪಾನ್‌ಗಳಲ್ಲಿ ಹಬ್ಬಿ ಬೆಳೆದು ನಿಂತಿದೆ. ಇಂದು ವಿಶ್ವಾದ್ಯಂತ ವಿವಿದೆಡೆಗಳಲ್ಲಿ ಝೆನ್ ಮತಾನುಯಾಯಿಗಳು ಈ ಪಂಥದ ಪರಿಪಾಲನೆ ಮಾಡುತ್ತ ಸಾಧನೆಯಲ್ಲಿ ಹಾದಿಯಲ್ಲಿ ನಡೆಯುತ್ತಿದ್ದಾರೆ.

## ವಿಧಾನಗಳು

ಝೆನ್ ಸಂಪೂರ್ಣವಾಗಿ ನೆಲಕ್ಕೆ ಬೆಸೆದುಕೊಂಡಿರುವ ಪಂಥ.ಇಲ್ಲಿ ದೇವತೆಗಳ ಆರಾಧನೆಗಿಂತ ಸ್ವಯಂ ಅರಿವಿನ ಮೂಲಕವೇ ಜ್ಞಾನವನ್ನು ಹೊಂದುವುದಕ್ಕೆ ಪ್ರಾಶಸ್ತ್ಯ ನೀಡಲಾಗಿದೆ.ಈ ಪಂಥವು ಜನರ ನಡುವೆ ಪ್ರಚಲಿತದಲ್ಲಿರುವ ಎಲ್ಲ ಪ್ರಕಾರಗಳನ್ನೂ, ಬಳಸಿಕೊಂಡು ತನ್ನನ್ನು ವಿಸ್ತರಿಸಿಕೊಳ್ಳುತ್ತ ಬಂದಿದೆ.ಸಾಲೆರಡು ಸಾಲುಗಳ ಕವಿತಾ ಪ್ರಕಾರವಾದ ಹಾಯ್ಕುಗಳು ಕೂಡ ಝೆನ್ ತತ್ವದ ಕೊಡುಗೆಯೇ. ಉಳಿದಂತೆ ಝೆನ್ ಚಿತ್ರ, ನರ್ತನ, ಸಂಗೀತಗಳೂ ಧ್ಯಾನಕ್ಕೆ ಬಳಕೆಯಾಗುತ್ತದೆ.

## ಮಧುರ ಮಾರ್ಗ

ಸಂಗೀತದೊಂದಿಗೆ ಧ್ಯಾನ ಮಾಡುವುದು ಒಂದು ಮಧುರವಾದ ಅನುಭವ. ಮನಸ್ಸು ಪ್ರಶಾಂತಗೊಳಿಸಲು ಸಂಗೀತ ಒಂದು ಅತ್ಯದ್ಭುತ ಸಾಧನ. ಸಂಗೀತಕ್ಕೆ ನಮ್ಮ ಅಲೆಮಾರಿ ಮನಸ್ಸನ್ನು ಒಂದೆಡೆ ಸೆಳೆದು ನಿಲ್ಲಿಸುವ ಸಾಮರ್ಥ್ಯವಿದೆ. ಆದರೆ ಎಲ್ಲ ಬಗೆಯ ಸಂಗೀತದಿಂದಲೂ ಇದು ಸಾಧ್ಯವಾಗುವುದಿಲ್ಲ. ತನ್ಮಯತೆ ಒಂದು ನಿರ್ದಿಷ್ಟ ಲಯವನ್ನು ಬೇಡುತ್ತದೆ.ಅಂತಹ ಸಂಗೀತವನ್ನು ಸಂಕಲ್ಪಿಸಿ ಧ್ಯಾನಕ್ಕೆಂದೇ ಸೂಚಿಸುತ್ತದೆ ಝೆನ್ ಪಂಥ.

ಜಪಾನ್‌ನಲ್ಲಿ ಉದ್ದನೆಯ ಬೊಂಬಿನಿಂದ ತಯಾರಿಸಿದ ಕೊಳಲುಗಳನ್ನು ಧ್ಯಾನಕ್ಕೆ ಹಿನ್ನೆಲೆಯಾಗಿ ಬಳಸುವುದುಂಟು. ದೊಡ್ಡ ಗಾತ್ರದ, ದೊಡ್ಡ ರಂಧ್ರಗಳ ಕೊಳಲಿನಿಂದ ಮಂದವಾದ, ಅಷ್ಟೇ ವಿಶಿಷ್ಟವಾದ ನಾದ ಹೊಮ್ಮುತ್ತದೆ. ಈ ನಾದದ ಕಂಪನವು ಕೇಳುಗರ ದೇಹದ ಕಂಪನದೊಂದಿಗೆ ಮಿಳಿತವಾಗಿ ತಾದಾತ್ಮ್ಯತೆ ಸಾಧಿಸುತ್ತದೆ.

ಈ ಕಂಪನಗಳ ಮಿಲನವು ಮನಸ್ಸನ್ನು ತಟಸ್ಥಗೊಳಿಸಿ ಧ್ಯಾನದ ಆಳಕ್ಕೆ ಇಳಿಯುವಂತೆ ಮಾಡುತ್ತದೆ. ಈ ಸ್ಥಿತಿಯೇ ದಿವ್ಯ ಆನಂದದ ಸ್ಥಿತಿ.ಅಷ್ಟು ತೀವ್ರವಾದ, ಗಾಢವಾದ ಸ್ಥಿತಿಗೆ ಏರಲಾಗದವರೂ ಕೂಡ ಈ ಕೊಳಲಿನ ಲಯದಲ್ಲಿ ಒಂದಾಗಿ ಕೆಲಕ್ಷಣಗಳವರೆಗಾದರೂ ಲೌಕಿಕ ಚಿಂತೆಗಳಿಂದ ಮುಕ್ತರಾಗಿರುತ್ತಾರೆ.

ಶೂನ್ಯಭಾವದಲ್ಲಿ ವಿಹರಿಸುವವರು ಆನಂದದ ಅನುಭೂತಿಯನ್ನು ಸವಿಯುತ್ತಾರೆ ಎನ್ನುತ್ತದೆ ಝೆನ್ ತತ್ತ್ವ ಕೊಳಲು ಮಾತ್ರವಲ್ಲ, ಇಂತಹದೇ ವಿಶಿಷ್ಟ ಮಂದ ನಿನಾದ ಹೊಮ್ಮಿಸುವ ಝೆನ್ ಡೋಲು ಕೂಡ ಧ್ಯಾನಕ್ಕೆ ಪೂರಕವಾಗಿ ವರ್ತಿಸುತ್ತ ನಮಗೆ ಆಧ್ಯಾತ್ಮಿಕ ಅನುಭವವನ್ನು ಸುಲಭವಾಗಿ ಕಟ್ಟಿ ಕೊಡುತ್ತದೆ. ಈ ಸಾಧನಗಳಷ್ಟೆ ಅಲ್ಲದೆ, ಮಳೆನೀರಿನ ತಾಳಬದ್ಧ ಸದ್ದು, ಹರಿಯುವ ನೀರಿನ ಜುಳುಜುಳು, ಹಕ್ಕಿಗಳ ಕಲರವ ಕೂಡ ಝೆನ್ ಪಾಲಿಗೆ ಧ್ಯಾನಭಾವವನ್ನು ಉದ್ದೀಪಿಸುವ ದಿವ್ಯ ಸಂಗೀತಗಳೇ ಆಗಿವೆ.



# ಹೃಷೀಕೇಶ್- ಒಂದು ಪ್ರಮುಖ ದೈವಭೂಮಿ





**ತೆಲುಗು ಮೂಲ : ಡಾ॥, ಎಸ್. ವೆಂಕಟಕುಮಾರ್**
**9871959817**
**ಅನುವಾದ: ಕೆ. ನರಸಿಂಹಮೂರ್ತಿ**

ಉತ್ತರಖಂಡ ರಾಜ್ಯದ ಡೆಹ್ರಡೂನ್ ಜಿಲ್ಲೆಯಲ್ಲಿಯ ಒಂದು ಪ್ರಖ್ಯಾತ ಪುಣ್ಯಸ್ಥಳ ಈ 'ಹೃಷಿಕೇಶ್' ಕಾಲಾಂತರದಲ್ಲಿ ಹೃಷಿಕೇಶ್ ಋಷಿಕೇಶವಾಗಿ ಮಾರ್ಪಟ್ಟಿದೆ. ಇದನ್ನು ದೇವ ಭೂಮಿಯೆಂದು ಸಹಾ ಕರೆಯುತ್ತಾರೆ. ಪಾವನ ಗಂಗಾನದಿಯ ತೀರದಲ್ಲಿರುವ ಈ ಪುಣ್ಯಕ್ಷೇತ್ರ ಹಿಂದೂಗಳಿಗೆ ಪರಮ ಪವಿತ್ರ ವಾದುದು. ಇದು ಹಿಮಾಲಯದ ಕೆಳಭಾಗದಲ್ಲಿದೆ. ಶ್ರೀ ರಾಮನು ರಾವಣನ ಸಂಹಾರದ ನಂತರ ಬ್ರಹ್ಮಹತ್ಯಾ ಪರಿಹಾರ ಕರ್ಮ ಗಳನ್ನು ಇಲ್ಲಿ ಆಚರಿಸಿದನೆಂದು ಪುರಾಣ ಕಥನ.

ಶ್ರೀರಾಮನು ಇಲ್ಲಿ ತಪಸ್ಸನ್ನು ಸಹಾ ಆಚರಿಸಿದನೆಂದೂ ಸಹಾ ಹೇಳುತ್ತಾರೆ. ಹೃಷಿಕೇಶ್ ಹರಿದ್ವಾರದಿಂದ 25 ಕಿ.ಮೀ. ದೂರದಲ್ಲಿದೆ. ಹೃಷಿಕೇಶದಾದ್ಯಂತ್ಯ ಪವಿತ್ರ ಗಂಗಾನದಿ ಪ್ರವ ಹರಿಸುತ್ತದೆ. ಗಂಗಾನದಿ ಹಿಮಾಲಯದ ಶಿವಾಲಿಕ್ ಬೆಟ್ಟಗಳನ್ನು ದಾಟಿ ಉತ್ತರ ಭಾರತದ ಮೈದಾನದಲ್ಲಿ ಪ್ರವೇಶಿಸುವ ಪ್ರದೇಶವೇ ಈ ಹೃಷಿಕೇಶ್.

ಹೃಷಿಕೇಶದಲ್ಲಿ ಹರಿಯುವ ಗಂಗಾ ತಟದಲ್ಲಿ ಅನೇಕ ದೇವಸ್ಥಾನಗಳಿವೆ. ಹೃಷಿಕೇಶದ ಪರಿಸರ ಪ್ರದೇಶದಲ್ಲಿ ಗಂಗಾ ತೀರದಲ್ಲಿ ಋಷಿ ಕುಬೇರಗಳಿದ್ದ ಕಾರಣ ಈ ಪ್ರಾಂತ್ಯವನ್ನು 'ಋಷಿಕೇಶ್'ಎಂಬ ಹೆಸರಿನಿಂದ ಕರೆಯಲಾಗಿದೆಯೆಂದು ವಿವರಿಸುತ್ತಾರೆ.

### ಋಷಿಕೇಶದಲ್ಲಿರುವ ಆಂಧ್ರಾಶ್ರಮ

ಹಿಮಾಲಯದ ತಪ್ಪಲಿನಲ್ಲಿರುವ ಋಷಿಕೇಶ್‌ನ ಆಂಧ್ರಾ ಶ್ರಮವು ತಿ.ತಿ.ದೇವಸ್ಥಾನದ ಅಧೀನದಲ್ಲಿದೆ. ಈ ಆಶ್ರಮದಲ್ಲಿ ಶ್ರೀವೇಂಕಟೇಶ ಆಲಯದೊಂದಿಗೆ ಇತರ ದೇವಸ್ಥಾನಗಳೂ ಇವೆ, ಇಲ್ಲಿರುವ ಚಂದ್ರಮೌಳೀಶ್ವರ, ವೇಂಕಟೇಶ ಸ್ವಾಮಿಯವ ರಿಗೆ ನಿತ್ಯಪೂಜೆ, ನೈವೇದ್ಯ, ಉತ್ಸವಗಳು, ಹಬ್ಬಗಳು ತಿ.ತಿ. ದೇವ ಸ್ಥಾನದ ನೇತೃತ್ವದಲ್ಲಿ ಜರಗುತ್ತವೆ. ತಿರುಮಲೆಯ ದೇವಾ ಲಯಗಳಲ್ಲಿ ಜರುಗುವಂಥಹ ಉತ್ಸವ ವೈಭವಗಳು, ಪೂಜೆ-ಪುನಸ್ಕಾರಗಳು ಇಲ್ಲಿಯೂ ಜರಗುವಂತೆ ಏರ್ಪಾಟು ಮಾಡ ಲಾಗಿದೆ.

1930 ನೇ ಇಸವಿಯಲ್ಲಿ ಸಚ್ಚಿದಾನಂದ ಸ್ವಾಮಿ ಯವರು ಇಲ್ಲಿಗೆ ದರ್ಶನಾರ್ಥಿಯಾಗಿ ಬಂದು, ದಕ್ಷಿಣ ರಾಜ್ಯ ಗಳಿಂದ ಹಿಮಾಲಯ ಕ್ಷೇತ್ರ ಸಂದರ್ಶನಾರ್ಥ ಬರುವ ಯಾತ್ರಿ ಕರ ಸಲುವಾಗಿ ಒಂದು ಆಶ್ರಮವನ್ನು ನಿರ್ಮಿಸ ಬೇಕೆಂದು ಭಾವಿಸಿದ್ದಾರೆ. ತಿ.ತಿ.ದೇ ಕೊಟ್ಟ ದತ್ತಿ, ಹಾಗೂ ಇತರ ಬಂಧ ಗಳನ್ನು ಶೇಖರಿಸಿದ್ದಾರೆ. ಶ್ರೀವೇಂಕಟೇಶ್ವರ ಸ್ವಾಮಿ, ಶ್ರೀದೇವಿ, ಭೂದೇವಿ ವಿಗ್ರಹಗಳ ಪ್ರತಿಷ್ಠಾಪನೆಯೊಂದಿಗೆ ಉತ್ಸವ ಮೂರ್ತಿ ಯನ್ನು ಸಹಾ ತಯಾರೂ ಮಾಡಿಸಿದ್ದಾರೆ. ಆರಂಭದಲ್ಲಿ ಈ ಆಂಧ್ರಾಶ್ರಮ ಧಮಕರ್ತರ ಮಂಡಲಿಯಿಂದ ಜರುಗಿಸಲಾಗು ತ್ತಿತ್ತು. ನಂತರದಲ್ಲಿ ಆಶ್ರಮದೊಂದಿಗೆ ತಿ.ತಿ.ದೇಯೂ ಸಹ ದೇಣಿಗೆ ನೀಡಲಾರಂಭಿಸಿತು.

### ಪ್ರತ್ಯೇಕಾಂಶಗಳು

ಶಿವಾಲಿಕ ಶ್ರೇಣಿಯಲ್ಲಿ 13 ಅತ್ಯಂತ ಪ್ರಮುಖ ದೇವತೆ ಗಳಲ್ಲೊಂದಾದ 'ಸತೀ ದೇವಿಯೆಂಬು ಕುಂಜಪುರಿ ಇಲ್ಲಿದೆ. ಪುರಾಣ ಪ್ರಕಾರ ಶಿವನು ತನ್ನ ಸತಿಯಾದ ಸತೀ ದೇವಿಯ ಶರೀರವನ್ನು ಕೈಲಾಸ ಪರ್ವತಕ್ಕೆ ತೆಗೆದುಕೊಂಡು ಹೋಗುವಾಗ ಆಕೆಯ ಒಂದು ಭಾಗ ಇಲ್ಲಿ ಬಿತ್ತೆಂದು ಹೇಳುತ್ತಾರೆ. ಈ ದೇವಾ

ಲಯ ಆಕೆಯ ಭಾಗ ಬಿದ್ದ ಪ್ರದೇಶದಲ್ಲಿಯೇ ನಿರ್ಮಾಣ ಗೊಂಡಿದೆ. ಋಷಿಕೇಶದಲ್ಲಿರುವ ಯೋಗ ಶಿಕ್ಷಣಾಲಯಗಳು ಭಕ್ತರನ್ನು ಆಕರ್ಷಿಸಲು ಮುಖ್ಯ ಕಾರಣ ಪವಿತ್ರ ಗಂಗಾ ಸ್ನಾನ, ಋಷಿಕೇಶದಲ್ಲಿನ ಯೋಗ ಶಿಕ್ಷಣಾಲಯಗಳು ಭಕ್ತರನ್ನು ಆಕರ್ಷಿ ಸುತ್ತವೆ.ಯೋಗ ಶಿಕ್ಷಣಾಲಯಗಳು ಭಕ್ತರನ್ನು ಆಕರ್ಷಿಸಲು ಮುಖ್ಯ ಕಾರಣ ಪವಿತ್ರ ಗಂಗಾಸ್ನಾನ, ಋಷಿಕೇಶದಲ್ಲಿ ಧ್ಯಾನ ಭಕ್ತರನ್ನು ಮೋಕ್ಷಕ್ಕೆ ತಲುಪಿಸುತ್ತದೆಂದು ಭಕ್ತರ ವಿಶ್ವಾಸ.

ಋಷಿಕೇಶದಲ್ಲಿ 120 ವರ್ಷಗಳ ಹಿಂದೆ ಸ್ಥಾಪಿಸಲಾದ ಕೈಲಾಸ ಆಶ್ರಮ ಬ್ರಹ್ಮ ವಿದ್ಯಾ ಪೀಠವಿದೆ. ಇಲ್ಲಿ ವಿದ್ಯಾರ್ಥಿಗಳಿಗೆ ಪ್ರಾಚೀನ ವೇದ ವಿದ್ಯೆಗಳನ್ನು ಹೇಳಿ ಕೊಡಲಾಗುತ್ತದೆ.

**ಸಂದರ್ಶಿಸಬಹುದಾದ ಆಲಯಗಳು:**

**ಕುಂಜಪುರಿ ಆಲಯ :** ಕುಂಜಪುರಿ ಆಲಯವು ಹೃಷಿ ಕೇಶ್ ಪಟ್ಟಣದಿಂದ 15 ಕಿ.ಮೀ ದೂರದಲ್ಲಿರುವ ಒಂದು ಚಿಕ್ಕ ಬೆಟ್ಟದ ಮೇಲಿದೆ. ಈ ಆಲಯದಲ್ಲಿ ಸೂರ್ಯೋದಯ ಹಾಗೂ ಸೂರ್ಯಾಪ್ರದ ವೇಳೆಯು ತುಂಬಾ ರಮಣೀಯವಾಗಿರುತ್ತವೆ. ಈ ಆಲಯವು ಶಿವಾಲಿಕ್ ಪರ್ವತ ಶ್ರೇಣಿ ಪಂಕ್ತಿಯಲ್ಲಿರುವ 13 ಪ್ರಮುಖ ದೇವಾಲಯಗಳಲ್ಲೊಂದು ಎನ್ನಬಹುದು.

**ಭಾರತ್ ಮಂದಿರ:** ಭಾರತ್ ಮಂದಿರ್ ಆದಿಶಂಕರಾ ಚಾರ್ಯರ ಹಸ್ತದಿಂದ ಪವಿತ್ರ ಗಂಗಾನದಿ ತಟದಲ್ಲಿ ಸ್ಥಾಪಿಸ ಲಾದ ಪುರಾತನ ವಿಷ್ಣು ಮೂರ್ತಿಯ ಆಲಯ. ಆಲಯದಲ್ಲಿ ರುವ ವಿಷ್ಣು ವಿಗ್ರಹವನ್ನು ಸಾಲಿಗ್ರಾಮ ಶಿಲೆಯನ್ನುಪಯೋಗಿಸಿ ತಯಾರಿಸಿದ್ದಾರೆ. ಈ ಶಿಲೆಯನ್ನು ಹಿಂದೂಗಳು ಬಹಳಾ ಪವಿತ್ರಾ ಗಂಗಾ ನದಿ ತಟದಲ್ಲಿ ಸ್ಥಾಪಿಸಲಾದ ಪುರಾತನ ವಿಷ್ಣುವಿಗ್ರಹ ವನ್ನು ಸಾಲಿಗ್ರಾಮ ಶಿಲೆಯನ್ನು ಉಪಯೋಗಿಸಿ ತಯಾರಿಸಿ ದ್ದಾರೆ. ಈ ಶಿಲೆಯನ್ನು ಹಿಂದೂಗಳು ಬಹಳಾ ಪವಿತ್ರವಾದು ದೆಂದು ಭಾವಿಸುತ್ತಾರೆ ಮತ್ತು ಆ ಶಿಲೆಯು ವಿಷ್ಣು ಸಾನ್ನಿಧ್ಯವನ್ನು ಸೂಚಿಸುತ್ತದೆ. ಎರಡೆರಡು ತ್ರಿಭುಜಗಳು ಒಂದೇ ಶೃಂಗದಲ್ಲಿ ಛೇದಿಸಿಕೊಂಡಿರುವ ಒಂದು ತ್ರಿಕೋಣಾಕೃತಿಯನ್ನು ಹೊಂದಿ ರುವ ಶ್ರೀಯಂತ್ರವನ್ನು ಆಲಯದ ಒಳಗಡೆ ಕಾಣಬಹುದು.

"ಬಸಂತ್ ಪಂಚಮಿ" ಎನ್ನುವ ಪ್ರಮುಖ ಹಿಂದೂ ಹಬ್ಬವನ್ನು ಈ ದೇವಾಲಯದಲ್ಲಿ ಅದ್ಭುತವಾಗಿ ಆಚರಿಸುತ್ತಾರೆ.

**ಲಕ್ಷ್ಮಣ್ ಆಲಯ :** ಋಷಿಕೇಶದಲ್ಲಿರುವ ಪ್ರಧಾನ ಆಲಯ ಗಳಲ್ಲೊಂದು ಎಂದು ಕರೆಯಲ್ಪಡುವ ಲಕ್ಷ್ಮಣ್ ಆಲಯವು ಪಟ್ಟಣದಿಂದ 5. ಕಿ.ಮೀ. ದೂರದಲ್ಲಿದೆ. ಲಕ್ಷ್ಮಣ್ ಆಲಯ ರಾಮನ್ ಸಹೋದರನಾದ ಲಕ್ಷ್ಮಣನಿಗೆ ನಾಮಕರಣ ಮಾಡಿದ ಒಂದು ಪುರಾತನ ಮಂದಿರ. ಈ ಆಲಯ ಪವಿತ್ರ ಗಂಗಾ ನದಿಯ ತೀರದಲ್ಲಿದೆ. ಆಲಯದ ಗೋಡೆಗಳ ಮೇಲೆ ಪ್ರಾಚೀ ನರು ಕೆತ್ತಿದ ಚಿತ್ರಗಳನ್ನು ಕಾಣಬಹುದು.

**ನೀಲಕಂಠ ಮಹದೇವ ಆಲಯ :** ನೀಲಕಂಠ ಮಹಾ ದೇವ ಆಲಯವು ಋಷಿಕೇಶ್ ಹತ್ತಿರ ಸಮುದ್ರಮಟ್ಟದಿಂದ ಸುಮಾರು 1330 ಮೀಟರ್ ಎತ್ತರದಲ್ಲಿರುವ ಪರ್ವತದ ಮೇಲಿ ರುವ ಮಂದಿರ. ಇಲ್ಲಿಂದ ಅದ್ಭುತವಾದ ವಿಷ್ಣುಕೂಟ್, ಬ್ರಹ್ಮ ಕೂಟ್ ಬೆಟ್ಟಗಳನ್ನು ಕಾಣಬಹುದು. ಈ ಆಲಯ ಶಿವನ ಅಂಕಿತವನ್ನು ಹೊಂದಿದೆ. ಭಕ್ತರು ಶ್ರವಣ ಮಾಸದ ಶಿವರಾತ್ರಿ ಯೊಂದು ಸಾವಿರಾರು ಸಂಖ್ಯೆಯಲ್ಲಿ ಈ ಆಲಯವನ್ನು ಸಂದ ರ್ಶಿಸುತ್ತಾರೆ.

**ಗೀತಾಭವನ್:** ಗೀತಾ ಭವನ್ ಗಂಗಾನದಿಯ ತೀರ ದಲ್ಲಿರುವ ಒಂದು ಪುರಾತನ ಮಂದಿರ. ಇಲ್ಲಿ ರಾಮಾಯಣ ಹಾಗೂ ಮಹಾಭಾರತಕ್ಕೆ ಸಂಬಂಧಿಸಿದ ಚಿತ್ರಗಳನ್ನು ಗೋಡೆಯ ಮೇಲೆ ಕೆತ್ತಿದ್ದಾರೆ. ಪವಿತ್ರ ಗಂಗಾನದಿಯಲ್ಲಿ ಸ್ನಾನ ಮಾಡಿದೆ ಭಕ್ತರು ಗೀತಾ ಭವನದಲ್ಲಿ ಧ್ಯಾನ ಮಾಡಬಹುದು ಹಾಗೂ ಸಾಧುಗಳ ಉಪದೇಶಗಳನ್ನು ಕೇಳಬಹುದು.

**ಓಂಕಾರಾನಂದ ಆಶ್ರಮ :** ಪ್ರಮುಖ ಹಿಂದೂ ತತ್ತ್ವವೇತ್ತ ಮಹರ್ಷಿಗಳಾದ ಓಂಕಾರಾನಂದ ಸರಸ್ವತಿ 1967 ನೇ ಇಸವಿ ಯಲ್ಲಿ ಪವಿತ್ರ ಗಂಗಾನದಿಯ ತಟದಲ್ಲಿ ಓಂಕಾರಾನಂದ ಆಶ್ರಮ ವನ್ನು ಸ್ಥಾಪಿಸಿದ್ದಾರೆ. ಈ ಆಶ್ರಮದಲ್ಲಿ ಆಧ್ಯಾತ್ಮಿಕ ಕಾರ್ಯ-




ಕಲಾಪಗಳು,ಯೋಗ ಶಿಕ್ಷಣ ತರಗತಿಗಳು, ಹಾಗೂ ಯಜ್ಞಗಳನ್ನು ಹಮ್ಮಿಕೊಳ್ಳುತ್ತಾರೆ.

**ಪಾರಮಾರ್ಥ ನಿಕೇತನ:** ಹಿಮಾಲಯದ ಮಧ್ಯೆಯಿರುವ ಈ ಆಶ್ರಮದಲ್ಲಿ ಆಯುರ್ವೇದ ಚಿಕಿತ್ಸೆಗಳನ್ನು ನೀಡುತ್ತಾರೆ ಪ್ರಜೆಗಳು ಯೋಗ, ಧ್ಯಾನ ಮತ್ತಿತರ ಪದ್ಧತಿಗಳನ್ನು ಕಲಿತುಕೊಳ್ಳಲು ಈ ಆಶ್ರಮಕ್ಕೆ, ಬರುತ್ತಾರೆ. ಪ್ರತಿವರ್ಷವೂ ಜರಗುವ ಅಂತರಾಷ್ಟ್ರೀಯ ಮಹೋತ್ಸವಗಳನ್ನು ವೀಕ್ಷಿಸಲು ಮಹನೀಯರು ಇಲ್ಲಿಗೆ ಬರುತ್ತಿರುತ್ತಾರೆ.

**ಶಿವಾನಂದ ಆಶ್ರಮ :** ಈ ಆಶ್ರಮವು ಕೇವಲ ಆಧ್ಯಾತ್ಮಿಕ ಸೇವೆಗಳನ್ನು ಮಾತ್ರ ಒದಗಿಸುತ್ತದೆ. ಇಲ್ಲಿ ಆಯುರ್ವೇದ, ಫಾರ್ಮಸಿ, ಯೋಗ ವೇದಾಂತ ಅಕಾಡಮಿ ಹಾಗೂ ಕಣ್ಣಿನ ಆಸ್ಪತ್ರೆಯಂಥ ಸಂಸ್ಥೆಗಳು ಈ ಆಶ್ರಮವನ್ನು ನಡೆಸುತ್ತವೆ.

**ವಶಿಷ್ಠ ಗುಹೆ:** ವಶಿಷ್ಠ ಗುಹೆಯನ್ನು ಧ್ಯಾನ ಮಾಡಲು ಸಾಧುಗಳು ಬಳಸುತ್ತಾರೆ. ಇಲ್ಲಿ ಪ್ರಸಿದ್ಧವಾದ ಅರಳಿಮರವು ಹುತ್ತಾಗಿ ಬೆಳೆದಿರುವ ಹೆಮ್ಮರಗಳ ಮಧ್ಯೆಯಿದೆ. ಹಿಂದೂಗಳು ಪವಿತ್ರವೆಂದು ಭಾವಿಸುವ ಶಿವಲಿಂಗವೂ ಗುಹೆಯ ಸಮೀಪದಲ್ಲಿದೆ.





**ಲಕ್ಷ್ಮಣ ಝೂಲಾಃ :** ಲಕ್ಷ್ಮಣ ಝೂಲಾ ಎನ್ನುವುದು ನದಿ, ದೇವಾಲಯ ಹಾಗೂ ಆಶ್ರಮಗಳ ಅದ್ಭುತವಾದ ವೀಕ್ಷಣೆಗಾಗಿ ಮಾಡಿರುವ 450 ಅಡಿಗಳ ಓಲಾಡುವ ತೂರು ಸೇತುವೆ. ರಾಮನ ತಮ್ಮನಾದ ಲಕ್ಷ್ಮಣನು ಹಿಂದೊಮ್ಮೆ ಗಂಗಾನದಿಯನ್ನು ದಾಟಲು ಈ ಸೇತುವೆಯನ್ನು ಬಳಸಿದ್ದನೆಂದು ಜನರ ನಂಬಿಕೆ. ಆದ್ದರಿಂದ ಈ ಸೇತುವೆಯನ್ನು 'ಲಕ್ಷ್ಮಣ್ ಝೂಲಾ' ಎಂದು ಕರೆಯುತ್ತಾರೆ.

**ರಾಂಝೂಲಾ :** "ಸ್ವರ್ಗ್" ಆಶ್ರಮ" ವನ್ನು "ಶಿವಾನಂದ ಆಶ್ರಮ" ದ ಜೊತೆ ಸೇರಿಸುವ ಈ ರಾಂಝೂಲಾ ಋಷಿಕೇಶ್‌ನ ಪ್ರಧಾನ ಆಕರ್ಷಣೆ ಸೇತುವೆಯೆಂದು ಹೇಳಬಹುದು. ಇದು ಲಕ್ಷ್ಮಣ ಝೂಲಾಕ್ಕಿಂತಲೂ ದೊಡ್ಡದು.

**ತ್ರಿವೇಣಿ ಘಾಟ್:** ಗಂಗಾ, ಯಮುನ ಹಾಗೂ ಸರಸ್ವತಿ ನದಿಗಳ ಸಂಗಮ ಪ್ರದೇಶವೇ ತ್ರಿವೇಣಿ ಘಾಟ್. ದೇವಾಲಯಗಳನ್ನು ಸಂದರ್ಶಿಸುವ ಮೊದಲು ಭಕ್ತರು ಈ ಸಂಗಮದಲ್ಲಿ ಮುಳುಗೇಳುತ್ತಾರೆ. ಸಾಯಂಕಾಲದ ವೇಳೆ ಭಕ್ತರು ಮಹಾರತಿಯ ಸಲುವಾಗಿ ಘಾಟ್‌ಗೆ ಬರುತ್ತಾರೆ.

**ಋಷಿಕುಂಡ್ :** ಋಷಿಕುಂಡ್ ಪವಿತ್ರವಾದ ತ್ರಿವೇಣಿ ಘಾಟ್‌ನಲ್ಲಿರುವ ಒಂದು ದೊಡ್ಡ ಸರೋವರ. ಈ ಸರೋವರದಲ್ಲಿ ರಾಮ ಮತ್ತು ಸೀತೆಯ ಅಂಕಿತದಲ್ಲಿ ನಿರ್ಮಿತವಾಗಿರುವ ರಘುನಾಥ್ ಆಲಯದ ಪ್ರತಿಬಿಂಬವನ್ನು ಕಾಣಬಹುದು.

ಈ ವಿಧವಾದ ಪವಿತ್ರ ಕ್ಷೇತ್ರವಾದ ಋಷಿಕೇಶ್‌ನನ್ನು ಸಂದರ್ಶಿಸಲು ದೇಶದ ಮೂಲೆ ಮೂಲೆಗಳಿಂದೊಂದೇ ಅಲ್ಲದೇ ವಿದೇಶಗಳಿಂದ ಕೂಡಾ ಇಲ್ಲಿಗೆ ಭಕ್ತರು ಅನೇಕ ಸಂಖ್ಯೆಯಲ್ಲಿ ಬರುತ್ತಾರೆ.

ತಿರುಮಲೆ ತಿರುಪತಿ ದೇವಸ್ಥಾನಗಳು. ತಿರುಪತಿ

# ಸಪ್ತಗಿರಿ

(ಆಧ್ಯಾತ್ಮಿಕ ಮಾಸಪತ್ರಿಕೆ)

## ಚಂದಾ ನಮೂದು ಪತ್ರ

ಹೆಸರು ಮತ್ತು ವಿಳಾಸ
(ಬಿಡಿ ಬಿಡಿ ಅಕ್ಷರಗಳಲ್ಲಿ
ಅರ್ಥ ವಾಗುವಂತೆ ಇಂಗ್ಲೀಷಿ ನಲ್ಲಿ
ಬರಿಯಿರಿ. ಪಿನ್ ಕೋಡ್
ಜೊತೆಗೆ ದೂರವಾಣಿ ಸಂಖ್ಯೆ
ತಪ್ಪದೇ ನಮೂದಿಸಿ)

(ಪಿನ್ ಕೋಡ್ ತಪ್ಪದೇ ನಮೂದಿಸಿ)

(ದೂರವಾಣಿ ಸಂಖ್ಯೆಯನ್ನು ನಮೂದಿಸಿ)

ಬೇಕಾಗುವ ಭಾಷೆ : ☐ ಕನ್ನಡ ☐ ತೆಲುಗು ☐ ಹಿಂದೀ ☐ ತಮಿಳು ☐ ಇಂಗ್ಲೀಷು ☐ ಸಂಸ್ಕೃತ

ವಾರ್ಷಿಕ / ಆಜೀವಚಂದಾ: ☐ ರೂ.60/- ☐ ರೂ.500/-

(ಸಂಸ್ಕೃತ ಸಪ್ತಗಿರಿಗಾಗಿ ಆಜೀವ ಚಂದಾ ಸ್ವೀಕರಿಸಲಾಗುವುದಿಲ್ಲ.)

ಚಂದಾ ಪುನರುದ್ಧರಣೆ :

(ಅ) ಚಂದಾ ನಂಬರು :

(ಆ) ಭಾಷೆ :

ಸಲ್ಲಿಸಿದ ಹಣ :

ಡಿ. ಡಿ. ಸಂಖ್ಯೆ :

(ಚೆಕ್ಕು, ಪಿ.ಒ.ಗಳನ್ನು ಸ್ವೀಕರಿಸುವುದಿಲ್ಲ )

ಸ್ಥಳ :

ದಿನಾಂಕ : ಚಂದಾದಾರರ ಸಹಿ

ಸಪ್ತಗಿರಿ ವಾರ್ಷಿಕ ಚಂದಾ ರೂ.60/-, ಆಜೀವ ಚಂದಾ ರೂ.500/- ಗಳು ಡಿ.ಡಿ/ಎಂ.ಓ. ಅನ್ನು ಪ್ರಧಾನ ಸಂಪಾದಕರು, ಸಪ್ತಗಿರಿ, ತಿ.ತಿ.ದೇ. ತಿರುಪತಿ. ಅವರ ಹೆಸರಿನಲ್ಲಿ ತೆಗೆಯಬೇಕು.

ಸಪ್ತಗಿರಿ ಚಂದಾದಾರರಾಗಿ ಸೇರ ಬಯಸುವವರು / ತಮ್ಮ ಚಂದಾವನ್ನು ಪುನರುದ್ಧರಿಸಿ ಕೊಳ್ಳುವವರು ಈ ಕೂಪನ್‌ನಲ್ಲಿ ಅಥವಾ ಬಿಳಿಹಾಳೆಯಲ್ಲಿ ಮೇಲೆ ತಿಳಿಸಿದಂತೆ ವಿವರಗಳನ್ನು ಬರೆದು ಕಳುಹಿಸಬೇಕು.

ಎಂ.ಓ. ಕಳುಹಿಸುವವರು ಅದರಲ್ಲಿ ನಿಮ್ಮ ಚಂದಾ ವಿವರಗಳನ್ನು ಬರೆದು ಈ ಕೆಳಗಿನ ವಿಳಾಸಕ್ಕೆ ಕಳಿಸಿ.

ನಮ್ಮ ವಿಳಾಸ - "ಪ್ರಧಾನಸಂಪಾದಕರು, ಸಪ್ತಗಿರಿ ಕಾರ್ಯಾಲಯ, ತಿ.ತಿ.ದೇ ಪ್ರೆಸ್ ಕಾಂಪೌಂಡ್, ಕೆ.ಟಿ.ರೋಡ್ಡು, ತಿರುಪತಿ - 517 507".

## ಸಪ್ತಗಿರಿ ಚಂದಾದಾರರಲ್ಲಿ ವಿನಂತಿ

ಸಪ್ತಗಿರಿ ಚಂದಾದಾರರು ತಮ್ಮ ಚಂದಾ ಹಣವನ್ನು ಕಳುಹಿಸು ವಾಗ (ಇ) ಎಂ.ಓ. / ಡಿ.ಡಿ.ಗಳನ್ನು ಕಳುಹಿಸುತ್ತಿರುವುದು ಸರಿಯಷ್ಟೆ. ಅಂಚೆಯಲ್ಲಿ ಪೋಸ್ಟಲ್ ಇ.ಎಂ.ಓ. ಕಳುಹಿಸುವಾಗ ಚಂದಾದಾರರು ಪೂರ್ತಿವಿಳಾಸ ವಿವರ ನೀಡಬೇಕು. ಈಗ "ಪೋಸ್ಟಲ್ ಇ.ಎಂ.ಓ" ವಿಧಾನದಲ್ಲಿ ಹಣ ಕಳುಹಿಸುವವರು ಬರೆಯುವ ಅವಕಾಶವೇ ಇರುವುದಿಲ್ಲ ವಾಗಿ, ನಿಮ್ಮ ವಿಳಾಸವನ್ನು ಅವರು ಕಂಪ್ಯೂಟರ್‌ನಲ್ಲಿ ಸಂಪೂರ್ಣವಾಗಿ ದಾಖಲುಮಾಡುವಂತೆ ನೋಡಿಕೊಳ್ಳ ಬೇಕು. ನಿಮ್ಮ ಪೂರ್ಣವಿಳಾಸ ಕಂ ಪ್ಯೂಟರಿನಲ್ಲಿ ದಾಖಲೆ ಆಗದಿದ್ದರೆ ಹಣ ಸೇರಿದರೂ ವಿಳಾಸವಿಲ್ಲದೆ ಸಪ್ತಗಿರಿ ನಿಮ್ಮನ್ನು ಸೇರುವುದಿಲ್ಲ.

ಅ. ತಾವು ಹಳೆಯ ಚಂದಾದಾರ ರಾಗಿದ್ದರೆ ಚಂದಾ ಪುನರುದ್ಧಾರ -ಪುನರ್ವೀಕರಿಸುವಾಗ ಇ.ಎಂ.ಓ / ಎಂ.ಓ ಮಾಡುವಾಗ ಚಂದಾ ಕ್ರಮ ಸಂಖ್ಯೆಯನ್ನು ತಪ್ಪದೆ ನಮೂದಿಸುವುದು.

ಆ. ಇದರಲ್ಲಿ ನಿಮ್ಮ ಊರಿನ ಪೂರ್ತಿ ವಿಳಾಸದೊಡನೆ ಅಂಚೆ ಪಿನ್ ಕೋಡ್ ಇರುವಂತೆ ನೋಡಿ ಕೊಳ್ಳಬೇಕು.

ಇ. ನಿಮಗೆ ಬೇಕಾದ ಭಾಷೆಯನ್ನು ಖಚಿತವಾಗಿ ನಮೂದಿಸಬೇಕು.


ಇವೆಲ್ಲ ವಿವರಗಳನ್ನೂ ಸರಿ ಯಾಗಿರುವಂತೆ ಮಾಡಿದ್ದೇ ಆದಲ್ಲಿ ಸಪ್ತಗಿರಿ ಖಚಿತವಾಗಿ ಶ್ರೀವೆಂಕಟೇ ಶ್ವರ ಸ್ವಾಮಿಯ ಅನುಗ್ರಹವನ್ನು ಹೊತ್ತು ನಿಮ್ಮ ಮನೆ ಸೇರುವುದು.


**ಸಪ್ತಗಿರಿ ಚಂದಾ ವಿವರಣೆಗಾಗಿ**

**0877- 2264359**

**0877-2264543**











# ಶೇಷಾದ್ರಿ ವಿಭುವಿನ ಸೇವೆಯಲ್ಲಿ ಧರ್ಮಕರ್ತ ಮಂಡಲಿ ನಿರ್ಣಯಗಳು

ಆಂಧ್ರಪ್ರದೇಶದ ಮುಖ್ಯಮಂತ್ರಿ ಗೌ ॥ ಶ್ರೀ ವೈ.ಎಸ್. ಜಗನ್ಮೋಹನ್ ರೆಡ್ಡಿಯವರ ಆದೇಶದ ಮೇರೆಗೆ ಕರೋನಾವೈರಸ್ ಕಾರಣವಾಗಿ ತಿರುಮಲೆ ತಿರುಪತಿ ದೇವಸ್ಥಾನಗಳ ಧರ್ಮಕರ್ತ ಮಂಡಲಿ 2020, ಮೇ 28 ರಂದು ತಿರುಮಲೆ ಅನ್ನಮಯ್ಯ ಭವನದಲ್ಲಿ ಧರ್ಮಕರ್ತ ಮಂಡಲಿ ಅಧ್ಯಕ್ಷರು ಶ್ರೀ. ವೈ.ವಿ.ಸುಬ್ಬಾರೆಡ್ಡಿಯವರು,ಪ್ರತ್ಯೇಕವಾಗಿ ಆಹ್ವಾನಿಸಲಾದ ಶ್ರೀ ಭೂಮನ ಕರುಣಾಕರ ರೆಡ್ಡಿ, ಶ್ರೀ ಚೆವಿರೆಡ್ಡಿ ಭಾಸ್ಕರ್ ರೆಡ್ಡಿ ಶ್ರೀ ಮೇಡಾ ಮಲ್ಲಿಕಾರ್ಜುನ ರೆಡ್ಡಿಯವರು ಮತ್ತು ತಿ.ತಿ.ದೇ. ಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ್ ಕುಮಾರ್ ಸಿಂಘಾಲ್,ಐ.ಎ.ಎಸ್.,ರವರು ಇತರ ಸದಸ್ಯರು ವಿಡಿಯೋ ಕಾನ್ಫರೆನ್ಸ್ ಮುಖಾಂತರ ಹಲವು ವಿಷಯಗಳ ಬಗ್ಗೆ ಚರ್ಚಿಸಿ ತೀರ್ಮಾನಗಳನ್ನು ಕೈಗೊಂಡರು ಅದರಲ್ಲಿ ಮುಖ್ಯವಾದವು.

ತಿ.ತಿ.ದೇ.ಗೆ ಭಕ್ತರು ಕಾಣಿಕೆಯ ರೂಪದಲ್ಲಿ ನೀಡಿರುವ ಆಸ್ತಿಗಳನ್ನು ಮಾರಾಟ ಮಾಡುವುದನ್ನು ಪೂರ್ತಿಯಾಗಿ ನಿಷೇಧಿಸಲಾಗಿದೆ ಎಂದು ತೀರ್ಮಾನಿಸಿದರು.ಭಕ್ತರು ನೀಡಿರುವ ಕಾಣಿಕೆಗಳು ಉಪಯೋಗಕ್ಕೆ ಯೋಗ್ಯವಿಲ್ಲದಿದ್ದರೂ ಭಕ್ತರ ಮನಸ್ಸಿಗೆ ನೋವಾಗದಂತೆ ಹೇಗೆ ಉಪಯೋಗಿಸಿ ಕೊಳ್ಳಬೇಕೆಂಬ ವಿಷಯದ ಬಗ್ಗೆ ನಿರ್ಣಯವನ್ನು ತೆಗೆದುಕೊಳ್ಳಬೇಕೆಂದು ಬೋರ್ಡ್ ಸದಸ್ಯರು, ಸ್ವಾಮಿಜೀಯವರು, ಭಕ್ತರು, ಒಂದು ಕಮಿಟಿಯನ್ನು ಹಾಕಬೇಕೆಂದು ತೀರ್ಮಾನವನ್ನು ತೆಗೆದುಕೊಂಡರು. ಕಮಿಟಿ ನೀಡುವ ನಿರ್ಧಾರದ ಮೇರೆಗೆ ಚರ್ಚಿಸಲಾಗುತ್ತದೆ.

ರಾಜ್ಯ ವಿಭಾಗಗೊಂಡ ನಂತರ ಆಂಧ್ರಪ್ರದೇಶ್ ರಾಜ್ಯದಲ್ಲಿ ಚಿಕ್ಕ ಮಕ್ಕಳ ಆಸ್ಪತ್ರೆಗಾಗಿ ಬಹಳ ತೊಂದರೆಯುಂಟಾಗು ತ್ತಿರುವುದರಿಂದ ಬರ್ಡ್ ಆಸ್ಪತ್ರೆಯಲ್ಲಿ ಆಗಲೀ,ಸ್ವಿಮ್ಸ್ ಆಸ್ಪತ್ರೆಯಲ್ಲಿ ಆಗಲೀ ಎಲ್ಲಿ ಅವಕಾಶವಿದ್ದರೆ ಅಲ್ಲಿ ತಕ್ಷಣವೇ ಚಿಕ್ಕ ಮಕ್ಕಳ ಆಸ್ಪತ್ರೆಯನ್ನು ಏರ್ಪಡಿಸಬೇಕು ಎಂದು ತೀರ್ಮಾನಿಸಿದರು.

ಭಕ್ತರು ಶ್ರೀ ವೇಂಕಟೇಶ್ವರ ಸ್ವಾಮಿಯವರ ದರ್ಶನಕ್ಕಾಗಿ ಕಾಯುತ್ತಿದ್ದಾರೆ. ಈ ವಿಷಯದ ಬಗ್ಗೆಯೂ ಬೋರ್ಡ್ ಸದಸ್ಯರೊಂದಿಗೆ ಸಮಾವೇಶ ನಡೆಸಲಾಯಿತು. ಲಾಕ್‌ಡೌನ್ ಮುಗಿದ ನಂತರ ರಾಜ್ಯದಿಂದ ಅನುಮತಿಯನ್ನು ಪಡೆದು ಕೊಂಡು ಆದಷ್ಟು ಬೇಗ ಭಕ್ತರಿಗೆ ಸ್ವಾಮಿಯವರ ದರ್ಶನವನ್ನು ಕಲ್ಪಿಸುತ್ತೇವೆ. ಕೋವಿಡ್-19 ಕಾರಣವಾಗಿ ಸಾಮಾಜಿಕ ದೂರವನ್ನು ಪಾಲಿಸುತ್ತಾ ತಕ್ಕ ಜಾಗ್ರತೆಯೊಂದಿಗೆ ಭಕ್ತರಿಗೆ ಯಾವ ರೀತಿಯಾಗಿ ದರ್ಶನವನ್ನು ಕಲ್ಪಿಸಬೇಕು.ಎಂಬ ಅಂಶದ ಬಗ್ಗೆ ಅಧಿಕಾರಿಗಳೊಂದಿಗೆ ಮಾತನಾಡಿ ತಕ್ಕ ಕ್ರಮ ಕೈಗೊಳ್ಳಲಾಗುತ್ತದೆ. ಇದೇ ರೀತಿ ರಾಜ್ಯದವತಿಯಿಂದ ಅನುಮತಿಯನ್ನು ಪಡೆದು ಕೆಲವು ಸೂಚನೆಗಳ ಪ್ರಕಾರ ಜೂನ್ 8 ರಿಂದ ಭಕ್ತರಿಗೆ ದರ್ಶನವನ್ನು ಕಲ್ಪಿಸಲಾಯಿತು.

*Edited and Published on behalf of T.T.Devasthanams by **Prof. K.Rajagopalan**, Phd., Chief Editor, T.T.D. and Printed at T.T.D. Press by **Sri P. Ramaraju,** M.A., Asst. Executive Officer (Press & Publications), T.T.D. Press, Tirupati - 517 507.*





ತಿರುಚಾನೂರು
ಶ್ರೀ ಪದ್ಮಾವತೀ ಅಮ್ಮನವರಿಗೆ
ವಸಂತೋತ್ಸವದ ಸಂದರ್ಭವಾಗಿ
ನಡೆದ ಸ್ನಪನತಿರುಮಂಜನ ದೃಶ್ಯಗಳು









ಶ್ರೀನಿವಾಸಮಂಗಾಪುರಂ
ಶ್ರೀ ಕಲ್ಯಾಣ ವೆಂಕಟೇಶ್ವರ ಸ್ವಾಮಿಯವರ
ವಸಂತೋತ್ಸವದ ದೃಶ್ಯಗಳು





SAPTHAGIRI (KANNADA) ILLUSTRATED MONTHLY Published by Tirumala Tirupati Devasthanams
printing on 30-06-2020. Regd. with the Registrar of Newspapers under "RNI" No.10742, Postal Regd.No.TRP/14 - 2018-2020
Licensed to post without prepayment No.PMGK/RNP/WPP-04/2018-2020



ತಿರುಪತಿ ಶ್ರೀ ಗೋವಿಂದರಾಜ ಸ್ವಾಮಿಯವರ
ಪುಷ್ಪಯಾಗ ಮಹೋತ್ಸವ